ಡಿಸೆಂಬರ್ 2010

ರೂ. 10/-

# ಯುಗರಶ್ಮಿ

ತ್ರೈಮಾಸಿಕ



- ❖ ನಿಷ್ಠೆ, ಸ್ವಾತಂತ್ರ್ಯ ಮತ್ತು ಶಾಂತಿ
- ❖ ಅಹ್ಮದಿಯತಿನ ವಸಂತ ಕಾಲ ಬರಲಿದೆ
- ❖ ಏಕ ಲೋಕ ನಿರ್ಮಾಣಕ್ಕೆ ಮಾರ್ಗಗಳು
- ❖ ಈಸಾ ಮಸೀಹರ ಮರಣ

"ನಿಮ್ಮ ಮುಖಗಳನ್ನು ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ತಿರುಗಿಸುವುದರಲ್ಲಿ ಪುಣ್ಯವೇನೂ ಇಲ್ಲ. ಆದರೆ ಅಲ್ಲಾಹನಲ್ಲಿ, ಅಂತ್ಯ ದಿನದಲ್ಲಿ, ದೇವದೂತರಲ್ಲಿ, (ಅಲ್ಲಾಹನ) ಗ್ರಂಥದಲ್ಲಿ ಮತ್ತು ಪ್ರವಾದಿಗಳಲ್ಲಿ ವಿಶ್ವಾಸವಿಡುವವರೂ ಅವನ ಮೇಲಿನ ಪ್ರೀತಿಯಿಂದ ತನ್ನ ಧನವನ್ನು ನಿಕಟ ಸಂಬಂಧಿಕರಿಗೆ, ಅನಾಥರಿಗೆ, ನಿರ್ಗತಿಕರಿಗೆ, ಪಥಿಕರಿಗೆ, ಸಹಾಯಾರ್ಥಿಗಳಿಗೆ ಮತ್ತು ದಾಸ್ಯವಿಮೋಚನೆಗೆ ವ್ಯಯಿಸುವವರೂ ನಮಾಝನ್ನು ಸ್ಥಿರಗೊಳಿಸುವವರು ಮತ್ತು ಝಕಾತ್ ನೀಡುವವರೂ ಯಾವುದಾದರೂ ಕರಾರು ಮಾಡಿದರೆ ಆ ಕರಾರನ್ನು ಪಾಲಿಸುವವರೂ ದಾರಿದ್ರ್ಯಾವಸ್ಥೆಯಲ್ಲಿ ಮತ್ತು ಸಂಕಟಾವಸ್ಥೆಯಲ್ಲಿ ಸಹನೆ ತೋರ್ಪಡಿಸುವವರೂ ಯುದ್ಧಕಾಲದಲ್ಲಿ ಸ್ಥೈರ್ಯ ತೋರಿಸುವವರೂ ನಿಜವಾದ ಪುಣ್ಯವಂತರಾಗಿದ್ದಾರೆ. ಅವರೇ ಸತ್ಯಪಾಲಕರು; ಅವರೇ ಯಥಾರ್ಥ ದೇವಭಕ್ತರು." ಪವಿತ್ರ ಖುರ್‌ನ್ **(2:178)**

10-23-1008/1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

**ಬಿಡಿ ಪ್ರತಿ : ರೂ. 10/-    ವಾರ್ಷಿಕ ಚಂದಾ : ರೂ. 40/-    ಅಂಚೆ ಮೂಲಕ : ರೂ. 50/-**

# ಯುಗರಶ್ಮಿ

## ವಿಷಯ ಸೂಚಿಕೆ

ಪುಟ

☆ ಭೂಮಿಯ ಮೇಲೆ ಎರಗುವ ದೇವಕೋಪ 1
☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
☆ ನಿಷ್ಠೆ, ಸ್ವಾತಂತ್ರ್ಯ ಮತ್ತು ಶಾಂತಿ 3
☆ ಅಹ್ಮದಿಯತಿನ ವಸಂತ ಕಾಲ ಬರಲಿದೆ 8
☆ ಏಕಲೋಕ ನಿರ್ಮಾಣಕ್ಕೆ ಮಾರ್ಗಗಳು 14
☆ ಈಸಾ ಮಸೀಹರ ಮರಣ 25
☆ ಮುಹಮ್ಮದ್ ಪೈಗಂಬರ್(ಸ) ಮತ್ತು ಧರ್ಮ ಸೌಹಾರ್ದ 32
☆ ಮುಸ್ಲಿಂ ಬಹುಜನರೇ ಗಮನಿಸಿರಿ 33
☆ ಇಸ್ಲಾಮಿನ ಪ್ರಾಥಮಿಕ ಪಾಠಗಳು 34
☆ 'ಸನ್ಮಾರ್ಗ'ದ ಕುಬುದ್ಧಿ 35
☆ ಪಾಕ್ ಮಂತ್ರಿಯ ಹೇಳಿಕೆ: ತಾಲಿಬಾನ್ ಇಸ್ಲಾಮಿನ ಅನುಯಾಯಿ ಇದ್ದಂತೆ! 36
☆ ಇಸ್ಲಾಮ್ ವಿಕೃತಿ : ಒಬಾಮ ವಿಷಾದ 36
☆ ದಲಿತರ ರೊಟ್ಟಿ ತಿಂದ ಮೇಲೆ ನಾಯಿಪಾಡು! 36
☆ 9/11 ದಾಳಿಗೆ ಅಮೇರಿಕದ್ದೇ ಕೈವಾಡ 37
☆ ಭೂಮಿಯನ್ನು ಹೋಲುವ ನೂತನ ಗ್ರಹ ಪತ್ತೆ 37
☆ ಬುರ್ಖಾ ನಿಷೇಧ : ಪ್ರತಿಭಟನೆ 37
☆ ಕೈ ಕಡಿದರೆ ಲಕ್ಷ ರೂ. ಬಹುಮಾನ 38
☆ ಲಂಚ ಕೇಳಿದರೆ ಕೈ ಕಡಿಯಿರಿ : ಸಿಎಂ 38
☆ ಆರೆಸ್ಸೆಸ್ ಸಿಮಿಗಿಂತ ಬೇರೆಯಲ್ಲ : ರಾಹುಲ್ 38
☆ ಅಮೆರಿಕಾದಲ್ಲೂ ಆಹಾರದ ಕೊರತೆ 38
☆ ಬ್ಲೇರ್ ನಾದಿನಿ ಇಸ್ಲಾಮ್‌ಗೆ 39
☆ ಸಂತಾನೋತ್ಪತ್ತಿಗೆ ಪುರುಷ ಬೇಕಾಗಿಲ್ಲ 39
☆ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಗತಿ 39
☆ ವಾರ್ತೆ, ನಿಧನ ವಾರ್ತೆ 40
☆ ಅಹ್ಮದಿಯರಿಗೆ ಸುತ್ತೋಲೆ 41
☆ ಉಗ್ರರ ಹಾದಿ ಇಸ್ಲಾಂ ಧರ್ಮವಲ್ಲ 44

ಮುಖಪುಟ ಚಿತ್ರ : ಮಸ್‌ಜಿದ್ ಅಲ್‌ಅಖ್ಸಾ, ಬೈತುಲ್ ಮುಖದ್ದಸ್, ಜೆರೂಸಲೇಮ್

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ನಿಗಾವಣೆ : ಮುಹಮ್ಮದ್ ಶಫೀಉಲ್ಲಾಹ್
ಸೌತ್ ಝೋನಲ್ ಅಮೀರ್,
ಅಹ್ಮದಿಯಾ ಮುಸ್ಲಿಂ ಜಮಾಅತ್,
ಕರ್ನಾಟಕ.

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 27 | ಡಿಸೆಂಬರ್ 2010 | ಫತಹ್ 1389 | ಸಂಚಿಕೆ : 4 |
|---|---|---|---|---|


## ಭೂಮಿಯ ಮೇಲೆ ಎರಗುವ ದೇವಕೋಪ

ಇದು ಯಾವಾಗ ಘಟಿಸುವುದು? ಕೆಲವು ದಿನಗಳಲ್ಲೋ ಕೆಲವು ವಾರಗಳಲ್ಲೋ ಕೆಲವು ಮಾಸಗಳಲ್ಲೋ ಕೆಲವು ವರ್ಷಗಳಲ್ಲೋ ಎಂದು ನನಗೆ ಅರುಹಲಾಗಿಲ್ಲ. ಸಮೀಪ ಕಾಲದಲ್ಲಿ ಅಥವಾ ದೂರ ಕಾಲದಲ್ಲಿ ಯಾವಾಗ ಅದು ಘಟಿಸಿದರೂ ಅದು ಒಂದು ಭೂಕಂಪ ಅಥವಾ ಬೇರೇನು ಆದರೂ ಅದರ ಕಾಠಿಣ್ಯ ಭಯಾನಕವಾಗಿರುವುದು. ನನ್ನ ಸಹಜೀವಿಗಳೊಂದಿಗೆ ನನಗೆ ಇರುವ ಅಗಾಧವಾದ ಅನುಕಂಪ ಕಾರಣದಿಂದ ನಾನು ನಿರ್ಬಂಧಿಸಲ್ಪಟ್ಟಿಲ್ಲವಾಗಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ. ಆದುದರಿಂದ ಆಲಿಸಿರಿ, ನಾನಿದೋ ನಿಮಗೆ ಎಚ್ಚರಿಕೆ ನೀಡಿದ್ದೇನೆ. ಭೂಮಿ ಇದೋ ಕೇಳುತ್ತಿದೆ. ಸದ್ವರ್ತನೆಯಿಂದ ಯಾರು ವ್ಯತಿಕ್ರಮಿಸುತ್ತಾರೋ ದುಷ್ಕೃತ್ಯಗಳ ಕಡೆಗೆ ಯಾರು ಬಾಗುತ್ತಾರೋ ಭೂಮಿಯನ್ನು ತಮ್ಮ ಪಾಪಗಳಿಂದ ಯಾರು ಕಲುಷಿತಗೊಳಿಸುತ್ತಾರೋ ಅವರು ಹಿಡಿಯಲ್ಪಡುವರು. ತನ್ನ ಕೋಪ ಭೂಮಿಯ ಮೇಲೆ ಎರಗಲಿದೆ ಎಂದು ಸರ್ವಶಕ್ತನಾದ ದೇವನು ಎಚ್ಚರಿಕೆ ನೀಡುತ್ತಾನೆ. ಯಾಕೆಂದರೆ ಭೂಮಿಯಲ್ಲಿ ಪಾಪ ಮತ್ತು ಕೆಡುಕು ತುಂಬಿಕೊಂಡಿವೆ.

("ಅಲ್ ಇನ್‌ದಾರ್" - 1905 ಎಪ್ರಿಲ್ 5 ವಿಜ್ಞಾಪನೆ)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ನೀವು ಸತ್ಕರ್ಮಗಳ ಸಹಿತ ಮುನ್ನಡೆಯಿರಿ. (ಮುಸ್ಲಿಂ)
- ತನ್ನ ಸಹೋದರನಿಗೆ ಸಹಾಯ ಮಾಡುವ ಕಾರ್ಯದಲ್ಲಿ ಮಗ್ನನಾಗಿರುವವನಿಗೆ ಅಲ್ಲಾಹನು ಸಹಾಯ ಮಾಡುತ್ತಾನೆ. (ಬುಖಾರಿ)
- ಸತ್ಯವಿಶ್ವಾಸಿ ತನ್ನ ಉತ್ತಮ ಸ್ವಭಾವದಿಂದ, ಬಹಳ ಹೆಚ್ಚಾಗಿ ವ್ರತಾನುಷ್ಠಾನ ಮಾಡುವವನ ಮತ್ತು ನಮಾಝ್ ನಿರ್ವಹಿಸುವವನ ಸ್ಥಾನವನ್ನು ಪಡೆಯುತ್ತಾನೆ. (ಅಬೂ ದಾವೂದ್)
- ಉತ್ತಮ ರೀತಿಯಲ್ಲಿ ಮಾತನಾಡುವುದು ಪುಣ್ಯ ಕರ್ಮವಾಗಿದೆ. (ಬುಖಾರಿ)
- ನಿಮ್ಮ ಉಡುಪುಗಳನ್ನು ತೊಳೆದು ಸ್ವಚ್ಛಗೊಳಿಸಿರಿ. ಕ್ಷೌರ ಮಾಡಿರಿ. ದಂತ ಶುದ್ಧಿ ಮಾಡಿರಿ. ಸೌಂದರ್ಯ ಮತ್ತು ಶುಚಿತ್ವದ ಬಗ್ಗೆ ಗಮನಿಸಿರಿ. (ಇಬ್ನು ಅಸಾಕಿರ್)
- ಅಲ್ಲಾಹನಿಗೆ ಅತ್ಯಂತ ಪ್ರೀತಿಯ ಕರ್ಮಗಳು ಯಾವುವೆಂದರೆ, ಆಯಾ ಸಮಯದಲ್ಲಿ ನಮಾಝ್ ಮಾಡುವುದು, ತಂದೆ ತಾಯಂದಿರೊಡನೆ ಉತ್ತಮವಾಗಿ ವರ್ತಿಸುವುದು ಮತ್ತು ಅಲ್ಲಾಹನ ಮಾರ್ಗದಲ್ಲಿ ಅತಿಯಾಗಿ ಶ್ರಮಪಡುವುದು. (ಬುಖಾರಿ)
- ಯಾರು ಜನರಿಗೆ ಮೊದಲು ಸಲಾಂ ಹೇಳುತ್ತಾನೋ ಅವನು ಜನರಲ್ಲಿ ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವನು. (ಬುಖಾರಿ)
- ಯಾವ ವ್ಯಕ್ತಿ ಅಲ್ಲಾಹ್ ಮತ್ತು ಅಂತ್ಯದಿನದ ಬಗ್ಗೆ ವಿಶ್ವಾಸವಿಟ್ಟಿದ್ದಾನೋ ಅವನು ತನ್ನ ನೆರೆಮನೆವಾಸಿಗೆ ತೊಂದರೆ ಕೊಡದಿರಲಿ. (ಬುಖಾರಿ)
- ನೀವು ರೋಗಿಯನ್ನು ಸಂದರ್ಶಿಸಿರಿ. ಹಸಿದವನಿಗೆ ಅನ್ನ ನೀಡಿರಿ. ಕೈದಿಯನ್ನು ಬಿಡುಗಡೆ ಮಾಡಿರಿ. (ಬುಖಾರಿ)
- ಶಕ್ತಿವಂತನಾದ ಮುಅ್‌ಮಿನ್ (ಸತ್ಯವಿಶ್ವಾಸಿ) ದುರ್ಬಲನಾದ ಮುಅ್‌ಮಿನ್‌ಗಿಂತ ಅಲ್ಲಾಹನಿಗೆ ಹೆಚ್ಚು ಪ್ರೀತಿಗೆ ಪಾತ್ರನಾಗುತ್ತಾನೆ. (ಬುಖಾರಿ)

**"LOVE FOR ALL**
**HATRED FOR NONE"**

**"ಎಲ್ಲರೊಡನೆ ಸ್ನೇಹ**
**ಯಾರೊಡನೆಯೂ ದ್ವೇಷವಿಲ್ಲ"**

**"ಇನ್‌ಸಾನಿಯತ್ ಝಿಂದಾಬಾದ್"**
**"ಮಾನವೀಯತೆ ಚಿರಕಾಲ ಬಾಳಲಿ"**

# ನಿಷ್ಠೆ, ಸ್ವಾತಂತ್ರ್ಯ ಮತ್ತು ಶಾಂತಿ

ಇಲ್ಲಿ ಜಮಾಯಿಸಿರುವ ಎಲ್ಲಾ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ – ಅಲ್ಲಾಹನು ನಿಮ್ಮ ಮೇಲೆ ಶಾಂತಿಯನ್ನೂ ಅನುಗ್ರಹಗಳನ್ನೂ ಸುರಿಸಲಿ. ಒಂದು ವರ್ಷ ದಾಟಿ ಹೋದ ನಂತರ ಸುಂದರವಾದ ಈ ಸಂಜೆ ವಿವಿಧ ಧರ್ಮಗಳ ಅನುಯಾಯಿಗಳಾದ ವಿವಿಧ ದೇಶಗಳಲ್ಲಿ ವಾಸಿಸುವ ಜನರು ನಮ್ಮ ಜಮಾಅತಿನ ಸದಸ್ಯರೊಂದಿಗೆ, ಅವರಿಗಿರುವ ಸಂಬಂಧದ ಕಾರಣದಿಂದ ಇಲ್ಲಿ ಒಟ್ಟಿಗೆ ಸೇರಿದ್ದಾರೆ. ಇಲ್ಲಿರುವವರಲ್ಲಿ ಬಹುತೇಕ ಜನರು ಬ್ರಿಟನಿನಲ್ಲಿ ವಾಸಿಸುವವರಾಗಿದ್ದಾರೆ.



**ಅಹ್ಮದಿಯಾ ಮುಸ್ಲಿಮ್ ಜಮಾಅತ್ ಲಂಡನಿನ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ ದಿನಾಂಕ 20-03-2010 ರಂದು ನಡೆಸಿದ ಪೀಸ್ ಸಿಂಪೋಸಿಯಂ (ಶಾಂತಿಗೆ ಸಂಬಂಧಿಸಿ ಚರ್ಚೆಯ ಸಮಾವೇಶ)ನಲ್ಲಿ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬರು ಮಾಡಿದ ಮುಖ್ಯ ಭಾಷಣ.**

ಕೆಲವರು ನಮ್ಮ ಹಳೆಯ ಮಿತ್ರರಾಗಿದ್ದಾರೆ. ಇತರರು ಹೊಸಬರಾಗಿದ್ದಾರೆ. ವಿವಿಧ ದೇಶಗಳಿಗೆ ಸೇರಿದ ವಿವಿಧ ಧರ್ಮಗಳ ಮತ್ತು ವಿವಿಧ ಸಂಸ್ಕೃತಿಗಳ ಜನರು ಇಲ್ಲಿಗೆ ಬಂದು ಸೇರಿ ತಮ್ಮ ಅಮೂಲ್ಯ ಸಮಯವನ್ನು ನಮಗೋಸ್ಕರ ವಿನಿಯೋಗಿಸಿದುದರಿಂದ ಅವರೆಲ್ಲರೂ ಶ್ರೇಷ್ಠ ಗುಣಸ್ವಭಾವ ಹೊಂದಿದ ಸಭ್ಯ ಜನರೂ ಈ ಕಾಲದಲ್ಲಿ ನಿಷ್ಕಳಂಕರಾದ ಪ್ರತಿಯೊಬ್ಬ ಮನುಷ್ಯ ತೀವ್ರವಾಗಿ ಆಶಿಸುವ ಗುರಿಯನ್ನು ತಲಪಲು ಬಯಸುವವರೂ ಆಗಿದ್ದಾರೆಂದು ಸಾಬೀತಾಗುತ್ತದೆ. ಈ ದಿನ ನಾವು ಇಲ್ಲಿ ಒಟ್ಟಿಗೆ ಸೇರಿರುವುದು ನಮ್ಮ ಹೃದಯಕ್ಕೆ ಸಾಂತ್ವನ ಮತ್ತು ತೃಪ್ತಿ ನೀಡಬಲ್ಲ ವಿಷಯದ ಬಗ್ಗೆ ಮಾತನಾಡಲು ಮತ್ತು ಆಲಿಸಲಿಕ್ಕೋಸ್ಕರವಾಗಿದೆ. ಆ ವಿಷಯ "ಶಾಂತಿ" ಆಗಿದೆ.

ಶಾಂತಿಯು ಹೃದಯಕ್ಕೆ ಸಾಂತ್ವನ ಖಾತರಿಪಡಿಸುತ್ತದೆ. ಅದು ನಮ್ಮ ಮನೆಗೆ ಪ್ರಶಾಂತತೆಯನ್ನು ಖಾತರಿಪಡಿಸುತ್ತದೆ. ಅದು ಸಮಾಜದ ಪ್ರಗತಿಗೆ ಮತ್ತು ಸಮೃದ್ಧಿಗೆ ಪೂರಕವಾಗಿದೆ. ನಮ್ಮ ದೇಶದ ಅಭಿವೃದ್ಧಿಯನ್ನು ಅದು ಖಾತರಿಪಡಿಸುತ್ತದೆ. ಶಾಂತಿಯು ಇಷ್ಟೆಲ್ಲಾ ರೀತಿಯಲ್ಲಿ ನಮಗೆ ಹಿತಕರವಾಗಿರುವಾಗ ಅದು ನಮಗೆ ಆಕರ್ಷಕವಾಗಿ ಕಾಣದಿರಬಹುದೆ? ಪ್ರತಿಯೊಬ್ಬ ಒಳ್ಳೆಯ ಮನುಷ್ಯನು ಹೃತ್ಪೂರ್ವಕವಾಗಿ ಅದನ್ನು ತೀವ್ರವಾಗಿ ಆಶಿಸದಿರುವುದಾದರೂ ಹೇಗೆ?

ಯಾವುದಾದರೂ ಒಂದನ್ನು ಗಳಿಸಲು ಅದಕ್ಕೋಸ್ಕರ ಕಠಿಣ ಪರಿಶ್ರಮ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ತ್ಯಾಗಗಳನ್ನು ಮಾಡ ಬೇಕಾಗುತ್ತದೆ. ನಮ್ಮ ಗುರಿಯು ಉನ್ನತವಾಗಿದ್ದರೆ ಅದಕ್ಕಾಗಿ ಮಾಡಬೇಕಾದ ತ್ಯಾಗವೂ ಉನ್ನತ ಮಟ್ಟದ್ದಾಗಿರಬೇಕಾಗುತ್ತದೆ.

ಮನುಷ್ಯರ ಸ್ವಭಾವ ಸುಧಾರಣೆಗೆ ಒಂದು ನಿಯಮಾವಳಿಯನ್ನು ರೂಪಿಸುವುದು ಆವಶ್ಯಕವಾಗಿದೆ. ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ ತನ್ನ ಭಾವೋದ್ವೇಗಗಳನ್ನು ತ್ಯಾಗಮಾಡಿ ಅನ್ಯರ ಭಾವನೆಗಳನ್ನೂ ಸಂವೇದನೆಗಳನ್ನೂ ಗೌರವಿಸಬೇಕು. ಪ್ರತಿಯೊಬ್ಬನೂ ಆತ್ಮಸಂತೃಪ್ತಿಯನ್ನು ಹೊಂದಬೇಕು ಮತ್ತು ಅನ್ಯರ ಸಂಪತ್ತನ್ನು ಅಸೂಯೆಯಿಂದ ಕಾಣುವುದರಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು; ಬಡವರಿಗೆ ಸಹಾಯ ಮಾಡಬೇಕು ಮತ್ತು ತನ್ನ ಸಾಧನ ಸಂಪತ್ತುಗಳ ಮಿತಿಯಲ್ಲಿ ಜೀವಿಸಿ ಸಂತೋಷಪಡಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ನೀವು ಯಾವುದೇ ಹಂತದಲ್ಲಿ ಶಾಂತಿಯನ್ನು ಸ್ಥಾಪಿಸಲು ಬಯಸುವಿರಾದರೂ ನೀವು ಉನ್ನತ ನೈತಿಕ ಮೌಲ್ಯಗಳನ್ನು ಹೊಂದಿ ಅವುಗಳನ್ನು ಜೀವಿತದಲ್ಲಿ ಅಳವಡಿಸಿ, ಪ್ರಕಟಿಸುವುದು ಆವಶ್ಯಕವಾಗಿದೆ. ಇದಕ್ಕೋಸ್ಕರ ಮಾರ್ಗ ಸೂಚಿಗಳನ್ನು ರೂಪಿಸಬೇಕು.

ಹಝ್ರತ್ ಪೈಗಂಬರರು (ಅವರ ಮೇಲೆ ಅಲ್ಲಾಹನ ಶಾಂತಿಯೂ ಆಶೀರ್ವಾದಗಳೂ ಸುರಿಸಲ್ಪಡಲಿ) ನಮಗೊಂದು ಸುವರ್ಣ ನೀತಿಯನ್ನು ಕಲಿಸಿದ್ದಾರೆ. ನೀವು ನಿಮಗೋಸ್ಕರ ಯಾವುದನ್ನು ಆಯ್ಕೆ ಮಾಡುತ್ತೀರೋ ಅದನ್ನೇ ನಿಮ್ಮ ಸಹೋದರರಿಗೋಸ್ಕರ ಆಯ್ಕೆ ಮಾಡಿರಿ. ಇದು ಅವರು ನೀಡಿದ ಉಪದೇಶವಾಗಿದೆ. ಹೃದಯದ ಅಸಂತೃಪ್ತಿಯ ಕಾರಣದಿಂದಲೇ ಅಶಾಂತಿಯು ಉದ್ಭವಿಸುತ್ತದೆ.

ಶೋಷಣೆ ಅನುಭವಿಸುವಾಗ, ದೌರ್ಜನ್ಯ ಪೀಡಿತರಾಗುವಾಗ, ಹೀನೈಸಲ್ಪಡುವಾಗ, ನ್ಯಾಯದೊರಕುವ ಪ್ರತೀಕ್ಷೆ ಇಲ್ಲದಿರುವಾಗ, ಬಡವರ ಮತ್ತು ಐಶ್ವರ್ಯವಂತರ ಮಧ್ಯೆ ಅಂತರ ಹೆಚ್ಚುವಾಗ, ಪ್ರಗತಿಹೊಂದಲು ಸಮಾನ ಅವಕಾಶ ಇಲ್ಲದಿರುವಾಗ, ವ್ಯಕ್ತಿಯ ನಂಬಿಕೆಗಳಲ್ಲಿ ಶಕ್ತಿಶಾಲಿಗಳ ಹಸ್ತಕ್ಷೇಪ ಉಂಟಾಗುವಾಗ, ಒಂದು ದೇಶ ಇನ್ನೊಂದು ದೇಶದ ಮೇಲೆ ಅಧಿಕಾರ ಚಲಾಯಿಸುವಾಗ ಮತ್ತು ಒಂದು ಶಕ್ತಿಶಾಲಿ ದೇಶ ಬಡದೇಶಕ್ಕೆ ನೆರವು ನೀಡುವ ನೆಪದಲ್ಲಿ ಅಲ್ಲಿನ ಸಂಪನ್ಮೂಲಗಳನ್ನು ಸ್ವಾಧೀನಪಡಿಸಿಕೊಳ್ಳಲು ಯತ್ನಿಸುವಾಗ ಅಶಾಂತಿಯು ಉದ್ಭವಿಸುತ್ತದೆ.


ನಿಮಗೊಸ್ಕರ ಆಯ್ಕೆ ಮಾಡುವುದನ್ನೇ ನಿಮ್ಮ ಸಹೋದರ ನಿಗೋಸ್ಕರ ಆಯ್ಕೆ ಮಾಡಿರಿ ಎಂಬ ಸುವರ್ಣ ನೀತಿಯನ್ನು ಮರೆತು ಬಿಡುವಾಗ ಮೇಲೆ ವಿವರಿಸಿದವುಗಳು ಮತ್ತು ಇನ್ನಿತರ ಅನೇಕ ಸಮಾನ ಘಟಕಗಳು ಶಾಂತಿಯನ್ನು ಛಿದ್ರಗೊಳಿಸುತ್ತದೆ.

ಈ ಸುವರ್ಣ ನೀತಿಯನ್ನು ಅನುಷ್ಠಾನಕ್ಕೆ ತಂದು ಜೀವಿಸುವುದು ಅತ್ಯಂತ ಕಷ್ಟಕರವಾಗಿದೆ. ಶಾಂತಿ ಸ್ಥಾಪನೆಗೆ ಸಹಾಯಕವಾದ ಮುಖ್ಯ ಘಟಕಗಳ ಬಗ್ಗೆ ನಾವು ಚಿಂತಿಸುವುದಾದರೆ, ತಮ್ಮ ಸ್ವಂತ ಲಾಭದ ಬಗ್ಗೆ ಮಾತ್ರ ಚಿಂತಿಸುವ ಸ್ವಾರ್ಥಿಗಳನ್ನು ಹೊರತುಪಡಿಸಿದರೂ ಶಾಂತಿಯನ್ನು ನಿಜವಾಗಿ ಆಶಿಸುವವರು ಕೂಡ ನಾನು ಪ್ರಸ್ತಾಪಿಸಿದ ಸುವರ್ಣ ನೀತಿಯನ್ನು ಆವಶ್ಯಕವಾದ ರೀತಿಯಲ್ಲಿ ಪಾಲನೆ ಮಾಡುವುದಿಲ್ಲ. ನೀವು ನಿಮಗೋಸ್ಕರ ಆಯ್ಕೆ ಮಾಡುವುದನ್ನು ನಿಮ್ಮ ಸಹೋದರನಿಗೂ ಆಯ್ಕೆ ಮಾಡಬೇಕಾದುದು ಆವಶ್ಯಕವಾಗಿದೆ.

ಪ್ರೀತಿ, ವಾತ್ಸಲ್ಯ ಮತ್ತು ಭ್ರಾತೃತ್ವದ ವಾತಾವರಣವನ್ನು ಸೃಷ್ಟಿಸಲು ಅನೇಕರು ಬಯಸುತ್ತಾರೆ. ಆದರೆ ತಮ್ಮ ಸ್ವಂತ ಸಂಪತ್ತನ್ನು ವಿನಿಯೋಗಿಸಿ ಅಶಾಂತಿಯ ಪರಿಸ್ಥಿತಿಯನ್ನು ಸುಧಾರಣೆ ಮಾಡಲು ತ್ಯಾಗ ಮನೋ ಭಾವವನ್ನು ನಿಜವಾಗಿಯೂ ಹೊಂದುವವರು ಎಷ್ಟು ಜನರಿದ್ದಾರೆ? ವೈಯಕ್ತಿಕವಾಗಿ ಕೆಲವರು ಅಥವಾ ಹಲವರು ಚಿಕ್ಕ ಪುಟ್ಟ ದಾನ ಧರ್ಮಗಳನ್ನು ಮಾಡುತ್ತಾರೆ. ಆದರೆ ಅದು ಗಣನೀಯವಾದ ತ್ಯಾಗ ವೇನೂ ಅಲ್ಲ. ಅವರು ತಮ್ಮ ಭಾವೋದ್ವೇಗಗಳನ್ನು ಕೈ ಬಿಡಲು

ಸಿದ್ಧರಾಗಿರುವುದಿಲ್ಲ. ಸಮಾಜದ ಬಹಳ ದೊಡ್ಡ ವಿಭಾಗ ಮತ್ತು ಅನೇಕ ದೇಶಗಳು ಶೋಷಣೆ ಮತ್ತು ಕ್ರೌರ್ಯಕ್ಕೆ ಗುರಿಯಾಗುವಾಗ ತಮಗುಂಟಾದ ಅನ್ಯಾಯದ ಕಾರಣದಿಂದ ಅಸ್ವಸ್ಥರಾಗುತ್ತಾರೆ. ಆಗ ದ್ವೇಷವು ಬೆಳವಣಿಗೆ ಪಡೆಯುತ್ತದೆ. ಚಿಕ್ಕಪುಟ್ಟ ತ್ಯಾಗಗಳು ನಿರರ್ಥಕವಾಗುತ್ತವೆ.

ನಾವು ಇಂದು ಲೋಕವನ್ನು ನೋಡುವಾಗ ಬಹುಸಂಖ್ಯಾತರಾದ ಜನರು ಶೋಷಣೆ, ಕ್ರೌರ್ಯ ಮತ್ತು ಅನ್ಯಾಯದಿಂದ ಪೀಡಿತರಾಗಿದ್ದಾರೆ.



ಅನೇಕ ಸರಕಾರಗಳು ತಮ್ಮ ದೇಶದ ಜನರೊಂದಿಗೆ ಧರ್ಮ ಅಥವಾ ರಾಜ್ಯದ ಹೆಸರಲ್ಲಿ ಕ್ರೌರ್ಯ ದಿಂದಲೂ ದಯಾಹೀನತೆ ಯಿಂದಲೂ ವರ್ತಿಸುತ್ತವೆ. ಪಾಶ್ಚಿಮಾತ್ಯ ದೇಶದ ಸರಕಾರಗಳು ನೇರವಾಗಿ ಅಥವಾ ಪರೋಕ್ಷವಾಗಿ ಈ ದೌರ್ಜನ್ಯದಲ್ಲಿ ಪಾಲುಗಾರರಾಗಿದ್ದಾರೆ.

ಉದಾಹರಣೆಗೆ ಹೇಳುವುದಾದರೆ, ಇತಿಯೋಪಿಯಾದಲ್ಲಿರುವ ಹಸಿವು ಮತ್ತು ಕ್ಷಾಮ ಪರಿಸ್ಥಿತಿ ಅಲ್ಲಿ ಶಾಂತಿಯನ್ನು ಸ್ಥಾಪಿಸಲು ಬಿಡುವುದೋ? ಟಿ.ವಿ.ಯಲ್ಲಿ ಅಲ್ಲಿನ ಬಗ್ಗೆ ವಾರ್ತೆಗಳಲ್ಲಿ ಆ ದೇಶಕ್ಕೆ ಸೀಮಿತ ಸಹಾಯ ನೀಡಿದುದರ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಕ್ಷಾಮಪೀಡಿತವೂ ಆರ್ಥಿಕವಾಗಿ ಧ್ವಂಸಗೊಂಡದ್ದೂ ಆಗಿರುವ ಆ ದೇಶಕ್ಕೆ ನೀಡುವ ನೆರವು ಹಸಿವೆಯಿಂದ ಬಳಲುವ ಜನರ ಹೊಟ್ಟೆಗೆ ಆಹಾರ ನೀಡಲು ಬಳಸಲಾಗುತ್ತಿಲ್ಲ. ನೆರವಿನ ಬಹುಭಾಗ ವಿದ್ರೋಹಿಗಳಿಗೆ ಸಹಾಯ ನೀಡಲು ಅಥವಾ ಸರಕಾರದ ಸೈನ್ಯವನ್ನು ಬಲಪಡಿಸಿ ತಥಾಕಥಿತ ನಾಯಕರು ತಮ್ಮ ಸ್ವಾಧೀನವನ್ನು ದೇಶದ ಮೇಲೆ ಕಾಪಾಡಲು ಬಳಸಲಾಗುತ್ತಿದೆ. ಇತಿಯೋಪಿಯಾ ಆಯುಧಗಳನ್ನು ನಿರ್ಮಿಸುವ ಸಾಮರ್ಥ್ಯ ಹೊಂದಿಲ್ಲ. ಆದುದರಿಂದ ಶಕ್ತಿಶಾಲಿ ದೇಶಗಳಿಂದ ಅಲ್ಲಿಗೆ ಆಯುಧ ತಲುಪುತ್ತದೆ. ಅಥವಾ ಶ್ರೀಮಂತ ದೇಶಗಳ ನಿರ್ದಿಷ್ಟ ಗುಂಪುಗಳ ಮೂಲಕ ತಲಪುತ್ತದೆ. ಆ ಗುಂಪುಗಳು ಮಾಫಿಯಾ ಸಂಘದ ಹಾಗೆ ತಮ್ಮ ಬಲೆಗಳನ್ನು ಹಾಕಿವೆ.

ಶಕ್ತಿಶಾಲಿ ದೇಶಗಳು ಲೋಕದಲ್ಲಿರುವ ಈ ಶೋಷಣೆ, ಈ ಕ್ರೌರ್ಯ ಮತ್ತು ಅನ್ಯಾಯಕ್ಕೆ ಪರಿಹಾರ ಕಂಡುಹಿಡಿಯಲು ಏಕೆ ಪ್ರಯತ್ನ ಮಾಡುವುದಿಲ್ಲ? ಕೇವಲ ಹೇಳಿಕೆಗಳನ್ನು ನೀಡುವುದು ಅಥವಾ ಸಂಯುಕ್ತ ರಾಷ್ಟ್ರ ಸಂಘದ ಒಂದು ಸಮಿತಿಯನ್ನು ಸಮಾವೇಶಗೊಳಿಸಿ ಅತೃಪ್ತಿಯನ್ನು ಸೂಚಿಸುವುದು ಸಾಕಾಗಲಾರದು.

ಇದೇ ರೀತಿ ಶಕ್ತಿಶಾಲಿ ದೇಶಗಳು ಪಾಲೆಸ್ತೀನ್ ಜನತೆಗೆ ಕೇವಲ ಟಿ.ವಿ.ಯಲ್ಲಿ ಸಹಾನುಭೂತಿ ಸೂಚಿಸುವುದು ಸಾಕಾಗಲಾರದು. ಇರಾಖ್ ಮತ್ತು ಅಫ್‌ಘಾನಿಸ್ಥಾನದಲ್ಲಿ ಶಾಂತಿ ಸ್ಥಾಪಿಸಲು ಮಾಡಿದಂತಹ ಪ್ರಯತ್ನ ಏಕೆ ಮಾಡಬಾರದು? ಇರಾಖ್ ಮತ್ತು ಅಫ್‌ಘಾನಿಸ್ಥಾನದಲ್ಲಿ ಸಂಭವಿಸಿದುದು ಸರಿಯೋ ತಪ್ಪೋ ಎಂಧು ನಾನು ಹೇಳುವುದಿಲ್ಲ. ಶಕ್ತಿಶಾಲಿ ದೇಶಗಳು ತಮ್ಮ ನಿಲುವಿಗೆ ಅನುಸಾರವಾಗಿ ಕ್ರಮಗಳನ್ನು ಶಾಂತಿ ಸ್ಥಾಪಿಸಲು ಕೈಗೊಳ್ಳುತ್ತವೆ ಎಂದು ಸೂಚಿಸುವುದು ಮಾತ್ರ ನನ್ನ ಉದ್ದೇಶವಾಗಿದೆ. ಇರಾಖ್ ಯುದ್ಧದ ಬಗ್ಗೆ ಸಾರ್ವಜನಿಕ ವಿಚಾರಣೆ ಈಗ ಬ್ರಿಟನಿನಲ್ಲಿ ನಡೆಸಲಾಗುತ್ತಿದೆ. ಅನೇಕ ಸರಕಾರಿ ಉದ್ಯೋಗಸ್ಥರು ಯುದ್ಧವನ್ನು ನ್ಯಾಯೀಕರಿಸುತ್ತಾರೆ. ಆದರೆ ಬ್ರಿಟನಿನ ಸಾರ್ವಜನಿಕರಲ್ಲಿ ಬಹುಸಂಖ್ಯಾತರು ಮತ್ತು ಹಲವು ರಾಜಕಾರಣಿಗಳು ಈ ಯುದ್ಧವನ್ನು ನ್ಯಾಯೀಕರಿಸಲಾಗದೆಂದು ಹೇಳುತ್ತಾರೆ.

ಈಗ ಇರಾಖ್ ಮತ್ತು ಅಫ್‌ಘಾನಿಸ್ಥಾನದ ಜನರು ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಯುದ್ಧಕ್ಕೆ ಮೊದಲು ಈ ದೇಶಗಳಲ್ಲಿ ಅಧಿಕಾರದಲ್ಲಿದ್ದ ಜನರ ವಿರುದ್ಧ ಕ್ರಮವನ್ನು ಕೈಗೊಳ್ಳ ದಿರುತ್ತಿದ್ದರೆ ಜಾಗತಿಕ ಶಾಂತಿಗೆ ಆ ಜನರಿಂದ ಭಂಗವುಂಟಾಗುತ್ತಿತ್ತು ಎಂದೂ ಆದುದರಿಂದ ಅವರ ವಿರುದ್ಧ ಕ್ರಮ ಕೈಗೊಂಡು ಜನರ ಹಕ್ಕುಗಳನ್ನು ಸಂರಕ್ಷಿಸಲಾಯಿತೆಂದೂ ವಾದಿಸಲಾಗುತ್ತಿದೆ. ಆದರೆ ಪಾಲೆಸ್ತೀನ್ ಜನತೆಯನ್ನು ಬಾಹ್ಯ ಆಕ್ರಮಣದಿಂದ ರಕ್ಷಿಸಲು ಇಂತಹ ಕ್ರಮ ಕೈಗೊಳ್ಳುವುದು ಬೇಡವೇ? ಪಾಲೆಸ್ತೀನ್ ಜನತೆ ಯುದ್ಧವನ್ನು ಪ್ರಾರಂಭಿಸಿತೆಂದು ನಾವು ಭಾವಿಸುವು ದಾದರೂ ಅವರಿಗೆ ನೀಡಲಾಗುವ ಅನುಪಾತಿಕ ವಲ್ಲದ ಶಿಕ್ಷೆಯನ್ನು ಎಂದೂ ನ್ಯಾಯೀಕರಿಸಲು ಸಾಧ್ಯವಾಗದು. ನಿರಪರಾಧಿ ಮಕ್ಕಳು, ಮಹಿಳೆಯರು, ವೃದ್ಧರು ಮತ್ತು ನಿರಾಯುಧರು ಬಾಂಬ್ ದಾಳಿಗೆ ತುತ್ತಾದರು. ಒಂದು ನಗರವನ್ನು ಸಂಪೂರ್ಣ ಧ್ವಂಸಗೊಳಿಸಲಾಯಿತು. ಪಾಶ್ಚಿಮಾತ್ಯ ಮಾಧ್ಯಮಗಳು ನಿಸ್ಸಂಶಯವಾಗಿಯೂ ತೀವ್ರವಾಗಿ ಪ್ರತಿಭಟಿಸಿದುವು. ಮಹಾಶಕ್ತಿ ರಾಷ್ಟ್ರಗಳು ಹೇಳಿಕೆಗಳನ್ನು ನೀಡಿದವು. ಆದರೆ ಇಸ್ರಾಯೇಲನ್ನು ಈ ಕ್ರೂರವರ್ತನೆಯಿಂದ ತಡೆಯಲು ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ.

ತಮ್ಮ ಮನೆಗಳು ಧ್ವಂಸಗೊಳಿಸಲ್ಪಡುವುದನ್ನು, ತಮ್ಮ ಸಹೋದರ ಸಹೋದರಿಯರು ಯಾವುದೇ ಕಾರಣವಿಲ್ಲದೆ ಕೊಲ್ಲಲ್ಪಡುವುದನ್ನು, ತಮ್ಮ ತಂದೆ ತಾಯಂದಿರು ನಿಸ್ಸಹಾಯಕರಾಗಿ ತಮ್ಮ ಜೀವರಕ್ಷಣೆಗಾಗಿ ಬೊಬ್ಬಿಡುವಾಗ ಬಾಂಬ್ ದಾಳಿಯಿಂದ ಕೊಲ್ಲಲ್ಪಡುವುದನ್ನು ನೋಡಿದ ನಿಷ್ಕಳಂಕರಾದ ಮಕ್ಕಳು ತಮ್ಮ ನೆನಪಿನಿಂದ ಈ ಭಯಾನಕ ದೃಶ್ಯಗಳನ್ನು ಅಳಿಸಿಬಿಡಲು ಸಾಧ್ಯವೇ? ಅವರ ಆಂತರಿಕ ನಿರಾಶೆ ಅವರನ್ನು ಆತಂಕಭರಿತರನ್ನಾಗಿ ಮಾಡುವುದು, ಅವರ ಆತಂಕ ಪ್ರಕಟವಾಗುವಾಗ ಇನ್ನಷ್ಟು ಅಸ್ತವ್ಯಸ್ತತೆ ಮತ್ತು ಪ್ರತಿಕ್ರಿಯೆ ಉಂಟಾಗುವುದು. ಪಾಲೆಸ್ತೀನಿನ ಚರಿತ್ರೆಯನ್ನು ಪರಿಶೀಲಿಸಿದರೆ ಅವರ ಪ್ರತಿಕ್ರಿಯೆಗಳಿಂದ ಅವರ ವಿರುದ್ಧ ಇನ್ನಷ್ಟು ದೌರ್ಜನ್ಯ ನಡೆಯಿತು.

ಇಂದು ಲೋಕದಲ್ಲಿ ಒಂದು ಸ್ಥಳದಲ್ಲಿ ನಡೆಯುವ ಘಟನೆಯ ಸಮಾಚಾರ ತಕ್ಷಣ ಲೋಕದಾದ್ಯಂತ ಬಿತ್ತರಿಸಲ್ಪಡುತ್ತದೆ. ಇದರ ಫಲಸ್ವರೂಪವಾಗಿ ದೌರ್ಜನ್ಯದ ಚಿತ್ರಣಗಳನ್ನು ವೀಕ್ಷಿಸುವ ಮುಸ್ಲಿಮರಲ್ಲಿ ನಿಸ್ಸಂದೇಹವಾಗಿ ದ್ವೇಷವು ಉಂಟಾಗುವುದು. ಮನುಷ್ಯರ ಹೃದಯದಲ್ಲಿರುವ ದ್ವೇಷಾಸೂಯೆಗಳು ವರ್ಧಿಸುತ್ತಾ ಹೋಗುತ್ತವೆ. ದೌರ್ಜನ್ಯವು ಪುನರಾವರ್ತಿಸಲ್ಪಡುವ ಬಗ್ಗೆ ಮಾತುಗಳು ಆಡಲ್ಪಡುತ್ತವೆ. ಮುಖ್ಯ ಶಕ್ತಿ ರಾಷ್ಟ್ರಗಳು ಈ ದೌರ್ಜನ್ಯವನ್ನು ತಡೆಗಟ್ಟಲು ಏನು ಮಾಡುತ್ತವೆ ಎಂದು ನೋಡೋಣ.

ಹಝ್‌ರತ್ ಮುಹಮ್ಮದ್ ಪೈಗಂಬರ್ (ಅವರ ಮೇಲೆ ಅಲ್ಲಾಹನ ಶಾಂತಿಯೂ ಆಶೀರ್ವಾದಗಳೂ ಸುರಿಸಲ್ಪಡಲಿ) ಹೀಗೆ ಹೇಳಿರುವರು: **ನಿಮ್ಮ ಹೃದಯಗಳಿಂದ ದ್ವೇಷವನ್ನು ಹೊರಹಾಕಲು ಮತ್ತು ಶಾಂತಿಯನ್ನು ಸ್ಥಾಪಿಸಲು ಸತ್ಯವಿಶ್ವಾಸಿಗಳು ದೌರ್ಜನ್ಯಪೀಡಿತನಿಗೂ ದೌರ್ಜನ್ಯ ಗಾರನಿಗೂ**

ಸಹಾಯ ನೀಡಬೇಕು.

ಈ ಉಪದೇಶವನ್ನು ಆಲಿಸಿದ ಶಿಷ್ಯರು ಹೀಗೆ ಹೇಳಿದರು: ದೌರ್ಜನ್ಯ ಪೀಡಿತನಿಗೆ ಸಹಾಯ ನೀಡುವುದರ ಬಗ್ಗೆ ನಾವು ಮನವರಿಕೆ ಮಾಡಿಕೊಂಡಿರುವೆವು. ಆದರೆ ದೌರ್ಜನ್ಯಗಾರನಿಗೆ ಸಹಾಯ ನೀಡುವುದು ಹೇಗೆ? ಆಗ ಹಝ್ರತ್ ಪೈಗಂಬರರು ಹೀಗೆ ಹೇಳಿದರು: **ದೌರ್ಜನ್ಯಗಾರನು ಕ್ರೂರಕೃತ್ಯ ನಡೆಸದಂತೆ ನೀವು ತಡೆದು ಅವನನ್ನು ದೇವನ ಕ್ರೋಧಕ್ಕೆ ಈಡಾಗುವುದರಿಂದ ರಕ್ಷಿಸಬಹುದು.**

ಕ್ರೂರ ಕೃತ್ಯಗಳನ್ನು, ಅವುಗಳನ್ನು ಮಾಡುವವರು ಶಕ್ತಿಶಾಲಿಗಳಾದರೂ ಬಲಹೀನರಾದರೂ ಅವುಗಳನ್ನು ತಡೆಯಲು ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳಬೇಕು. ಸಂಯುಕ್ತ ರಾಷ್ಟ್ರಸಂಘವು ಠರಾವುಗಳನ್ನು ಅಂಗೀಕರಿಸುವುದರಿಂದ ಮಾತ್ರ ಶಾಂತಿ ಸ್ಥಾಪಿಸಲ್ಪಡಲಾರದು. ಪ್ರಾಯೋಗಿಕ ಕ್ರಮಗಳನ್ನು ಸಹ ಕೈಗೊಳ್ಳುವುದು ಆವಶ್ಯಕವಾಗಿದೆ. ವಿಶ್ವಸ್ತತೆಯನ್ನು ಸ್ಥಾಪಿಸುವುದು ಮತ್ತು ನಂಬಿಕೆಯನ್ನು ಬೆಳೆಸುವುದು ಆವಶ್ಯಕವಾಗಿದೆ. ಇದಕ್ಕೆ ಪರಿಪೂರ್ಣ ಸಮಾನತೆ ಸ್ಥಾಪಿಸಲ್ಪಡಬೇಕು. ಶ್ರೀಮಂತ ಅಭಿವೃದ್ಧಿಹೊಂದಿದ ದೇಶಗಳು ಮತ್ತು ಬಡ ಅಭಿವೃದ್ಧಿಶೀಲ ದೇಶಗಳ ಮಧ್ಯೆ ಇರುವ ಭಿನ್ನತೆಗಳನ್ನು ಬಗೆಹರಿಸಬೇಕು. ಎಲ್ಲ ರೀತಿಯ ವೀಟೊ ಅಧಿಕಾರಗಳನ್ನು ಕೊನೆಗೊಳಿಸಬೇಕು. ಸೂಕ್ಷ್ಮ ನ್ಯಾಯಪಾಲನೆಯನ್ನು ಜಾರಿಗೊಳಿಸಬೇಕು. ನಾವು ನಮ್ಮ ಪ್ರತಿಜ್ಞೆಗಳಿಗೆ, ನಮ್ಮ ಕರ್ತವ್ಯಗಳಿಗೆ ಮತ್ತು ನಮ್ಮ ಸ್ಥಾನಮಾನಗಳಿಗೆ ನಿಷ್ಠರಾಗಿರಬೇಕು. ಕಾನೂನು ಕಾಯಿದೆಗಳನ್ನು ಅವುಗಳಲ್ಲಿ ಅಂತರ್ಗತವಾದ ಗುರಿಯನ್ನು ಮನವರಿಕೆ ಮಾಡುವುದರ ಮೂಲಕ ನಿಷ್ಠೆಯಿಂದ ಪಾಲಿಸಬೇಕು. ದ್ವಿಮುಖ ಧೋರಣೆಯನ್ನು ಅಳಿಸಿಬಿಡಬೇಕು. ನಿಶ್ಚಯವಾಗಿಯೂ ಸಂಪರ್ಕ ಮಾಧ್ಯಮಗಳು ಸಹ ಈ ಬಗ್ಗೆ ಕರೆನೀಡಿವೆ.

ನ್ಯಾಯ, ನಿಷ್ಠೆ ಮತ್ತು ನ್ಯಾಯಪಾಲನೆ ಬಗ್ಗೆ ಪವಿತ್ರ ಖುರ್‌ಆನ್ ನಮಗೆ ಕಲಿಸಿಕೊಟ್ಟಿದೆ. ಅದು ಹೀಗೆ ಹೇಳಿದೆ: **ನೀವು ನಿಮ್ಮ ವಿರುದ್ಧವಾಗಲಿ ನಿಮ್ಮ ಸಂಬಂಧಿಕರ ವಿರುದ್ಧವಾಗಲಿ ಸಾಕ್ಷ್ಯ ಹೇಳಬೇಕಾಗಿದ್ದರೆ ಕೂಡ ನೀವು ಆವಶ್ಯಕವಾಗಿ ಸತ್ಯವಾದ ಸಾಕ್ಷ್ಯ ನೀಡಿರಿ.**

ದ್ವಿತೀಯ ಮಹಾಯುದ್ಧವು ಕೊನೆಗೊಂಡ ನಂತರ ಮುಂದೆ ವಿಶ್ವವನ್ನು ಯುದ್ಧದ ಭೀಕರ ಪರಿಸ್ಥಿತಿಯಿಂದ ರಕ್ಷಿಸಲು ಸ್ಥಾಪಿತವಾದ ಸಂಸ್ಥೆಯಲ್ಲಿ ಅದರ ಸದಸ್ಯರಾದ ಮಹಾಶಕ್ತಿ ರಾಷ್ಟ್ರಗಳು ತಮ್ಮ ವಿರುದ್ಧ ಮಾಡಲಾದ ವಿಮರ್ಶೆಯನ್ನು ಪರಿಗಣಿಸಲು ಮತ್ತು ತಮ್ಮ ತಪ್ಪುಗಳನ್ನು ಅಂಗೀಕರಿಸಲು ಸಿದ್ಧವಾಗುತ್ತವೆಯೇ?

ಮಹಾಶಕ್ತಿ ರಾಷ್ಟ್ರಗಳು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳದಿರುವಂತೆ ಮಾಡುವ ತೀರ್ಮಾನವು ಸಂಯುಕ್ತ ರಾಷ್ಟ್ರ ಸಂಘವನ್ನು ಸ್ಥಾಪಿಸುವಾಗಲೇ ಕೈಗೊಳ್ಳಲಾಯಿತು ಮತ್ತು ಐದು ಮಹಾಶಕ್ತಿ ರಾಷ್ಟ್ರಗಳಿಗೆ ವೀಟೊ ಅಧಿಕಾರ ನೀಡಲಾಯಿತು. ತನ್ನ ವಿರುದ್ಧವಾಗಲಿ ಸಾಕ್ಷ್ಯನೀಡಬೇಕೆಂಬ ನ್ಯಾಯಪಾಲನೆಯ ಮೂಲಭೂತ ಆವಶ್ಯಕತೆಯನ್ನು ನಿರಾಕರಿಸಲಾಯಿತು. ಈ ಸಂಸ್ಥೆ ನ್ಯಾಯವನ್ನು ಸ್ಥಾಪಿಸುವುದು ಹೇಗೆ?

ವಿಚಿತ್ರ ವಿಷಯವೇನೆಂದರೆ, ನಾನು ಇದರ ಮೊದಲು ಹೇಳಿದ ಹಾಗೆ ಅವರು ತಮ್ಮ ತತ್ವಗಳಿಗೆ ಸ್ವತಃ ನಿಷ್ಠರಾಗಿಲ್ಲ. ನಿಷ್ಠೆಯು ಪ್ರೀತಿ ಮತ್ತು ವಾತ್ಸಲ್ಯದಿಂದ ಉದ್ಭವಿಸುತ್ತದೆ. ವೈಯಕ್ತಿಕ ಸಂಬಂಧಗಳಲ್ಲಿ ಪ್ರೀತಿಯು ನಿಷ್ಠೆಯನ್ನು ವರ್ಧಿಸುತ್ತದೆ. ಒಬ್ಬ ಪೌರನು ತನ್ನ ದೇಶವನ್ನು ಪ್ರೀತಿಸುವಾಗ ಅವನು ತನ್ನ ನಿಷ್ಠಾಪೂರ್ಣ ಸಂಬಂಧವನ್ನು ಪ್ರಕಟಿಸುತ್ತಾನೆ ಮತ್ತು ತನ್ನ ದೇಶಕ್ಕೋಸ್ಕರ ಬಲಿದಾನಗಳನ್ನು ನೀಡುತ್ತಾನೆ.

ಪ್ರೀತಿಯ ಭಾವನೆ ಇಲ್ಲದಿದ್ದರೆ ಬಲಿದಾನದ ಮನೋಭಾವ ಉಂಟಾಗಲಾರದು. ಒಬ್ಬನು ಇನ್ನೊಬ್ಬನನ್ನು ಪ್ರೀತಿಸದಿದ್ದರೆ ಅವನ ಬಗ್ಗೆ ಉತ್ತಮ ಭಾವನೆಗಳನ್ನು ತನ್ನ ಹೃದಯದಲ್ಲಿ ಹೊಂದಲಾರನು ಮತ್ತು ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ನಿಷ್ಠಾಪೂರ್ಣವಾಗಿ ಈಡೇರಿಸಿ ಕೊಡಲಾರನು.

ಇಲೆಕ್ಟ್ರೋನಿಕ್ ಸಂಪರ್ಕ ಮಾಧ್ಯಮವು ಲೋಕದಲ್ಲಿರುವ ನಮ್ಮೆಲ್ಲರನ್ನೂ ಒಗ್ಗೂಡಿಸಿದೆ. ನಾವೆಲ್ಲರೂ ವಿಶ್ವಗ್ರಾಮದ ನಿವಾಸಿಗಳಾಗಿದ್ದೇವೆ. ಆದರೆ ಪರಸ್ಪರ ಒಳಿತನ್ನು ಮಾಡುವುದರಿಂದ ಮಾತ್ರ ಅದರ ಲಾಭ ನಮಗೆ ದೊರಕುವುದು. ಆದರೆ ಉತ್ತಮ ಭಾವನೆಗಳಿಗೆ ಬದಲಾಗಿ ದ್ವೇಷವು ಹುಟ್ಟುವುದಾದರೆ, ಮಾನಸಿಕ ಶಾಂತಿಗೆ ಬದಲಾಗಿ ಅಸ್ವಸ್ಥತೆ ಮೇಲ್ಮೈಯನ್ನು ಪಡೆಯುವುದಾದರೆ, ಇದು ಪ್ರಗತಿ ಸೂಚಕವಲ್ಲ ಎಂದು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಇಂತಹ ಪರಿಸ್ಥಿತಿ ನಿಮ್ಮನ್ನು ಭೀಕರನಾಶಕ್ಕೆ ಕೊಂಡೊಯ್ಯುವುದು.

ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ: ನಮ್ಮನ್ನು ಸೃಷ್ಟಿಸಿದ ದೇವನೊಂದಿಗೆ ಪ್ರೀತಿ, ವಾತ್ಸಲ್ಯ ಮತ್ತು ನಿಷ್ಠೆ ಸ್ಥಾಪಿತವಾಗುವ ತನಕ ಒಬ್ಬ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯೊಂದಿಗೆ ಪರಸ್ಪರ ಪ್ರೀತಿ, ವಾತ್ಸಲ್ಯ ಮತ್ತು ನಿಷ್ಠೆ ಸ್ಥಾಪಿತವಾಗಲು ಸಾಧ್ಯವಾಗಲಾರದು. ಕಷ್ಟ ಮತ್ತು ಆತಂಕ ವಿಶ್ವದ ಬಹುಸಂಖ್ಯಾತ ಜನರಲ್ಲಿ ವ್ಯಾಪಕವಾಗಿ ಇರುವುದು ವಿಶ್ವದ ಜನರು ತಮ್ಮ ಸೃಷ್ಟಿಕರ್ತನನ್ನು ಮರೆತು ಬಿಟ್ಟ ಕಾರಣದಿಂದಾಗಿದೆ. ಜನರು ತಮ್ಮ ಧರ್ಮಗಳ ಮೂಲಭೂತ ತತ್ವಗಳನ್ನು ಮರೆತುಬಿಟ್ಟಿದ್ದಾರೆ. ವಾಸ್ತವಿಕ ವಿಷಯವೇನೆಂದರೆ, ಅನೇಕ ಜನರು ಸೃಷ್ಟಿಕರ್ತನಾದ ದೇವನ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಹೀಗೆ ಹೇಳಿದ್ದಾರೆ: **ಮುಸ್ಲಿಮರಲ್ಲಿ ಮತ್ತು ಮುಸ್ಲಿಮೇತರರಲ್ಲಿ ಬಹುತೇಕ ಜನರು ತಮ್ಮ ಧರ್ಮಗಳ ಮೂಲತತ್ವಗಳನ್ನು ಮರೆತುಬಿಟ್ಟಿದ್ದಾರೆ. ಅವರು ಸೃಷ್ಟಿಕರ್ತನಾದ ದೇವನಿಂದ ಬಹಳ ದೂರ ಸರಿದು ಹೋಗಿದ್ದಾರೆ.**

ಜನರು ದೇವನಿಂದ ಮತ್ತು ಧರ್ಮತತ್ವಗಳಿಂದ ದೂರ ಸರಿದು ಹೋಗಿರುವುದರಿಂದ ಜನರ ಹೃದಯಗಳಲ್ಲಿ ಆತಂಕ ಮತ್ತು ಅಸ್ವಸ್ಥತೆ ಹೆಚ್ಚುತ್ತಾ ಹೋಗುತ್ತಿವೆ.

ಅಹ್ಮದಿಯಾ ಸಂಘಟನೆಯ ಸ್ಥಾಪಕರು ಹೀಗೆ ಸಹ ಹೇಳಿದರು: **ನಾನು ಆಗಮಿಸಿರುವುದು ದೇವನೊಂದಿಗೆ ಮತ್ತು ಧರ್ಮದೊಂದಿಗೆ ಜನರಿಗಿರುವ ಅಗಲಿಕೆಯನ್ನು ಹೋಗಲಾಡಿಸಲಿಕ್ಕೋಸ್ಕರವಾಗಿದೆ. ದೇವನ ಹಕ್ಕುಗಳನ್ನು ಮತ್ತು ಜನರ ಹಕ್ಕುಗಳನ್ನು ಪ್ರೀತಿ ಮತ್ತು ಸಹಾನುಭೂತಿಯಿಂದ ಈಡೇರಿಸಿ ಕೊಡಬೇಕೆಂದು ನಾನು ಉಪದೇಶಿಸುತ್ತೇನೆ.**

ಈ ಉಪದೇಶಗಳನ್ನು ಅನುಷ್ಠಾನಕ್ಕೆ ತಂದರೆ ನಾವು ನಿಜವಾದ ಶಾಂತಿಯನ್ನು ಸ್ಥಾಪಿಸುವೆವು. ಇಲ್ಲದಿದ್ದರೆ ಪ್ರತಿಭಟನೆಯ ಚಳುವಳಿಗಳು ಲೋಕದಲ್ಲಿ ನಾಶವನ್ನು ಉಂಟುಮಾಡುವುದು.

ಶಾಂತಿಯ ಬಗ್ಗೆ ಹೇಳುವುದಾದರೆ, ಈಗ ಲೋಕದಾದ್ಯಂತ ಅಶಾಂತಿ ಮತ್ತು ಅಸ್ತವ್ಯಸ್ತತೆ ಹಬ್ಬಿದೆ. ಅದನ್ನು ಹೋಗಲಾಡಿಸಲು ಎಲ್ಲಾ ವಿಧಗಳಲ್ಲಿಯೂ ಪ್ರಯತ್ನ ನಡೆಸಬೇಕಾಗಿದೆ. ಇತರರ ವ್ಯವಹಾರಗಳಲ್ಲಿ ಅನಾವಶ್ಯಕ ಹಸ್ತಕ್ಷೇಪ ನಡೆಸಿ ದ್ವೇಷದ ಗೋಡೆಗಳನ್ನು ನಿರ್ಮಿಸುವುದಕ್ಕೆ ಬದಲಾಗಿ ನಾವು ದ್ವೇಷದ ಗೋಡೆಗಳನ್ನು ಕೆಡವಿಹಾಕಬೇಕು. ಜನರ ಹಕ್ಕುಗಳಿಗೆ ಭಂಗ ಉಂಟುಮಾಡದಿರುವ ದೇಶಗಳಲ್ಲಿ ಶಕ್ತಿ ರಾಷ್ಟ್ರಗಳು ಹಸ್ತಕ್ಷೇಪಮಾಡಬಾರದು.

ದೇಶದ ಶಾಂತಿಗೆ ಭಂಗ ಉಂಟುಮಾಡದಿರುವ ನಿಯಮಗಳನ್ನು ನಿಯಮ ವಿರುದ್ಧವೆಂದು ವಿಧಿಸಬಾರದು. ದೇಶದ ಶಾಂತಿಗೆ ಭಂಗ

ಉಂಟುಮಾಡುವ, ದೇಶದ ಅಭಿವೃದ್ಧಿಯನ್ನು ತಡೆಗಟ್ಟುವ ಮತ್ತು ಪ್ರಜೆಗಳ ಹಕ್ಕುಗಳನ್ನು ಅನಾವಶ್ಯಕವಾಗಿ ಕಸಿದುಕೊಳ್ಳುವ ಪರಿಸ್ಥಿತಿ ಉಂಟಾದಲ್ಲಿ ಮತ್ತು ಒಬ್ಬನನ್ನು ಅವನ ಧರ್ಮದ ಕಾರಣದಿಂದ ದ್ವೇಷಕ್ಕೆ ಗುರಿಪಡಿಸುವ ಪರಿಸ್ಥಿತಿ ಉಂಟಾದಲ್ಲಿ ಸರಕಾರಗಳು ಮಧ್ಯಪ್ರವೇಶ ಮಾಡಬೇಕು ಮತ್ತು ನಿಯಮಗಳನ್ನು ನಿರ್ಮಿಸಬೇಕು.

ನಾನು ಇದರ ಮೊದಲು ಹೇಳಿದ ಹಾಗೆ ಮತ್ತು ನಿಮಗೆ ತಿಳಿದಿರುವಂತೆ, ಲೋಕದ ಜನರೆಲ್ಲರೂ ಒಟ್ಟಿಗೆ ಸೇರಿದ್ದಾರೆ. ದೂರಗಳ ಮಾಪನವು ಬದಲಾಗಿದೆ. ಪ್ರತಿಯೊಂದು ದೇಶದಲ್ಲಿ ಬೇರೆ ಬೇರೆ ಧರ್ಮಗಳನ್ನು ಅನುಸರಿಸುವವರು ಸಮೀಪವಾಗಿ ಜೀವಿಸುತ್ತಾರೆ. ವಿವಿಧ ಧರ್ಮಗಳಿಗೆ ಸೇರಿದವರೂ ವಿವಿಧ ದೇಶಗಳಿಂದ ವಲಸೆ ಬಂದವರೂ ಆಗಿರುವ ನಮ್ಮ ಸಮಾಜಗಳಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಬಲಪಡಿಸಬೇಕು. ಪರಸ್ಪರ ಗೌರವಿಸಬೇಕು. ದೇಶಪ್ರೇಮವನ್ನು ಸಮಾಜದೊಳಗೆ ತುಂಬಿಸಬೇಕು. ಎಲ್ಲದಕ್ಕಿಂತಲೂ ಮುಖ್ಯವಾಗಿ ದೇವನ ಬಗ್ಗೆ ಪ್ರೇಮವನ್ನು ಜನರ ಹೃದಯಗಳಲ್ಲಿ ತುಂಬಿಸಬೇಕು.

ಈ ವಿಷಯಗಳನ್ನು ಪೋಷಿಸಿದರೆ ಪ್ರತಿಯೊಂದು ದೇಶದೊಳಗೆ ಸೌಹಾರ್ದ ಭಾವನೆಯು ಅವುಗಳಿಂದ ಖಾತರಿಗೊಳ್ಳುವುದು ಮತ್ತು ಜನರ ಅಸ್ವಸ್ಥತೆಯು ನೀಗಿ ಶಾಂತಿಯು ಸ್ಥಾಪಿತವಾಗುವುದು.

ಕಳೆದ ಕೆಲವು ವರ್ಷಗಳಲ್ಲಿ ಹಿಜಾಬ್ ಅಥವಾ ಪರದೆಯನ್ನು ಯುರೋಪ್‌ನಲ್ಲಿ ಒಂದು ಚರ್ಚಾ ವಿಷಯವನ್ನಾಗಿ ಮಾಡಲಾಗಿದೆ. ಫ್ರಾನ್ಸ್‌ನಲ್ಲಿ ವಿಶೇಷವಾಗಿ ಇದರ ಬಗ್ಗೆ ಕೋಲಾಹಲವೆದ್ದಿದೆ. ಹಿಜಾಬನ್ನು ಭಾಗಶಃ ನಿರೋಧಿಸಲು ನಿಯಮವನ್ನು ರೂಪಿಸಲು ಅವರು ತೀವ್ರವಾಗಿ ಚಿಂತಿಸುತ್ತಿದ್ದಾರೆ. ಫ್ರಾನ್ಸಿನ ಮಾದರಿಯನ್ನು ಅನುಸರಿಸಿ ಯುರೋಪಿನ ವಿವಿಧ ದೇಶಗಳ ರಾಜಕಾರಣಿಗಳು ತಮ್ಮ ರಾಜಕೀಯ ಲಾಭದ ಗಳಿಕೆಗಾಗಿ ಪರದೆಯ ನಿರೋಧವನ್ನು ಬೆಂಬಲಿಸುತ್ತಾರೆ. ಈ ಕಾರಣದಿಂದ ಮುಸ್ಲಿಮರ ಭಾವನೆಗಳಿಗೆ ಘಾಸಿ ಉಂಟಾಗಿದೆ.

ನಾನು ಇದರ ಬಗ್ಗೆ ಯೋಚಿಸಿದಾಗ, ಪರದೆಯು ಸರಕಾರಗಳಿಗೆ ಒಡ್ಡುವ ಬೆದರಿಕೆ ಏನೆಂದು ಮನವರಿಕೆ ಮಾಡಲು ಎಂದೂ ಸಾಧ್ಯವಾಗಲಿಲ್ಲ. ಒಂದು ಕೋಟನ್ನು ಧರಿಸಿ, ತಲೆ ಮತ್ತು ಕೆನ್ನೆಯನ್ನು ಬಟ್ಟೆಯಿಂದ ಮುಚ್ಚುವುದು ಘೋರ ಅಪರಾಧವೇನು? ಅದರ ವಿರುದ್ಧ ನಿಯಮ ನಿರ್ಮಿಸಲು ಸಂಪೂರ್ಣ ಪಾರ್ಲಿಮೆಂಟ್ ಅಧಿವೇಶನ ಜರಗಿಸಬೇಕೆ? ಮಹಿಳೆ ತನ್ನ ತಲೆಯ ಮೇಲೆ ಬಟ್ಟೆ ಧರಿಸುವುದನ್ನು ನಿರೋಧಿಸುವುದಾದರೆ ಪುರುಷರು ತಲೆಯ ಮೇಲೆ ಟೊಪ್ಪಿಗಳನ್ನೂ ಹ್ಯಾಟ್‌ಗಳನ್ನೂ ಧರಿಸಲು ಏಕೆ ಅನುಮತಿಸಬೇಕು? ಪ್ರಾಯಶಃ ಪುರುಷರು ತಲೆಯ ಮೇಲೆ ಟೊಪ್ಪಿಗಳನ್ನು ಧರಿಸುವುದನ್ನು ನಿರೋಧಿಸುವ ಪ್ರಸ್ತಾಪ ಸಹ ಬರಬಹುದಾಗಿದೆ.

ನಾನೊಂದು ವ್ಯಂಗ್ಯ ಚಿತ್ರವನ್ನು ಒಂದು ವಾರ್ತಾ ಪತ್ರಿಕೆಯಲ್ಲಿ ನೋಡಿದೆ. ಪರದೆ ಧರಿಸಿದ ಮಹಿಳೆ ಬೆರೆಟ್ (ಟೊಪ್ಪಿ) ಧರಿಸಿದ ತರುಣನ ಸಮೀಪ ನಿಂತಿದ್ದಾಳೆ. ತರುಣ ಆ ಮಹಿಳೆಗೆ ಹೇಳುತ್ತಾನೆ: "ಬುರ್ಖಾ ಧರಿಸಬಾರದು". ಆ ಮಹಿಳೆ ಹೇಳುತ್ತಾಳೆ: "ಬೆರೆಟ್ ಧರಿಸಬಾರದು".

ಈ ವಿಷಯಗಳು ಕಟು ನಿಂದನೆಗಳಿಗೆ ಹೇತುವಾಗಿವೆ. ಸಮಚಿತ್ತತೆಯುಳ್ಳ ಕೆಲವರ ಕೈಯಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗದ ನಿಯಂತ್ರಣವಿರುವುದರಿಂದ ಅವರು ಅಂತಹ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸುವುದಿಲ್ಲ. ಧಾರ್ಮಿಕ ಪೋಷಾಕು ಧರಿಸುವ ಕ್ರೈಸ್ತ ಮತ್ತು ಯಹೂದಿ ಮಹಿಳೆಯರ ವಿರುದ್ಧ ಸಹ ನಿಯಮಗಳನ್ನು ಜಾರಿಗೊಳಿಸಬೇಕೆ? ಮುಸ್ಲಿಮ್ ಮಹಿಳೆಯರ ವಿರುದ್ಧ ಆಜ್ಞೆಗಳನ್ನು ಜಾರಿಗೊಳಿಸಿದರೆ ಅದಕ್ಕೆ ಪ್ರತಿಕ್ರಿಯೆಯಾಗಿ ಮುಸ್ಲಿಮ್ ದೇಶಗಳು ಪಾಶ್ಚಿಮಾತ್ಯ ಮಹಿಳೆಯರು ಧರಿಸುವ ಪೋಷಾಕನ್ನು ನಿರೋಧಿಸಲು ಸಾಧ್ಯವಿದೆ. ಈ ವಿಷಯವು ವಿಶಾಲವಾಗಿ ಹಬ್ಬಿ ಜಾಗತಿಕ ಶಾಂತಿಯನ್ನು ಕೆಡಿಸುವ ಸಾಮರ್ಥ್ಯ ಹೊಂದಿದೆ.

ಒಬ್ಬ ವ್ಯಕ್ತಿಯನ್ನು ಗುರುತಿಸಲು ಯಾವುದಾದರೂ ಪರದೆ ಅಡ್ಡಿಯಾಗುವುದಾದರೆ, ಆ ವ್ಯಕ್ತಿಯನ್ನು ಗುರುತಿಸಲು ಪರದೆಯನ್ನು ಸರಿಸುವ ಅಧಿಕಾರ ಸರಕಾರಕ್ಕಿದೆ. ಆದರೆ ಒಬ್ಬ ಮಹಿಳೆ ಪರದೆ ಧರಿಸಿದ ಕಾರಣ ಆಕೆಯನ್ನು ಪ್ರಯಾಣ ಮಾಡಲು ಬಿಡದಿರುವುದು ಅಥವಾ ಪರದೆ ಧರಿಸಿದ ಕಾರಣ ಚಿಕಿತ್ಸೆಯನ್ನು ನೀಡದೆ ಮೃತ್ಯುವಿನ ದವಡೆಗೆ ಗುರಿಪಡಿಸುವುದು ನ್ಯಾಯಬಾಹಿರ ನಡೆವಳಿಕೆಯಾಗಿದೆ.

ಒಬ್ಬ ಬುದ್ಧಿಶಾಲಿ ವಿದ್ಯಾರ್ಥಿನಿಯ ಉದಾಹರಣೆಯನ್ನು ಪರಿಶೀಲಿಸಿರಿ: ಆಕೆ ಮುಸ್ಲಿಮ್ ಮಾತ್ರವಲ್ಲ, ಆಕೆ ತನ್ನ ದೇಶಕ್ಕೆ ಒಂದು ವರದಾನವಾಗಿರುತ್ತಾಳೆ. ಆಕೆ ತನ್ನ ದೇಶಕ್ಕೆ ನಿಷ್ಠಳಾಗಿ ದೇಶಕ್ಕಾಗಿ ಯಾವ ತ್ಯಾಗವನ್ನಾದರೂ ಮಾಡಲು ಸಿದ್ಧಳಾಗಿರುತ್ತಾಳೆ. ಆಕೆ ತನ್ನ ಪರಿಣತಿಯನ್ನು ದೇಶದ ಪ್ರಗತಿಗೋಸ್ಕರ ಬಳಸಲು ಸಿದ್ಧಳಾಗಿರುತ್ತಾಳೆ. ಇಂತಹ ವಿದ್ಯಾರ್ಥಿನಿ, ಯಾವುದೇ ಒತ್ತಡಕ್ಕೊಳಗಾಗದೆ ಪರದೆ ಧರಿಸಲು ಸ್ವಂತ ಇಷ್ಟದಿಂದ ನಿರ್ಧರಿಸಿದರೆ, ಆಕೆಯನ್ನು ವಿದ್ಯಾಭ್ಯಾಸ ಮುಂದುವರಿಸಲು ತಡೆಯುವುದಾದರೆ ಆಕೆಯ ನಾಗರಿಕ ಹಕ್ಕುಗಳನ್ನು ಕಸಿದುಕೊಂಡಂತೆ ಆಗುವುದಿಲ್ಲವೇ? ಇಂತಹ ವಿದ್ಯಾರ್ಥಿನಿಯನ್ನು ವಿದ್ಯಾಭ್ಯಾಸದಿಂದ ವಂಚಿತೆಯನ್ನಾಗಿ ಮಾಡುವುದು ಆಕೆಯ ಪ್ರತಿಭೆಯನ್ನು ವ್ಯರ್ಥಗೊಳಿಸಿದಂತೆ ಆಗುವುದಿಲ್ಲವೆ? ಇದು ರಾಷ್ಟ್ರಕ್ಕೆ ನಷ್ಟಕರವಲ್ಲವೇ?

ಇಂತಹ ನಿಯಮವನ್ನು ಜರ್ಮನಿಯಲ್ಲಿ ಜಾರಿಗೊಳಿಸಲಾಗಿಲ್ಲ. ಆದರೆ ಕೆಲವು ಶಾಲೆಗಳ ಆಡಳಿತಾಧಿಕಾರಿಗಳಿಗೆ ಲಭ್ಯವಾಗಿರುವ ಕೆಲವು ಉಪನಿಯಮಗಳ ಸಹಾಯದಿಂದ, ನನಗೆ ಗೊತ್ತಿರುವ ಒಬ್ಬ ಅಹ್ಮದೀ ಮುಸ್ಲಿಮ್ ವಿದ್ಯಾರ್ಥಿನಿಯನ್ನು ಆಕೆ ಅತ್ಯಂತ ಉನ್ನತ ರ‍್ಯಾಂಕ್ ಗಳಿಸಿದವಳಾಗಿದ್ದರೂ ವಿದ್ಯಾಭ್ಯಾಸ ಮುಂದುವರಿಸುವುದನ್ನು ತಡೆಗಟ್ಟಲಾಗಿದೆ. ಇಂತಹ ಅನೇಕ ಉದಾಹರಣೆಗಳಿವೆ. ಪ್ರತಿಭಾವಂತೆಯಾದ ಒಬ್ಬ ಮುಸ್ಲಿಮ್ ವಿದ್ಯಾರ್ಥಿನಿ ತನ್ನ ಧರ್ಮವನ್ನು ಅನುಷ್ಠಾನ ಮಾಡುತ್ತಾ ದೇಶಸೇವೆ ಮಾಡಲು ಬಯಸುವಾಗ ಆಕೆಯ ಪ್ರತಿಭೆ ರಾಷ್ಟ್ರದ ಸ್ವತ್ತು ಆಗಿದ್ದರೂ ಅವಳನ್ನು ತಡೆದು ರಾಷ್ಟ್ರಕ್ಕೆ ಹಾನಿ ಉಂಟು ಮಾಡಲಾಗುತ್ತಿದೆ. ಆಕೆ ತನ್ನ ಇಷ್ಟ ಪ್ರಕಾರ ತನ್ನ ಆತ್ಮತೃಪ್ತಿಗಾಗಿ ಧರ್ಮಾನುಷ್ಠಾನ ಮಾಡುವಾಗ ಅವಳು ಒಂದು ಮೀಟರ್ ಬಟ್ಟೆಯನ್ನು ತನ್ನ ತಲೆಯ ಮೇಲೆ ಧರಿಸುವ ಕಾರಣ ಆಕೆಯನ್ನು ಆಕೆಯ ನಾಗರಿಕ ಹಕ್ಕಿನಿಂದ ವಂಚಿತಳನ್ನಾಗಿ ಮಾಡಲಾಗುತ್ತಿದೆ.

ಆಕೆ ತಲೆಯ ಮೇಲೆ ಬಟ್ಟೆ ಧರಿಸುವುದು ಅಪರಾಧವಾಗಿದ್ದರೆ, ಚಳಿಗಾಲದಲ್ಲಿ ಎಲ್ಲಾ ಯುರೋಪಿಯನ್ ಮಹಿಳೆಯರು ತಮ್ಮ ತಲೆಗಳನ್ನು ಸ್ಕಾರ್ಫ್‌ಗಳಿಂದ ಮುಚ್ಚುತ್ತಿರುವುದರಿಂದ ಅವರನ್ನೂ ನಾಗರಿಕ ಹಕ್ಕುಗಳಿಂದ ವಂಚಿತೆಯರನ್ನಾಗಿ ಮಾಡಬೇಕಾಗಿದೆ. ಒಂದು ಮೀಟರ್ ಬಟ್ಟೆ ತಲೆಗೆ ಹೊದ್ದುಕೊಳ್ಳುವುದು ಒಂದು ಅಪರಾಧವೇ? ಹೀಗೆ ಮಾಡುವ ಮಹಿಳೆಯನ್ನು ಮೂಲಭೂತ ನಾಗರಿಕ ಹಕ್ಕುಗಳಿಂದ ವಂಚಿತೆಯನ್ನಾಗಿ ಮಾಡುವುದು ಸರಿಯೇ? ಎಂಬ ವಿಷಯ ಗಾಢವಾಗಿ ಚಿಂತಿಸಬೇಕಾದ ವಿಷಯವಾಗಿದೆ.

ಜನರ ಹಕ್ಕುಗಳನ್ನು ಸಂರಕ್ಷಿಸುವವರೆಂದು ವಾದಿಸುವ ಆಧುನಿಕ ಪ್ರಜಾಪ್ರಭುತ್ವವಾದಿ ದೇಶಗಳ ಅರ್ಥ ವ್ಯಾಖ್ಯಾನ ಇದೇ ಏನು? ವಿವಿಧ ಜನಾಂಗಗಳ ಜನರನ್ನು ಒಟ್ಟಿಗೆ ಸೇರಿಸುವ ವಿಧಾನ ಇದೇ ಏನು? ಜನರ ಮಧ್ಯೆ ಪ್ರೀತಿ ವಿಶ್ವಾಸವನ್ನು ಪೋಷಿಸುವ ರೀತಿ ಹೀಗೆಯೇ

ಏನು? ನಿಶ್ಚಯವಾಗಿಯೂ ಪ್ರತಿಯೊಬ್ಬ ನ್ಯಾಯನಿಷ್ಠ ಮನುಷ್ಯನು ಇದನ್ನು ವಿರೋಧಿಸುವನು. ಏಕೆಂದರೆ ಸರಕಾರದ ಈ ಕ್ರಮಗಳು ದ್ವೇಷದ ಗೋಡೆಗಳನ್ನು ಎತ್ತರಗೊಳಿಸುತ್ತಾ ಹೋಗುವುದು ಮತ್ತು ಜಾಗತಿಕ ಶಾಂತಿಯನ್ನು ನಾಶಗೊಳಿಸುವುದು.

ಇತ್ತೀಚೆಗೆ ಮಸ್‌ಜಿದ್‌ಗಳ ಮಿನಾರತ್‌ಗಳ ವಿಷಯ ಮುಖ್ಯ ಸಮಸ್ಯೆಯಾಗಿ ಸ್ವಿಟ್‌ಝರ್‌ಲೇಂಡ್‌ನಲ್ಲಿ ತಲೆದೋರಿದೆ. ಜರ್ಮನಿಯಲ್ಲಿ ನಮ್ಮ ಮಸ್‌ಜಿದ್‌ಗಳ ಪೈಕಿಯೊಂದರ ಐವತ್ತನೇ ವರ್ಷಾಚರಣೆ ಸಂದರ್ಭದಲ್ಲಿ ನಾನು ಹೀಗೆ ಹೇಳಿದೆ: ಮಸ್‌ಜಿದ್‌ಗಳಲ್ಲಿ ಗೂಢತಂತ್ರಗಳನ್ನು ರೂಪಿಸಲಾಗುತ್ತಿದೆ ಎಂದು ನಾವು ಒಂದು ಕ್ಷಣಕಾಲ ಊಹಿಸುವುದಾದರೆ, ಮಸ್‌ಜಿದ್‌ಗಳ ಮಿನಾರತ್‌ಗಳನ್ನು ಕೆಡವಿಹಾಕುವುದರಿಂದ ಈ ರೀತಿಯ ಗೂಢತಂತ್ರಗಳು ನಿಂತುಹೋಗುವುವೋ?

ಪ್ರಥಮವಾಗಿ ಹೇಳುವುದಾದರೆ, ಪ್ರತಿಯೊಂದು ಮಸ್‌ಜಿದ್ ವಿರುದ್ಧ ಇಂತಹ ಆಕ್ಷೇಪ ಮಾಡಲು ಸಾಧ್ಯವಾಗಲಾರದು. ನಾನು ಜರ್ಮನಿಯಲ್ಲಿ ಒತ್ತಿ ಹೇಳಿದೆ ಮತ್ತು ನಾನು ಇಲ್ಲಿ ಪುನಃ ಒತ್ತಿ ಹೇಳಲು ಬಯಸುತ್ತೇನೆ: ಪ್ರಪಂಚದ ಯಾವುದೇ ಪ್ರದೇಶದಲ್ಲಿ ಅಹ್ಮದೀ ಮಸ್‌ಜಿದ್‌ಗಳ ವಿರುದ್ಧ ಅವು ದ್ವೇಷ ಮತ್ತು ವಿದ್ರೋಹದ ಸಂದೇಶ ಹರಡುತ್ತವೆ ಎಂಬ ದೋಷಾರೋಪ ಸಾಬೀತುಪಡಿಸಲು ಎಂದೂ ಸಾಧ್ಯವಾಗಲಾರದು. ನೀವು ನಿಜವಾಗಿ ದೋಷಾರೋಪ ಮಾಡಲು ಇಚ್ಛಿಸುವುದಾದರೆ, ಶಾಂತಿಗೆ ಭಂಗವುಂಟುಮಾಡುತ್ತಾರೆ ಎಂಬ ಆರೋಪವನ್ನು ನೀವು ನಿಜವಾಗಿಯೂ ಮಾಡಲು ಬಯಸುವುದಾದರೆ ಎಲ್ಲಿ ಅಂತಹ ಗೂಢಾಲೋಚನೆಗಳು ರೂಪಿಸಲಾಗುತ್ತಿವೆಯೋ ಅಂತಹ ಕಟ್ಟಡವನ್ನು ನಕ್ಷೆಯಿಂದ ಅಳಿಸಿಬಿಡಿರಿ. ಯಾವುದಾದರೂ ಮಸ್‌ಜಿದ್ ಅಥವಾ ಆರಾಧನಾಲಯದಲ್ಲಿ ಯಾವುದಾದರೂ ಗೂಢಾಲೋಚನೆಗಳು ನಡೆಯುತ್ತಿವೆ ಎಂದು ಸರಕಾರಕ್ಕೆ ತಿಳಿದು ಬಂದರೆ ಕೂಡಲೇ ಅದರ ವಿರುದ್ಧ ಕ್ರಮ ಕೈಗೊಳ್ಳುವುದು ಸರಕಾರದ ಜವಾಬ್ದಾರಿಯಾಗಿದೆ. ಆದರೆ ಮುಸ್ಲಿಮರು ತಮ್ಮ ಮಸ್‌ಜಿದ್‌ಗಳಲ್ಲಿ ಸರಕಾರದ ವಿರುದ್ಧ ಗೂಢಾಲೋಚನೆ ನಡೆಸುತ್ತಾರೆಂದು ಎಲ್ಲಾ ಮುಸ್ಲಿಮರ ವಿರುದ್ಧ ಆಕ್ಷೇಪ ಮಾಡುವುದಾದರೆ ದ್ವೇಷದ ಬೀಜಗಳು ಬಿತ್ತಲ್ಪಡುವುವು.

ರಾಜಕಾರಣಿಗಳು ಕೆಲವು ದೇಶಗಳಲ್ಲಿ ತಮ್ಮ ವ್ಯಕ್ತಿತ್ವದ ಪ್ರಚಾರಕ್ಕಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಾರೆ. ಸ್ವಿಟ್‌ಝರ್‌ಲೇಂಡ್‌ನಲ್ಲಿ ನಮ್ಮ ಮಸ್‌ಜಿದ್ ಆಗಿರುವ ಅಹ್ಮದಿಯಾ ಮಸ್‌ಜಿದ್ ಮಾತ್ರ ಎತ್ತರವಾದ ಮಿನಾರತನ್ನು ಹೊಂದಿದೆ. ಅದರ ಚಿತ್ರ ಪ್ರಕಟಿಸಿದ ವಾರ್ತಾ ಪತ್ರಿಕೆಗಳು "ಶಾಂತಿ ಮತ್ತು ಸುರಕ್ಷೆಯ ಸಂಕೇತ" ಎಂದು ಅದನ್ನು ವರ್ಣಿಸಿವೆ.

ನಿಶ್ಚಯವಾಗಿಯೂ ಎಲ್ಲಾ ರಾಜಕಾರಣಿಗಳು ಒಂದೇ ರೀತಿ ಇಲ್ಲ. ಕೆಲವು ರಾಜಕಾರಣಿಗಳು ತಮ್ಮ ಪಕ್ಷದ ಧುರೀಣರಿಗೆ ತಾವು ಅಂತಹ ಧಾರ್ಮಿಕ ಬಲಾತ್ಕಾರವನ್ನು ಬೆಂಬಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇಂದಿನ ಕಾಲದಲ್ಲಿ ಲೋಕವು ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಆರ್ಥಿಕ ಹಿಂಜರಿತ ಕೊನೆಗೊಂಡಿದೆ ಎಂದೂ ನಾವು ಅತ್ಯಂತ ಕೆಟ್ಟ ಸ್ಥಿತಿಯನ್ನು ದಾಟಿ ಮುಂದೇ ಸಾಗಿರುವೆವು ಎಂದೂ ನಾವು ಆರ್ಥಿಕ ಪುನಶ್ಚೇತನದ ಘಟ್ಟದಲ್ಲಿದ್ದೇವೆಂದೂ ಹೇಳಲಾಗುತ್ತಿದೆ.

ಆದರೆ ಜನರು ದುರವಸ್ಥೆಯಲ್ಲಿದ್ದಾರೆ ಕೆಲಸಗಳು ಕೈಬಿಟ್ಟು ಹೋಗುತ್ತಿವೆ. ಖರೀದಿಯ ಸಾಮರ್ಥ್ಯ ಹಿಂದೆ ಕುಂದಿಹೋದ ಹಾಗೆ ಈಗಲೂ ಇದೆ. ಇವುಗಳ ಬಗ್ಗೆ ಸರಕಾರಗಳು ಕಾರ್ಯಪ್ರವೃತ್ತರಾಗಬೇಕು ಮತ್ತು ದೊಡ್ಡ ಕಾರ್ಯಯೋಜನೆಗಳನ್ನು ರೂಪಿಸಬೇಕು. ವೈಯಕ್ತಿಕ ಆಯ್ಕೆಯ ಪ್ರಕಾರ ಕಾರ್ಯಕ್ರಮಗಳನ್ನು ಮಾಡಬಾರದು.

ಒಬ್ಬ ಮಹಿಳೆ ಪರದೆ ಧರಿಸುವುದು ಮತ್ತು ಧರಿಸದೆ ಇರುವುದು ದೇಶದ ಅಥವಾ ಲೋಕದ ಆರ್ಥಿಕ ಸ್ಥಿತಿಯ ಮೇಲೆ ಪ್ರಭಾವ ಬೀರುವುದೋ? ಪರದೆ ಧರಿಸುವುದು ಮತ್ತು ಧರಿಸದೆ ಇರುವುದು ಹಾಗೂ ಮಿನಾರತ್ ಇರುವುದು ಮತ್ತು ಇಲ್ಲದೆ ಇರುವುದು ಒಂದು ದೇಶದ ನೈತಿಕ ಮೌಲ್ಯಗಳ ಮೇಲೆ ಕೆಟ್ಟ ಪ್ರಭಾವ ಬೀರುವುದೋ? ಅಥವಾ ಅದು ಸೃಷ್ಟಿಕರ್ತನನ್ನು ಗುರುತಿಸಲು ಸಹಾಯ ಮಾಡುವುದೋ? ಪರದೆ ಧರಿಸುವುದು ಮತ್ತು ಪರದೆ ಧರಿಸದೆ ಇರುವುದು ಹಾಗೂ ಮಿನಾರತ್ ಇರುವುದು ಮತ್ತು ಮಿನಾರತ್ ಇಲ್ಲದೆ ಇರುವುದು ಜಾಗತಿಕ ಶಾಂತಿಗೆ ಪೂರಕವಾಗುವುದೋ ಅಥವಾ ಹಾನಿಕರವಾಗುವುದೋ?

ಪರದೆ ಧರಿಸುವುದು ಮತ್ತು ಮಿನಾರತ್ ನಿರ್ಮಿಸುವುದು ನಿಜವಾಗಿಯೂ ಹಾನಿಕರವಾಗಿದ್ದರೆ ನಾನು ಅದನ್ನು ಒಪ್ಪಿಕೊಳ್ಳುವವರಲ್ಲಿ ಮೊದಲಿಗನಾಗುವೆನು. ಏಕೆಂದರೆ, ಹೆಚ್ಚಿನ ಒಳಿತನ್ನು ಗಳಿಸಲು ಚಿಕ್ಕದಾದುದನ್ನು ತ್ಯಾಗಮಾಡಬೇಕು ಎಂದು ಇಸ್ಲಾಮ್ ಕಲಿಸುತ್ತದೆ. ಆದರೆ ಸರಕಾರಗಳ ಈ ಕ್ರಮಗಳು ದ್ವೇಷದ ಅಸ್ತಿಭಾರವನ್ನು ಬಲಪಡಿಸುತ್ತವೆ.

ದೇವರ ಸಲುವಾಗಿ ನಾನು ವಿನಂತಿಸುತ್ತೇನೆ: ನೀವು ನಿಮ್ಮ ಕ್ಷೇತ್ರದಲ್ಲಿ ದ್ವೇಷವನ್ನು ಕೊನೆಗೊಳಿಸಲು ನ್ಯಾಯನಿಷ್ಠೆಯಿಂದಲೂ ಸಮಭಾವನೆ ಯಿಂದಲೂ ವರ್ತಿಸಿರಿ. ನೀವು ಅನ್ಯರ ಭಾವನೆಗಳನ್ನು ಗೌರವಿಸಿರಿ. ಹೀಗೆ ಮಾಡಿದರೆ ಶಾಂತಿಯು ಪುನಃ ಸ್ಥಾಪಿಸಲ್ಪಡುವುದು. ಎಲ್ಲಾ ಅತಿಥಿ ಭಾಷಣಗಾರರು ಇದನ್ನೇ ಹೇಳಿದ್ದಾರೆ.

ನಮ್ಮ ಮಧ್ಯದಲ್ಲಿ ಲಾರ್ಡ್ ಎರಿಕ್ ಆವ್‌ಬರಿ ಉಪಸ್ಥಿತರಾಗಿದ್ದಾರೆ. ಅವರಿಗೆ ನಾನು ಅಹ್ಮದಿಯಾ ಶಾಂತಿ ಪ್ರಶಸ್ತಿಯನ್ನು ಈಗ ತಾನೆ ನೀಡಿರುವೆನು. ನಾನು ಅವರನ್ನು ಅತ್ಯಂತ ಗೌರವಾರ್ಹರೆಂದು ಗಣಿಸುತ್ತೇನೆ. ಏಕೆಂದರೆ ಅವರು ಮಾನವ ಹಕ್ಕುಳ ಪ್ರತಿಪಾದಕರಲ್ಲಿ ಮುಂಚೂಣಿಯಲ್ಲಿ ಯಾವಾಗಲೂ ಇರುತ್ತಾರೆ. ಅವರು ತಮ್ಮ ಕೆಲಸವನ್ನು ಮುಂದುವರಿಸಲು ದೇವನು ಅವರಿಗೆ ಸಾಮರ್ಥ್ಯವನ್ನು ದಯಪಾಲಿಸಲಿ. ಏಕೆಂದರೆ ಮಾನವ ಹಕ್ಕುಗಳ ಪ್ರತಿಪಾದನೆ ಜಾಗತಿಕ ಶಾಂತಿಗೆ ಖಾತರಿಯಾಗಿದೆ.

ಬೇರೆ ಅನೇಕ ಗಣ್ಯ ಅತಿಥಿಗಳು ಇಲ್ಲಿದ್ದಾರೆ. ಟಾಮ್ ಕಾಕ್ಸ್ ಅತಿಥಿ ಭಾಷಣಕಾರರೂ ನಮ್ಮ ಸಂಘಟನೆಯ ಹಳೆಯ ಸ್ನೇಹಿತರೂ ಆಗಿದ್ದಾರೆ. ಜಸ್ಟಿನ್ ಗ್ರೀನಿಂಗ್ ಪುಟ್ನಿ ಕ್ಷೇತ್ರದ ನಮ್ಮ ಎಂ. ಪಿ. ಆಗಿದ್ದಾರೆ. ಲಾರಾ ಮೊಫಟ್ ಕ್ರೌಲಿಯದ ಎಂ. ಪಿ. ಆಗಿದ್ದಾರೆ. ಸ್ಟೀಫನ್ ಹಾಮಂಡ್, ವಿಂಬ್ಲ್ಡನಿನ ಎಂ. ಪಿ. ಆಗಿದ್ದಾರೆ. ಸೈಯೋಭೈನ್ ಮೆಕ್ ಡೊನಾಗ್ ಮಿಟ್‌ಚಾಮ್ ಮತ್ತು ಮೋರ್ಡನಿನ ಎಂ. ಪಿ. ಆಗಿದ್ದಾರೆ.

ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಇವರೆಲ್ಲಾ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಮುಂದುವರಿಯುವಂತಾಗಲಿ, ಅವರು ಅವುಗಳ ಬಗ್ಗೆ ಇಷ್ಟರಲ್ಲಿಯೇ ಪ್ರಸ್ತಾಪಿಸಿರುತ್ತಾರೆ.

ನನ್ನ ಪ್ರಾರ್ಥನೆ ಏನೆಂದರೆ, ಮಾನವರು ಮಾನವೀಯ ಮೌಲ್ಯಗಳನ್ನು ಮನವರಿಕೆ ಮಾಡಿಕೊಂಡು ಒಬ್ಬರಿನ್ನೊಬ್ಬರಿಗೆ ಸಲ್ಲಿಸಬೇಕಾದ ಹಕ್ಕುಗಳನ್ನು ಸಲ್ಲಿಸುವವರಾಗಲು ದೇವನು ಅನುಗ್ರಹಿಸಲಿ.

ಕೊನೆಯದಾಗಿ, ನೀವು ಒಳ್ಳೆಯ ಭಾವನೆಗಳೊಂದಿಗೆ ಇಲ್ಲಿಗೆ ಆಗಮಿಸಿ ನಿಮ್ಮ ಉಪಸ್ಥಿತಿಯ ಕಾರಣದಿಂದ ಈ ಸಮಾರಂಭಕ್ಕೆ ಭವ್ಯತೆ ನೀಡಿ ನೀವು ನಿಮ್ಮ ಸಹಜೀವಿಗಳಾದ ಮಾನವರಿಗೆ ಗೌರವವನ್ನು ದಯಪಾಲಿಸಿರುವುದಕ್ಕೋಸ್ಕರ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಿಮಗೆ ಬಹಳ ಕೃತಜ್ಞತೆಗಳು, ★

***(The Review of Religions May 2010 ಸಂಚಿಕೆಯಿಂದ.***
***ಭಾಷಾಂತರ : ಎಂ. ಉಬೈದುಲ್ಲಾ)***

# ಅಹ್ಮದಿಯತಿನ ವಸಂತಕಾಲ ಬರಲಿದೆ

**ಅಹ್ಮದಿಯಾ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 11-09-2010ರಂದು ಲಂಡನಿನ ಬೈತುಲ್ ಫುತೂಹ್ ಮಸ್ಜಿದ್‌ನಲ್ಲಿ ನೀಡಿದ ಈದುಲ್ ಫಿತ್ರ್ ಖುತ್ಬಾ**

**"ಖಂಡಿತವಾಗಿಯೂ ಕಷ್ಟದೊಂದಿಗೆ (ಕಷ್ಟದ ಬಳಿಕ) ಸುಖವಿದೆ. ಹೌದು, ಖಂಡಿತವಾಗಿಯೂ ಕಷ್ಟದೊಂದಿಗೆ ಸುಖವಿದೆ."**

(ಪವಿತ್ರ ಖುರ್‌ಆನ್: ಅಧ್ಯಾಯ 94, ವಚನಗಳು 6, 7)

ನಾನು ಓದಿದ ಈ ಖುರ್‌ಆನ್ ವಚನಗಳು ಸೂರಃ ಅಲಮ್ ನಶ್‌ರಹ್‌ನಲ್ಲಿವೆ. ಹಲವರಿಗೆ ಈ ಅಧ್ಯಾಯ ಬಾಯಿಪಾಠವಿರುತ್ತದೆ. ಮಕ್ಕದಲ್ಲಿ ಈ ಅಧ್ಯಾಯ ಅವತೀರ್ಣವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಮತ್ತು ಅನುಯಾಯಿಗಳು 13 ವರ್ಷಕಾಲ ಮಕ್ಕದಲ್ಲಿ ಕಷ್ಟಗಳನ್ನೂ ಶತ್ರುತ್ವವನ್ನೂ ಪ್ರಕೋಪಗಳನ್ನೂ ಅತಿಕ್ರೂರ ದೌರ್ಜನ್ಯಗಳನ್ನೂ ಅನುಭವಿಸುತ್ತಿದ್ದರು. ಆಗ ಹಝ್ರತ್ ಪೈಗಂಬರ್,(ಸ) ಸದಾ ಸಹನೆ ಕೈಗೊಳ್ಳಬೇಕೆಂದು ತನ್ನ ಅನುಯಾಯಿಗಳಿಗೆ ಉಪದೇಶಿಸಿದರು. ಅವರಿಗೋಸ್ಕರ ಆ ಮಹಾಪುರುಷ ಪ್ರಾರ್ಥನಾ ನಿರತರಾಗಿದ್ದರು. ಹೀಗಿರುವ ಅತಿಕ್ರೂರವಾದ ದೌರ್ಜನ್ಯಗಳಿಗೆ ಗುರಿಯಾದ ಹಝ್ರತ್ ಯಾಸಿರ್(ರ) ಮತ್ತು ಅವರ ಕುಟುಂಬದ ಸಮೀಪದಿಂದ ಒಮ್ಮೆ ಪೈಗಂಬರ್(ಸ) ದಾಟಿಹೋದರು. ಅವರನ್ನು ಆ ಸಂದರ್ಭದಲ್ಲಿ ಶತ್ರುಗಳು ಕ್ರೂರವಾಗಿ ಹಿಂಸಿಸುತ್ತಿದ್ದರು. ಆ ಕ್ರೂರ ಕೃತ್ಯ ನೋಡಿದ ಪೈಗಂಬರ್(ಸ) ಹೇಳಿದರು: "ಸಬ್‌ರನ್ ಆಲ ಯಾಸಿರ್, ಫಇನ್ನಮೌಇದುಕುಮುಲ್ ಜನ್ನತ" – "ಯಾಸಿರ್‌ನ ಕುಟುಂಬವೇ, ಸಹನೆಯನ್ನು ಕೈಬಿಡಬೇಡಿರಿ. ಹೀಗಿರುವ ಕಷ್ಟಗಳನ್ನು ಸಹಿಸುವುದರ ಬದಲಿಗೆ ಅಲ್ಲಾಹನು ನಿಮಗೆ ಸ್ವರ್ಗವನ್ನು ಕಾದಿರಿಸಿದ್ದಾನೆ." ಈ ಕ್ರೂರಕೃತ್ಯ ಕಾರಣವಾಗಿ ಆ ಪತಿ ಮತ್ತು ಪತ್ನಿ ಹುತಾತ್ಮರಾದರು. ನೋಡಿರಿ, ಇಲ್ಲಿ ಈ ದೌರ್ಜನ್ಯಗಳ ಪರ್ಯವಸಾನ ಮರಣ ಹೊರತು ಬೇರೇನೂ ಆಗಿರಲಿಲ್ಲ. ಆದರೂ ಪೈಗಂಬರ್(ಸ) ಸಹನೆ ಕೈಗೊಳ್ಳಲಿಕ್ಕೆ ಉಪದೇಶಿಸುತ್ತಿದ್ದರು. ಅದರೊಂದಿಗೆ, ಕಷ್ಟಗಳ ನಂತರ ಮಹತ್ತರ ವಿಜಯ ಲಭಿಸುವುದೆಂಬ ಸುವಾರ್ತೆಯನ್ನೂ ನೀಡುತ್ತಿದ್ದರು.

ಈ ಪೀಡನೆಗಳು ಅನೇಕ ತರ ಕಷ್ಟಗಳಿಂದ ತುಂಬಿಕೊಂಡಿವೆ. ಜೀವವನ್ನು ಬಲಿಯರ್ಪಿಸುವುದು ಯಾತನಾಯುತವಾಗಿದೆ. ಅದು ಭಯಾನಕವಾದ ಒಂದು ಪರಿಸ್ಥಿತಿಯಾಗಿದೆ. ಆದರೆ ಅದರ ನಂತರ ವಿಜಯಗಳ ಒಂದು ಶೃಂಖಲೆ ಸೃಷ್ಟಿಯಾಗುತ್ತದೆ. ಈ ದೌರ್ಜನ್ಯ ಕಾಲದ ನಂತರ ಬಲಹೀನರೂ ಬಡವರೂ ಆಗಿದ್ದ ಆ ಮರ್ದಿತ ಸಮುದಾಯ ಅರಬ್ ಲೋಕವನ್ನು ಅಧೀನಪಡಿಸಿ ಆಳಿದ ದೃಶ್ಯಗಳನ್ನು ಲೋಕ ಆ ಬಳಿಕ ಕಂಡಿತು. ಅಷ್ಟೇ ಅಲ್ಲ, ಅವರು ಅರೇಬಿಯಾದಿಂದ ಹೊರಗೆ ದಾಟಿಹೋಗಿ ದೊಡ್ಡ ದೊಡ್ಡ ಸರಕಾರಗಳನ್ನು ಪೈಗಂಬರರ ಪಾದದಡಿಗೆ ತಂದೊಪ್ಪಿಸಿದರು. ನೂರಾರು ವರ್ಷಕಾಲ ಮುಸ್ಲಿಮರು ಒಂದು ಶಕ್ತಿಯಾಗಿ ಲೋಕದಲ್ಲಿ ನೆಲೆಗೊಂಡರು. ಇಂದು ಮುಸ್ಲಿಮರು, ತಾವು ಪೈಗಂಬರರ ಉಮ್ಮತ್ ಎಂಬುದರಲ್ಲಿ ಅಭಿಮಾನಪಡುತ್ತಾರೆ. ಖಂಡಿತವಾಗಿಯೂ ಅವರಿಗೆ ಅದರಲ್ಲಿ ಅಭಿಮಾನಪಡಬಹುದು. ಅಂತ್ಯ ಕಾಲದ ಪ್ರವಾದಿ ಖಾತಮುಲ್‌ಅಂಬಿಯಾ ಆದ ಹಝ್ರತ್ ಮುಹಮ್ಮದ್ ಮುಸ್ತಫಾರವರ(ಸ) ದಾಸರಲ್ಲಿ ಸೇರಿದವರೆಂಬುದಕ್ಕಿಂತ ಅಭಿಮಾನಕರವಾದ ಇನ್ನೊಂದು ಗೌರವ ಇಂದು ಲೋಕದಲ್ಲಿ ನಮಗೆ ಲಭಿಸಲಿಕ್ಕಿಲ್ಲ.

ಆದರೆ ನಾನು ಮೊದಲು ಪಾರಾಯಣ ಮಾಡಿದ ಖುರ್‌ಆನ್ ವಚನದಲ್ಲಿ ಹೇಳಿದಂತೆ ತೊಂದರೆ ಮತ್ತು ಕಷ್ಟಗಳ ಕಾಲ ಇಸ್ಲಾಮಿನಲ್ಲಿ ಬರಬೇಕಾಗಿತ್ತು. ಅದು ಬಂದೂ ಬಿಟ್ಟಿತು. ಮಾತ್ರವಲ್ಲ, ಪೈಗಂಬರರ ಸಮುದಾಯದಲ್ಲಿ ಅಂಧಕಾರ ಕಾಲಘಟ್ಟ ಬರಲಿದೆಯೆಂದು ಭವಿಷ್ಯೋಕ್ತಿಯಿದೆ. ಆ ಕಾಲದಲ್ಲಿ ಮೊದಲೇ ಮುಸ್ಲಿಮರಿಗೆ ಲಭಿಸಿದ್ದ ಸ್ಥಾನಮಾನಗಳಾಗಲಿ, ಗೌರವವಾಗಲಿ ಇರಲಿಕ್ಕಿಲ್ಲ. ಈ ಭವಿಷ್ಯನುಡಿ ಸಹ ಬಹಳ ಸ್ಪಷ್ಟವಾಗಿ ಈಡೇರಿದುದಾಗಿ ನಾವು ಕಾಣುತ್ತೇವೆ. ಇಂದು ಸಹ ಇಸ್ಲಾಮಿಕ ಸರಕಾರಗಳು ಜಾರಿಯಲ್ಲಿವೆ. ಆದರೆ ಅವರದೇ ವ್ಯಕ್ತಿತ್ವ ಇಲ್ಲದಾಗಿದೆ. ಇಂದು ಅವರು ಇತರ ಸಮುದಾಯಗಳನ್ನು ಅವಲಂಬಿಸಿಕೊಂಡಿದ್ದಾರೆ. ಮುಸ್ಲಿಮರ ಎಲ್ಲವೂ ಇತರರ ಕೈಗಳಲ್ಲಿ ಹುದುಗಿಕೊಂಡಿವೆ. ತೈಲ ಬಾವಿಗಳಾದರೂ ಸಂಪತ್ತನ್ನು ವ್ಯಯಿಸಬೇಕಾದರೂ ಅವರಿಗೆ ಇತರರ ಅನುಮತಿ ಅವಶ್ಯವಾಗಿದೆ. ಇದು ಈಗಿನ ಭೌತಿಕ ಚಿತ್ರವಾಗಿದೆ. ಇನ್ನು ಧಾರ್ಮಿಕ ಅವಸ್ಥೆಯಾದರೋ, ನಾಮಧಾರಿ ಉಲಮಾವರ್ಗ ಧರ್ಮದಲ್ಲಿ ಅನಾಚಾರಗಳನ್ನು ಒಳನುಗ್ಗಿಸಿ ಧರ್ಮವನ್ನೆಲ್ಲ ಮಕ್ಕಳಾಟವನ್ನಾಗಿಸಿದೆ. ಮುಹಮ್ಮದ್ ಪೈಗಂಬರ್(ಸ) ಸಮರ್ಪಿಸಿದ ಇಸ್ಲಾಂ ಇಂದು ಇಲ್ಲದಾಗಿದೆ. ಉಲಮಾವರ್ಗ ಸಮರ್ಪಿಸುವ ಇಸ್ಲಾಂ ಮತ್ತು ಪೈಗಂಬರ್(ಸ) ತಂದ ಇಸ್ಲಾಂ ಪರಸ್ಪರ ಪೂರ್ವ–ಪಶ್ಚಿಮಗಳ ಅಂತರವಿದೆ. ವಿಶ್ವಾಸಪರ ಆವೇಶವನ್ನು ಪ್ರಕಟಿಸಲಾಗುವುದಾದರೂ ವರ್ತನೆ ಎಷ್ಟೋ ದೂರವಿದೆ. ಜಿಹಾದ್ ಬಗ್ಗೆ ತಪ್ಪಾದ ವ್ಯಾಖ್ಯಾನ ನೀಡುತ್ತಾ ಇಸ್ಲಾಮಿಗೆ ಕೆಟ್ಟ ಹೆಸರು ಬರುವಂತಾಗಿದೆ. ಆದರೋ, ಅವರ ವ್ಯಾಖ್ಯಾನ ಪ್ರಕಾರ ಜಿಹಾದ್ ಮಾಡಲು ಬೇಕಾದ ಆಯುಧಕ್ಕೆ ಅನ್ಯರನ್ನು ಅವಲಂಬಿಸುತ್ತಾರೆ. ಈ ವಿಚಾರವನ್ನು ವಿವರಿಸುತ್ತಾ ಒಮ್ಮೆ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಮಸೀಹ್ ಮೌಊದ್ (ಅಲೈಹಿಸ್ಸಲಾಂ) ಹೀಗೆ ಹೇಳಿದರು: "ಈ ಕಾಲದಲ್ಲಿ ಅಲ್ಲಾಹನು ಮುಸ್ಲಿಮರಿಗೆ ಆಯುಧವೆತ್ತಿ ಯುದ್ಧ ಮಾಡಲು ಅನುಮತಿ ನೀಡಿರುತ್ತಿದ್ದರೆ ಯುದ್ಧ ಸಾಮಗ್ರಿಗಳಿಗೋಸ್ಕರ ಅನ್ಯ ಸಮುದಾಯಗಳನ್ನು ಅವಲಂಬಿಸುವ ಗತಿಗೇಡು ಅವರಿಗೆ ಎಂದಿಗೂ ಬರುತ್ತಿರಲಿಲ್ಲ. ಆದುದರಿಂದ ಧರ್ಮದ ಹೆಸರು ಹೇಳಿ ಇಂದು ಯಾರಾದರೂ ಆಯುಧವೆತ್ತಿದರೆ ಖಂಡಿತವಾಗಿಯೂ ಅವರು ನಿಂದಿತರಾಗುವರು."

ಈ ಕಾಲದಲ್ಲಿ ಅನ್ಯರು ಕೂಡ ಧರ್ಮದ ಹೆಸರಿನಲ್ಲಿ ಆಯುಧ ವೆತ್ತುವುದಿಲ್ಲ. ಆದರೆ ಇಂದು ಇಸ್ಲಾಮಿನ ಹೆಸರು ಹೇಳಿ ಜಿಹಾದಿನ ವೇಷದಲ್ಲಿ ಅಕ್ರಮಗಳ ಒಂದು ಶೃಂಖಲೆಯೇ ಸೃಷ್ಟಿಸಲ್ಪಟ್ಟಿದೆ. ಇಸ್ಲಾಂ ಶಾಂತಿಯ ಧರ್ಮವಾಗಿದೆ. ಪ್ರತಿರೋಧಕ ಯುದ್ಧಕ್ಕೆ ಕೂಡ ಅದು ಅನುಮತಿ ನೀಡಲಿಕ್ಕಿದ್ದ ಕಾರಣವೇನೆಂದರೆ, ಶತ್ರುಗಳ ಕೈಗಳನ್ನು ಅಕ್ರಮದಿಂದ ತಡೆಯದಿರುತ್ತಿದ್ದರೆ ಕ್ರೈಸ್ತ ಇಗರ್ಜಿಗಳಾಗಲಿ ಯಹೂದ್ಯ ಮಂದಿರಗಳಾಗಲಿ ಇತರ ಆರಾಧನಾಲಯಗಳಾಗಲಿ ಮುಸ್ಲಿಂ ಮಸೀದಿಗಳಾಗಲಿ ಸುರಕ್ಷಿತವಾಗಿರಲಾರವು ಎಂಬುದಕ್ಕಾಗಿದೆ. ಆದರೆ ಇಂದಿನ ಜಿಹಾದ್ ಗುಂಪುಗಳು ದೇವನಾಮದಲ್ಲಿ ಆರಾಧನಾಲಯಗಳಲ್ಲಿ ಅಕ್ರಮದ ಸಂಕೋಲೆಯನ್ನು ಬಿಚ್ಚಿಬಿಟ್ಟಿವೆ. ಇದೆಷ್ಟು ವಿರೋಧಾಭಾಸವಾಗಿದೆ!

ಕಲಿಮ ಉಚ್ಚರಿಸುವವರನ್ನು ಯಾವುದೇ ವಿವೇಚನೆಯಿಲ್ಲದೆ ಕೊಂದು ಹಾಕುತ್ತಾರೆ. ಯುದ್ಧ ನಡೆಯುತ್ತಿರುವಾಗ ಕೂಡ ವೃದ್ಧರನ್ನಾಗಲಿ, ಸ್ತ್ರೀಯರನ್ನಾಗಲಿ, ಮಕ್ಕಳನ್ನಾಗಲಿ, ತಮ್ಮ ಆರಾಧನಾಲಯಗಳಲ್ಲಿ ಪ್ರಾರ್ಥಿಸುತ್ತಿರುವ ಪುರೋಹಿತರನ್ನಾಗಲಿ, ಯಹೂದ್ಯ ಧರ್ಮ ಪಂಡಿತರನ್ನಾಗಲಿ ಕೊಲ್ಲಬಾರದೆಂದು ಹಝ್ರತ್ ಪೈಗಂಬರ್(ಸ) ಆದೇಶಿಸಿದ್ದಾರೆ. ಸಾರ್ವಜನಿಕ ಸೊತ್ತಾದ ಮರಗಳನ್ನೂ ಇತರ ವಸ್ತುಗಳನ್ನೂ ನಾಶಪಡಿಸಬಾರದೆಂದೂ ಹೇಳಿದ್ದಾರೆ. ಆದರೆ ಇಂದಿನ ಜಿಹಾದಿ ಗುಂಪುಗಳು ತಮ್ಮ ಸಮುದಾಯದ ಜನರನ್ನೂ ಕಲಿಮ ಹೇಳುವವರನ್ನೂ ಮೃಗೀಯವಾಗಿ ನಿಷ್ಕರುಣೆಯಿಂದ ಕೊಲ್ಲುತ್ತಾರೆ. ಅವರೊಡನೆ ಅತಿ ನೀಚವಾದ ರೀತಿಯಲ್ಲಿ ವರ್ತಿಸುತ್ತಾರೆ. ಆ ವಾರ್ತೆಗಳನ್ನು ಕೇಳುವಾಗ ಮನುಷ್ಯನು ಸ್ತಂಭೀಭೂತನಾಗುತ್ತಾನೆ. ಇದೆಲ್ಲ ಮಾಡುವುದಾದರೋ, ಅಲ್ಲಾಹನ ಮತ್ತು ಪ್ರವಾದಿಯ ನಾಮದಲ್ಲಿ! ಈ ಜನರು ಅಲ್ಲಾಹ್ ಮತ್ತು ಅವನ ಪ್ರವಾದಿಯ ಕೋಪಕ್ಕೆ ಈಡಾಗಿ ಖಂಡಿತವಾಗಿಯೂ ಅವನ ಹಿಡಿತದಲ್ಲಿ ಸಿಲುಕುವರು. ಹಾಗೆ ಸಿಲುಕುತ್ತಲೂ ಇದ್ದಾರೆ. ತೀವ್ರವಾದಿ ಸಂಘಟನೆಗಳು ಮಾತ್ರವಲ್ಲ – ಕಾರಣವೇನೆಂದರೆ ಅವರ ಬಗ್ಗೆ ಎಲ್ಲೆಡೆಗಳಲ್ಲೂ ಖಂಡಿಸಲಾಗುತ್ತದೆ. ಅಹ್ಮದಿಯರಿಗೆದುರಾಗಿ ನಡೆಯುವ ಅಕ್ರಮ ವರ್ತನೆಗಳಿಗೆ ಶತ್ರುಗಳಾದ ಧರ್ಮಪಂಡಿತರೂ ಅನುಮತಿ ನೀಡುತ್ತಾರೆ. ಉಲಮಾ ವರ್ಗ ಮಾತ್ರವಲ್ಲ, ಕೆಲವು ಸರಕಾರಗಳು ಸಹ ಈ ದುಷ್ಕೃತ್ಯಕ್ಕೆ ಸಹಕಾರ ನೀಡುತ್ತವೆ. ಅವರು ದುಷ್ಕರ್ಮಿಗಳಿಗೆ ಹಿಂದಿನಿಂದ ನೆರವು ನೀಡುತ್ತಾರೆ. ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ಶುಭವಾರ್ತೆ ಅರುಹಿದ ಸುಖ ಮತ್ತು ಐಶ್ವರ್ಯದ ಕಾಲವೇ ಇದು? ಅಲ್ಲ, ಎಂದಿಗೂ ಅಲ್ಲ.

ನಾನು ಮೊದಲು ಹೇಳಿದ ಹಾಗೆ ಮಕ್ಕ ಕಾಲಘಟ್ಟ ಕಷ್ಟದ ಕಾಲಘಟ್ಟವಾಗಿತ್ತು. ಅದರ ನಂತರ ಯುಸ್‌ರ್‌ನ (ಸುಖದ) ಕಾಲ ಬಂತು. ಆ ಬಳಿಕ ಈ ಯುಸ್‌ರ್ ಮಾರ್ಪಟ್ಟು ಉಸ್‌ರ್‌ನ(ಕಷ್ಟದ) ಕಾಲ ಬಂತು. ಅನಂತರ ಪುನಃ ಯುಸ್‌ರ್‌ನ (ಸುಖದ) ಕಾಲ ಬರುವುದೆಂದು ಅಲ್ಲಾಹನು ಹೇಳಿದ್ದಾನೆ. ಈ ಸುಖದ ಕಾಲ ವಾಗ್ದತ್ತ ಮಸೀಹರ ಕಾಲದ ಬಳಿಕ ಆರಂಭಗೊಳ್ಳಬೇಕಾಗಿದೆ. ಆ ಕಾಲ ಆರಂಭವಾಗಿದೆ. ಆದರೆ ವಾಗ್ದತ್ತ ಮಸೀಹ್‌ರನ್ನು ಅಂಗೀಕರಿಸದೆ ಜನರು ಈಗಲೂ ಅಂಧಕಾರದಲ್ಲಿ ದಾರಿತಪ್ಪಿ ನಡೆಯುತ್ತಿದ್ದಾರೆ. ವಾಗ್ದತ್ತ ಮಸೀಹ್‌ರನ್ನು ಅಂಗೀಕರಿಸುವವರಿಗೆ ತೀವ್ರವಾದ ಕಷ್ಟಗಳನ್ನು ಕೊಡುತ್ತಿದ್ದಾರೆ. ಯಾವ ರೀತಿಯಲ್ಲೆಲ್ಲ ಅವರನ್ನು ತೊಂದರೆಗೊಳಪಡಿಸಬಹುದೆಂಬ ಚಿಂತೆಯಲ್ಲಿ ಹಗಲು ರಾತ್ರಿ ಈ ಜನರು ಮಗ್ನರಾಗಿದ್ದಾರೆ.

ಕತ್ತಲೆಯಿಂದ ಮುಸ್ಲಿಂ ಲೋಕವನ್ನು ಪಾರುಮಾಡಿ ಅವರಿಗೆ ನಷ್ಟವಾದ ಮಹತ್ವವನ್ನು ಪುನಃ ಸ್ಥಾಪಿಸಲಿಕ್ಕೋಸ್ಕರ ಅಲ್ಲಾಹನು ಯಾವ ಮಸೀಹ್‌ರನ್ನು ಕಳುಹಿಸಿದ್ದಾನೋ ಅವರ ಜಮಾಅತಿನೊಡನೆ ದುಷ್ಟವಾಗಿ ವರ್ತಿಸಿ ಮುಸ್ಲಿಮರು ಸ್ವಯಂ, ಸುಖ ಸಮಾಧಾನದ ಸುಂದರ ಕಾಲಘಟ್ಟ ಬರುವುದನ್ನು ಮುಂದುಡುತ್ತಿದ್ದಾರೆಂಬುದಕ್ಕಿಂತ ದುಃಖಕರವಾದ ವಾಸ್ತವಾಂಶ ಬೇರೇನಿದೆ? ಅಹ್ಮದಿಯರನ್ನು ಕಷ್ಟಕ್ಕೀಡು ಮಾಡಿ ಸೋಲಿಸಬಹುದೆಂದು ಅವರು ಭಾವಿಸುತ್ತಾರೆ. ಆದರೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಪ್ರತಿಯೊಂದು ಕಷ್ಟದ ನಂತರ ವಿಜಯದ ನೂತನ ಬಾಗಿಲುಗಳನ್ನು ಅಹ್ಮದಿಯರಿಗೆ ತೆರೆದುಕೊಡುತ್ತಿದ್ದಾನೆ. ಅಹ್ಮದಿಯತನ್ನು ನಾಶಪಡಿಸಲಿಕ್ಕೋಸ್ಕರ ವಿರೋಧಿಗಳು ಮಾಡುವ ಪ್ರತಿಯೊಂದು ಅಕ್ರಮ ಮತ್ತು ಕ್ರೂರಕೃತ್ಯ ನಂತರ ಅಹ್ಮದಿಯತ್ ವಿಜಯದ ಒಂದೊಂದು ಮೆಟ್ಟಿಲನ್ನು ಮೆಟ್ಟಿ ಮುನ್ನೇರುತ್ತಿದೆ. ಶತ್ರುಗಳ ಮೇಲಿರುವ ತನ್ನ ಕೋಪವನ್ನು ಯಾವುದಾದರೂ ರೀತಿಯಲ್ಲಿ ಅಲ್ಲಾಹು ಪ್ರಕಟಪಡಿಸುತ್ತಲೂ ಇದ್ದಾನೆ. ಆದರೆ ಈ ವಿಚಾರ ಜನರಿಗೆ ಮನಗಾಣಲು ಸಾಧ್ಯವಾಗುವುದಿಲ್ಲವಲ್ಲಾ ಎಂಬುದು ದುಃಖಕರ ವಾಸ್ತವಾಂಶ. ಧರ್ಮದ ಮುಖವಾಡ ಧರಿಸಿದ ನಾಮ ಮಾತ್ರ ಮುಲ್ಲಾಗಳ ಕೈಗಳಲ್ಲಿ ಕೈಗೊಂಬೆಗಳಾಗಿ ಜನಸಾಮಾನ್ಯರು ಮಾರ್ಪಡುತ್ತಿದ್ದಾರೆ. ಯಾರೂ ಸ್ವಂತ ಬುದ್ಧಿಯನ್ನು ಉಪಯೋಗಿಸಲು ಸಿದ್ಧರಾಗುವುದಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ನಮ್ಮ ವಿರೋಧಿಗಳಾದ ಉಲಮಾರ ಮೇಲೆ ಕರುಣೆ ತೋರಿಸಲಿ. ಅವರು ಈಗ ಮಾಡುವ ಕೃತ್ಯಗಳು ಧರ್ಮಕ್ಕೆ ಒಳಿತಲ್ಲ. ಅದು ಬಹಳ ಅಪಾಯಕರವಾಗಿದೆ. ಮಿಂಬರ್‌ಗಳ ಮೇಲೆ ಹತ್ತಿ ಈ ಕಾಲದಲ್ಲಿ ಇಸ್ಲಾಮಿಗೆ ಅತ್ಯಂತ ಹೆಚ್ಚು ಹಾನಿ ಯುಂಟಾಗಿದೆಯೆಂದು ಹೇಳಿ 13ನೇ ಶತಮಾನವನ್ನು ಅಪಲಪಿಸಿದ ಕಾಲವನ್ನು ಇವರು ಮರೆತುಬಿಟ್ಟರೇ? ಮಾತ್ರವಲ್ಲ, ಕಷ್ಟದಿಂದ ತುಂಬಿದ ಈ ಶತಮಾನದ ನಂತರ ಸುಖದ ಹದಿನಾಲ್ಕನೇ ಶತಮಾನ ಬರುವುದೆಂದೂ ಅವರು ಹೇಳುತ್ತಲಿದ್ದರು. ನಿರೀಕ್ಷೆಯ ಕೊನೆಯಲ್ಲಿ 14ನೇ ಶತಮಾನ ಬಂದು, ಹದಿನಾಲ್ಕನೇ ಶತಮಾನದ ಆದಿಯಲ್ಲಿ ಓರ್ವ ವ್ಯಕ್ತಿ ವಾಗ್ದತ್ತ ಮಸೀಹ್ ಎಂದು ವಾದಿಸುತ್ತ ಪ್ರತ್ಯಕ್ಷನಾಗಿ, ಸೂಚಕ ಕಾರ್ಯಗಳು ಪ್ರಕಟಗೊಂಡು ಆಕಾಶ– ಭೂಮಿ ಅವರ ಸತ್ಯಕ್ಕೆ ಸಾಕ್ಷ್ಯ ನೀಡಿದಾಗ ಈ ಉಲಮಾವರ್ಗವೇ ಪ್ರಥಮ ನಿಷೇಧಕರಾಗಿ ಮಾರ್ಪಟ್ಟರು."

ಉಲಮಾವರ್ಗದ ಶೈಲಿ ಹಝ್ರತ್ ಮಸೀಹ್ ಮೌಊದರ ಕಾಲ ಮೊದಲ್ಗೊಂಡು ಈಗಿನ ವರೆಗೆ ಒಂದೇ ತರವಾಗಿದೆ. ಒಬ್ಬ ವಾಗ್ದತ್ತ ಮಸೀಹ್ ಅಗತ್ಯವಿಲ್ಲವೆಂದು ಈಗ ಅವರು ಹೇಳಲು ತೊಡಗಿದ್ದಾರೆ. ಮುಸ್ಲಿಂ ಲೋಕಕ್ಕೆ ದಾರಿ ತೋರಿಸಲು ತಾವೇ ಸಾಕೆಂದು ಅವರು ವಾದಿಸುತ್ತಾರೆ. ಭೌತಿಕವಾಗಿ ಹೀಗೆ ಹಲವರು ಏನೆಲ್ಲ ಹೇಳುವರು. ಆದರೆ ದೈವಿಕವಾಗಿ ಯಾವುದೇ ಅಂಶವಾಗಲಿ ಅವರಲ್ಲಿಲ್ಲವೆಂದು ಅವರ ವರ್ತನೆ ಸಾಕ್ಷಿ ಹೇಳುತ್ತದೆ. ಕಳೆದ ದಿವಸ ಒಂದು ವಾರ್ತೆ ನನ್ನ ಮುಂದೆ ಬಂತು. ಡಾಕ್ಟರೇಟ್ ಪಡೆದ ರಕ್ಷಣಾ ಮಂತ್ರಿಯೂ ಆಗಿರುವ ಪಾಕಿಸ್ತಾನದ ಒಬ್ಬ ಪ್ರಜೆ – ಅವರು ಇಸ್ಲಾಮಿಕ ವಿಚಾರಗಳ ಒಂದು ಕೌನ್ಸಿಲಿನ ಸದಸ್ಯರೂ ಆಗಿದ್ದಾರೆ – ಅವರ ಒಂದು ಹೇಳಿಕೆ ಹೀಗಿತ್ತು: ಅಮೇರಿಕದ ಅಧ್ಯಕ್ಷ ಒಬಾಮ ಗ್ರೌಂಡ್ ಝೀರೋದಲ್ಲಿ ಎರಡು ರಕ್‌ಅತ್ ಈದ್ ನಮಾಝ್ ಮುಸ್ಲಿಮರೊಂದಿಗೆ ಅನುಷ್ಠಿಸಿದರೆ ಮುಸ್ಲಿಂ ಸಮುದಾಯ ಅವರನ್ನು ಖಲೀಫತುಲ್ ಮುಸ್ಲಿಮೀನ್ ಮತ್ತು ಅಮೀರುಲ್ ಮೂಮಿನೀನ್ ಎಂದು ಅಂಗೀಕರಿಸುವುದಂತೆ! ಇದು ಅವರ ಧಾರ್ಮಿಕ ವೀಕ್ಷಣೆಯಾಗಿದೆ. ಹೀಗಿರುವವರಿಗೆ ಇಂಥ ರೀತಿಯ ಅಮೀರೇ ಬೇಕು.

ಇವರು ವಾಗ್ದತ್ತ ಮಸೀಹ್‌ರನ್ನು ಅಂಗೀಕರಿಸದ ಕಾರಣದಿಂದ ಅವರ ಚಿಂತನೆಗಳೆಲ್ಲ ಭೌತಿಕವಾಗಿ ಬದಲಾವಣೆಗೊಂಡಿವೆ. ಈಗಿರುವ ಅಂಧಕಾರದ ಅವಸ್ಥೆ ಎಷ್ಟು ಮಾತ್ರ ಗಹನವಾದುದೆಂದು ಇದರಿಂದೆಲ್ಲ ಮನಗಾಣಬಹುದು. ಆದರೂ ತಮಗೆ ಒಬ್ಬ ಮಸೀಹ್ ಅಥವಾ ಮಹ್‌ದಿಯ ಆವಶ್ಯಕತೆಯಿಲ್ಲವೆಂದು ಹೇಳುತ್ತಾರೆ. ಅಲ್ಲಾಹನು ಅವರ ಮೇಲೆ ಕರುಣೆ ತೋರಿಸಲಿ.

ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: "ಇಸ್ಲಾಂ ಬಹಳ ಪ್ರಯಾಸಕರವಾದ ದಿನಗಳನ್ನು ಕಳೆದಿದೆ. ಅದರ ಹೇಮಂತ ಕಾಲ ಕಳೆದಿರುತ್ತದೆ ವಸಂತ ಕಾಲ ಇದೋ ಸನ್ನಿಹಿತವಾಗಿದೆ."

ಕಷ್ಟದ ನಂತರ ಸಮಾಧಾನದ ಸ್ಥಿತಿ ಬರುವುದು. ಆದರೆ ಮುಲ್ಲಾ ವರ್ಗ ಇನ್ನೂ ಇಸ್ಲಾಂ ಬೆಳೆದು ಬರಬೇಕೆಂದು ಇಚ್ಛಿಸದವರಾಗಿದ್ದಾರೆ. ವಾಗ್ದತ್ತ ಮಸೀಹರ ಆಗಮನದ ಮೂಲಕ ಇಸ್ಲಾಮಿನ ವಿಷಮಾವಸ್ಥೆ ಕಳೆದಿದೆ. ಕಾಲಘಟ್ಟದ ಮಸೀಹ್ ಇಸ್ಲಾಮಿನ ಮನೋಹರವಾದ ಪ್ರಕಾಶಮಾನ ಅಧ್ಯಾಪನೆಯನ್ನು ಲೋಕದ ಮುಂದೆ ಸಮರ್ಪಿಸಿದರು.

ಶತ್ರುಗಳಿಂದಲೂ ಮಿತ್ರರಿಂದಲೂ ನಾನಾ ತರದ ಅಡ್ಡಿ ಆತಂಕಗಳು ಇದ್ದರೂ ಅಹ್ಮದಿಯತಿನ ಸಾರ್ಥವಾಹಕ ಸಂಘ ಮುಂದೆ ಮುಂದೆ ಸಾಗುತ್ತಿದೆ. ವಿವಿಧ ಮತವಿಭಾಗದಲ್ಲಿರುವವರು ಈ ಸಂಘಟನೆ ಮೂಲಕ ಪೈಗಂಬರರ ಪತಾಕೆಯ ಕೆಳಗೆ ಒಂದುಗೂಡುತ್ತಿದ್ದಾರೆ. ಮುಸ್ಲಿಮರಲ್ಲಿರುವ ಸದ್ಗುಣ ಸಂಪನ್ನರು ಕಾಲದ ಇಮಾಮರಿಗೆ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಿಕೊಂಡು ಪಂಗಡಗಳಿಂದಲೂ ಬಿಕ್ಕಟ್ಟಿನಿಂದಲೂ ಅಗಲಿದ್ದ ಆದಿಕಾಲ ಮುಸ್ಲಿಮರ ಇಸ್ಲಾಮಿಗೆ ಪ್ರವೇಶಿಸುತ್ತಿದ್ದಾರೆ. ಅಂದರೆ, ಯಥಾರ್ಥ ಇಸ್ಲಾಮಿಕ ಅಧ್ಯಾಪನೆಯೆಡೆಗೆ ಅವರು ಬರುತ್ತಿದ್ದಾರೆ. ಪೈಗಂಬರರ ಶಿಷ್ಯಂದಿರು ನಮ್ಮ ಮುಂದೆ ಪ್ರದರ್ಶಿಸಿದ ಅತ್ಯುತ್ಕೃಷ್ಟವಾದ ಜೀವಿತ ಮಾದರಿಯನ್ನೇ ಈ ಅಹ್ಮದೀ ಮುಸ್ಲಿಮರು ಪ್ರದರ್ಶಿಸುತ್ತಿದ್ದಾರೆ. ಆ ಶಿಷ್ಯಂದಿರು ಜೀವವನ್ನು ಬಲಿಯರ್ಪಿಸುತ್ತಾ ಇಸ್ಲಾಮಿನ ಪತಾಕೆ ಯನ್ನು ಬೀಳದಂತೆ ಕಾಪಾಡಿದ್ದರು. ಅವರು ಆರಾಧನೆಯ ಮಟ್ಟವನ್ನು ಉನ್ನತಗೊಳಿಸಲು ಪರಿಶ್ರಮಪಟ್ಟರು. ಧನವನ್ನೂ ಜೀವವನ್ನೂ ದೇವಸಂಪ್ರೀತಿ ಪಡೆಯಲು ತಮ್ಮಿಂದಾದಷ್ಟು ವ್ಯಯಿಸಿದರು. ಅಲ್ಲಾಹ್ ಮತ್ತು ಅವನ ಪ್ರವಾದಿಗೋಸ್ಕರ ಅವರು ಸೆರೆಮನೆವಾಸ ಮಾಡಿದರು. ಇಂದು ಈ ರೀತಿಯ ಮಾದರಿಗಳನ್ನು ತೋರಿಸುತ್ತಿರುವವರು ಅಹ್ಮದಿಯರು ಮಾತ್ರ. ಇವರು ಪೈಗಂಬರರ ಪತಾಕೆಯನ್ನು ಲೋಕದಲ್ಲೆಲ್ಲಾ ಹಾರಿಸಲಿಕ್ಕಾಗಿ ಸರ್ವ ವಿಧ ತ್ಯಾಗಗಳಿಗೆ ಸಿದ್ಧರೆಂದು ಘೋಷಿಸುತ್ತಾರೆ. ಮಾತ್ರವಲ್ಲ, ಅಂತಹ ತ್ಯಾಗಗಳನ್ನು ಅವರು ಸಮರ್ಪಿಸುತ್ತಲೂ ಇದ್ದಾರೆ. ಇಸ್ಲಾಮಿನ ನಾಮದಲ್ಲಿ ಇಸ್ಲಾಮಿಕ ದೇಶಗಳಲ್ಲಿ ಅಹ್ಮದಿಯತಿನ ವಿರುದ್ಧ ಜನರ ಮನಸ್ಸುಗಳಲ್ಲಿ ವಿಷ ತುಂಬಿಸುತ್ತಿರುವ ಎಲ್ಲ ಮುಸ್ಲಿಂ ದೇಶಗಳಲ್ಲೂ ಈ ದೃಶ್ಯವನ್ನು ನಾವು ಕಾಣುತ್ತೇವೆ. ಈ ತಪ್ಪಾದ ವರ್ತನೆ ಮಾಡುವವರಿಗೆ ಕೆಲವು ಸರಕಾರಗಳು ತಮ್ಮ ಕಾರ್ಯಲಾಭಕ್ಕೋಸ್ಕರ ನೆರವೀಯುತ್ತವೆ. ಆದರೆ ಈ ಕಷ್ಟಗಳೆಲ್ಲ ಆದಿಕಾಲ ಮುಸ್ಲಿಮರು ಅನುಭವಿಸಿದ ಆ ಭೀಕರ ದಿನಗಳನ್ನು ಅಹ್ಮದಿಯರ ನೆನಪಿಗೆ ತರುತ್ತವೆ. ಹಝ್ರತ್ ಪೈಗಂಬರರ[ಸ] ಕಾಲದಲ್ಲಿ ಕಷ್ಟಗಳಿದ್ದವು. ಆದರೆ ಸುಖದ ಸ್ಥಿತಿಯೂ ಇತ್ತು. ಮದೀನಕ್ಕೆ ಬಂದ ನಂತರ ವಿರೋಧ ಮತ್ತು ಕಷ್ಟಗಳ ಯುಗ ಕೊನೆಗೊಳ್ಳಲಿಲ್ಲ. ಮುಸ್ಲಿಮರ ವಿರುದ್ಧ ಯುದ್ಧ ಸಾರಲಾಯಿತು. ವಂಚನೆ ಯಿಂದ ಅವರನ್ನು ಹುತಾತ್ಮರನ್ನಾಗಿ ಮಾಡಿದರು. ಬಿಅ್‌ರೆ ಮೌಊನ ಎಂಬ ಘಟನೆ ಪ್ರಸಿದ್ಧವಾಗಿದೆ. ಹಾಫಿಝ್‌ಗಳಾಗಿದ್ದ (ಖುರ್‌ಆನ್ ಕಂಠಪಾಠ ಮಾಡಿದವರು) 70 ಶಿಷ್ಯಂದಿರನ್ನು ವಂಚನೆಯಿಂದ ಅಲ್ಲಿ ನಿಷ್ಕರುಣೆಯಿಂದ ಹತ್ಯೆಗೈಯ್ಯಲಾಯಿತು. ರಜೀಅ್‌ಎಂದು ಹೆಸರಿಸಲಾದ ಇನ್ನೊಂದು ಘಟನೆ ಸಹ ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ. ಹತ್ತು ಶಿಷ್ಯಂದಿರನ್ನು ವಂಚನೆಯಿಂದ ಅಲ್ಲಿ ಕೊಲೆಮಾಡಲಾಗಿತ್ತು. ಈ ಎರಡು ಘಟನೆಗಳ ವಿವರ ಒಂದೇ ಸಮಯದಲ್ಲಿ ಪೈಗಂಬರರಿಗೆ ಲಭಿಸಿತೆಂದು ವರದಿಗಳಿಂದ ತಿಳಿದುಬರುತ್ತದೆ. ಈ ಮೂಲಕ ಆ ಮಹಾತ್ಮರು ಅತ್ಯಂತ ದುಃಖಿತರಾದರು. ಪೈಗಂಬರ್[ಸ] ಮೂವತ್ತು ದಿವಸ ಸುಬ್‌ಹಿ ನಮಾಝ್‌ನಲ್ಲಿ ಈ ಶತ್ರುಗಳ ವಿರುದ್ಧ ಹೀಗೆ ಪ್ರಾರ್ಥಿಸುತ್ತಿದ್ದರೆಂದು ವರದಿಗಳಲ್ಲಿ ಹೇಳಲಾಗಿದೆ: "ನನ್ನ ಪ್ರಭೂ, ನೀನು ನಮ್ಮ ಮೇಲೆ ಕರುಣೆದೋರು. ಇಸ್ಲಾಮಿನ ಶತ್ರುಗಳ ಕೈಗಳನ್ನು ನೀನು ತಡೆ. ಅವರು ನಿನ್ನ ಧರ್ಮವನು ಅಳಿಸಿಹಾಕಲು ಇಷ್ಟು ಕ್ರೂರ ಮತ್ತು ಕಠೋರ ರೀತಿಯಲ್ಲಿ ನಿಷ್ಕಳಂಕರಾದ ಮುಸ್ಲಿಮರ ರಕ್ತ ಹರಿಸುತ್ತಿದ್ದಾರೆ."

ಸಂಕ್ಷಿಪ್ತವಾಗಿ, ಆ ಕಾಲದಲ್ಲೂ ಕಷ್ಟ ಮತ್ತು ಸುಖದ ದಿನಗಳು ಒಟ್ಟೊಟ್ಟಿಗೆ ಬರುತ್ತಿದ್ದವು. ಅಂದು ಮುಸ್ಲಿಮರ ರಕ್ತ ಹರಿಸಲ್ಪಟ್ಟಿದ್ದರೂ ನವಾಗತರು ಇಸ್ಲಾಮ್‌ನಲ್ಲಿ ಪ್ರವೇಶಿಸಿ ಇಸ್ಲಾಮಿಗೆ ಶಕ್ತಿ ನೀಡುತ್ತಿದ್ದರು. ಪ್ರತಿಯೊಂದು ಕಷ್ಟದ ನಂತರ ಒಂದು ಉನ್ನತ ವಿಜಯ ಮುಸ್ಲಿಮರ ಪಾಲಾಯಿತು. ಪೈಗಂಬರರ[ಸ] ಪ್ರತಿಪುರುಷರಾಗಿ ಆಗಮಿಸಿದ ಪೈಗಂಬರರ ಪ್ರೀತಿಪಾತ್ರರಾದ ವಾಗ್ದತ್ತ ಮಸೀಹರ ಕಾಲದಲ್ಲೂ ಈ ಭವಿಷ್ಯೋಕ್ತಿ ಈಡೇರುತ್ತಿದೆ. ಪವಿತ್ರ ಖುರ್‌ಆನಿನಲ್ಲಿ, ಕಷ್ಟದ ಬಳಿಕ ಸುಖವಿದೆಯೆಂದು ಎರಡು ಸಲ ಅಲ್ಲಾಹು ಹೇಳಲು ಕಾರಣವೇನೆಂದರೆ, ಆದಿಕಾಲದಲ್ಲೂ ಹೀಗೆ ಸಂಭವಿಸಿದಂತೆ ಅಂತ್ಯಕಾಲದಲ್ಲೂ ಈ ಭವಿಷ್ಯ ನುಡಿ ಇದೇ ರೀತಿ ಈಡೇರುವುದೆಂದು ಸೂಚಿಸಲಿಕ್ಕಾಗಿದೆ. ನಾಮಧಾರಿಗಳಾದ ಮುಲ್ಲಾ ವರ್ಗ ಇಚ್ಛಿಸಿದರೂ ಇಲ್ಲವಾದರೂ ಇಸ್ಲಾಮಿನ ನವೋತ್ಥಾನ ಅಹ್ಮದಿಯತಿನೊಂದಿಗೆ ಜೋಡಿಸಲ್ಪಟ್ಟಿದೆ. ಶತ್ರುಗಳು ಮೊದಲಿಗಿಂತ ಹೆಚ್ಚಾಗಿ ಕಷ್ಟಕೊಡುತ್ತಿದ್ದಾರೆ. ವಿಜಯ ಮತ್ತು ಸಹಾಯ ಸಹ ಮೊದಲಿಗಿಂತ ಹೆಚ್ಚಾಗಿ ಲಭಿಸುತ್ತಿವೆ. 1883ರಲ್ಲಿ ಬೈಅತ್ ಸ್ವೀಕರಿಸುವುದಕ್ಕೆ ಮುಂಚೆ, ವಾದ ಕೂಡ ಹೊರಡಿಸುವುದಕ್ಕೆ ಮುಂಚೆ ಹಝ್ರತ್ ಮಸೀಹ್ ಮೌಊದರೊಡನೆ[ಅ] ಅಲ್ಲಾಹು ಹೇಳಿದನು: "ಬಅ್‌ದ ಉಸ್‌ರಿನ್ ಯುಸ್‌ರಾ" – ಕಷ್ಟಗಳು ಬರುವುವು. ಆದರೆ ಅವು ಅಲ್ಪಕಾಲ. ಅದರ ಬಳಿಕ ವಿಜಯ ಮತ್ತು ಸಹಾಯ ಲಭಿಸುವುದು. ಇದನ್ನು ನಾನು ಹೀಗೆ ತರ್ಜುಮೆ ಮಾಡಲು ಕಾರಣವೇನೆಂದರೆ, ಹಝ್ರತ್ ಮಸೀಹ್ ಮೌಊದ್[ಅ] ಈ ರೀತಿ ತರ್ಜುಮೆ ಮಾಡಿದ್ದಾರೆ. ಉಸ್‌ರ್ ಎಂಬುದರ ಗಡಿರೇಖೆ ನಿಶ್ಚಯಿಸಲ್ಪಟ್ಟಿದೆ. ಆದರೆ ಯುಸ್‌ರ್‌ನ ಗಡಿರೇಖೆಗಳನ್ನು ನಿರ್ಧರಿಸದೆ ಬಹಳ ವಿಶಾಲಗೊಳಿಸಲಾಗಿದೆ. ಕಷ್ಟಗಳು ಬರುವುವು. ತೊಂದರೆಗಳನ್ನು ಅನುಭವಿಸಬೇಕಾದೀತು. ಆದರೆ ಪ್ರತಿಯೊಂದು ಕಷ್ಟ ಮತ್ತು ಉಪದ್ರ ಅತಿ ಮಹತ್ತರ ವಿಜಯಗಳಲ್ಲಿ ಕೊನೆಗೊಳ್ಳುವುದು. ಇದು ದೈವಿಕ ಸಂಘಟನೆಗಳ ವೈಶಿಷ್ಟ್ಯವಾಗಿದೆ. ಖಿಯಾಮತ್ ದಿನದ ತನಕ ಪ್ರತಾಪದೊಂದಿಗೆ ನೆಲೆನಿಲ್ಲಿಸಲಾಗುವುದೆಂದು ಯಾವ ಧರ್ಮದ ಕುರಿತು ಅಲ್ಲಾಹು ವಾಗ್ದಾನವಿತ್ತಿರುವನೋ ಆ ಧರ್ಮದಲ್ಲಿ ಈ ವಾಗ್ದಾನ ಈಡೇರಿಯೇ ತೀರುವುದು. ಅದಕ್ಕಿರುವ ಎಲ್ಲ ಕುರುಹುಗಳು ಈಡೇರುತ್ತಿರುವುದಾಗಿ ನಾವು ಕಾಣುತ್ತೇವೆ. ಇದನ್ನೆಲ್ಲ ಕಾಣುವ ನಾವು ಈ ಉಲಮಾವರ್ಗದ ವಿರೋಧ ಜಮಾಅತಿಗೆ ಏನೂ ಹಾನಿ ಮಾಡುವುದಿಲ್ಲವೆಂದು ದೃಢವಾಗಿ ಯಾಕೆ ನಂಬಬಾರದು?

ವ್ಯಕ್ತಿಗಳ ಜೀವ ಬಲಿಯರ್ಪಿಸುವುದರ ಮೂಲಕ ಒಂದು ಸಮುದಾಯ ನಾಶವಾಗುವುದಿಲ್ಲ. ಬದಲು, ಆವೇಶದಿಂದಲೂ ಪ್ರಾಮಾಣಿಕತೆಯಿಂದಲೂ ಸಮರ್ಪಣೆಯಿಂದಲೂ ಜೀವ ತ್ಯಜಿಸುವಾಗ, ಜೀವ ತ್ಯಜಿಸಲಾಗುವುದೆಂದು ಪ್ರತಿಜ್ಞೆ ಮಾಡಿ ಮುನ್ನೇರುವಾಗ ಅದು ಆ ಸಮುದಾಯದ, ಆ ಜಮಾಅತಿನ ಆಯುಷ್ಯ ಮತ್ತು ಶಕ್ತಿಯನ್ನು ವೃದ್ಧಿಗೊಳಿಸುತ್ತದೆ. ಈ ತ್ಯಾಗಗಳನ್ನೂ ಮನೋದ್ವೇಗಗಳನ್ನೂ ಅಲ್ಲಾಹನ ವಾಗ್ದಾನಗಳು ವೃದ್ಧಿಗೊಳಿಸಿ ಇದನ್ನು ಶಕ್ತಿಪಡಿಸುವಾಗ ಈ ತ್ಯಾಗಗಳು ಮತ್ತು ಜೀವಾರ್ಪಣೆಗಳೆಲ್ಲ ಕಿರಿದಾಗಿ ತೋಚುತ್ತವೆ. ವಿಜಯ ಹೊಸ ರೂಪದಲ್ಲಿ ಪ್ರಕಟಣೆಗೊಳ್ಳುತ್ತದೆ. ಹಝ್ರತ್ ಮಸೀಹ್ ಮೌಊದರೊಡನೆ ಸಹ ಅಲ್ಲಾಹು ವಾಗ್ದಾನ ಮಾಡಿದ್ದಾನೆ. ವಿವಿಧ ರೀತಿಯಲ್ಲಿ ವಿವಿಧ ಸಂದರ್ಭಗಳಲ್ಲಿ ಈ ವಾಗ್ದಾನ ನೀಡಲಾಗಿದೆ. ವಾದಕ್ಕಿಂತ ಮುಂಚೆಯೇ ಆಶ್ವಾಸನೆಯ ವಚನಗಳನ್ನು ಅಲ್ಲಾಹು ಆ ಮಹಾತ್ಮರಿಗೆ ನೀಡುತ್ತಿದ್ದನು: ನಾನು ಯಾವ ಉದ್ದೇಶಕ್ಕಾಗಿ ನಿನ್ನನ್ನು ನಿಯುಕ್ತಗೊಳಿಸಿದ್ದೇನೋ, ಅದು ಎಷ್ಟು ಪ್ರಯಾಸಕರವಾಗಿದ್ದರೂ ಸರಿ, ನಾನು ನಿನ್ನ ಜೊತೆಗಿದ್ದೇನೆ. ನೀನು ವಿಜಯ ದರ್ಶಿಸುವೆ ಎಂದು.

ಈ ಶುಭವಾರ್ತೆಗಳು ಇರುವಾಗ ವಿರೋಧಿಗಳು ಜಮಾಅತಿಗೆ ನೀಡುತ್ತಿರುವ ಕಷ್ಟನಷ್ಟಗಳಿಂದ ಜಮಾಅತಿಗೆ ಏನಾದರೂ ಹಾನಿ ಯುಂಟಾದೀತೆಂದು ನಾವು ಹೇಗೆ ಭಾವಿಸುತ್ತೇವೆ? ವಿರೋಧಿಗಳಿಗೆ ಅವರ ಗುರಿಸಾಧಿಸಲು ಆಗುವುದಿಲ್ಲವೆಂಬುದೇ ವಿಜಯದೆಡೆಗೆ ನೆಗೆತದ ಲಕ್ಷಣವಾಗಿದೆ. ಜಗತ್ತೆಲ್ಲ ಕಾಣುವಂತೆ ಪ್ರತ್ಯಕ್ಷ ವಿಜಯ ಕಹಳೆ ಖಂಡಿತ ವಾಗಿಯೂ ಮೊಳಗಿಸಲ್ಪಡುವುದು. ಶತ್ರುಪಕ್ಷ ಆಗಿಂದಾಗ್ಗೆ ಅಹ್ಮದಿಯರನ್ನು

ಪೀಡಿಸುತ್ತಿದೆ. ಈಜಿಪ್ಟಿನಲ್ಲಾಗಲಿ, ಇಂಡೋನೇಶಿಯಾದಲ್ಲಾಗಲಿ, ಮಲೇಶ್ಯಾದಲ್ಲಾಗಲಿ, ಶ್ರೀಲಂಕಾದಲ್ಲಾಗಲಿ, ಅಲ್ಲೆಲ್ಲ ಪೀಡಿಸಲಾಗುತ್ತದೆ. ಕೆಲವು ದಿನಗಳ ಮೊದಲು ಬಂಗ್ಲಾದೇಶದ ಗ್ರಾಮ ಪ್ರದೇಶವಾದ ಚಾಂದ್‌ತಾರಾ ಜಮಾಅತಿನಲ್ಲಿ ಮಸೀದಿಯನ್ನು ವಿಶಾಲಗೊಳಿಸುವ ಪ್ರಕ್ರಿಯೆಗಳು ನಡೆಯುತ್ತಿದ್ದವು. ಅಲ್ಲಿರುವ ವಿರೋಧಿಗಳು ಆ ಜಮಾಅತನ್ನು ಆಕ್ರಮಿಸಿ ಕೆಲವರನ್ನು ಗಾಯಗೊಳಿಸಿದರು. ಮಾತ್ರವಲ್ಲ, ಮಸೀದಿಯನ್ನು ನಾಶಗೆಡವಿದರು. ಅಹ್ಮದಿಯರ ಮನೆಗಳಿಗೂ ಹಾನಿ ಮಾಡಿದರು. ಆ ಬಡವರ ಸಾಮಾನು ಸರಂಜಾಮುಗಳನ್ನು ಬೆಂಕಿಗಾಹುತಿ ಮಾಡಿದರು. ಪುರುಷರ ಮೇಲೆ ಕಠಿಣವಾಗಿ ದೌರ್ಜನ್ಯವೆಸಗಿದರು. ಈ ಬಗ್ಗೆ ವಿಚಾರಣೆ ನಡೆಸಲು ನಮ್ಮ ಒಂದು ತಂಡ ಜನರು ಢಾಕಾದಿಂದ ಅಲ್ಲಿಗೆ ಹೋಗಿದ್ದರು. ಸ್ತ್ರೀಯರೊಡನೆ ಅವರ ಅವಸ್ಥೆ ಕುರಿತು ಕೇಳಿದಾಗ ಸಾಮಾನ್ಯವಾಗಿ ಅಬಲೆಯರಾದ ಸ್ತ್ರೀಯರ ಪೈಕಿ ಓರ್ವ ತರುಣೀರತ್ನ ಮುಗುಳ್ನಗುತ್ತಾ ಹೇಳಿದ್ದೇನೆಂದರೆ, ಈ ಶತ್ರುಗಳು ಎಷ್ಟೇ ನಾಶನಷ್ಟ ಮಾಡಿದರೂ ನಮ್ಮ ಈಮಾನನ್ನು (ನಂಬಿಕೆಯನ್ನು) ಕಸಿಯಲು ಇವರಿಗೆ ಸಾಧ್ಯವಿಲ್ಲ. ಆ ಮಹಿಳೆಗಿದ್ದ ಒಂದೇ ಒಂದು ದುಃಖ, ತಮಗೆ ಇಷ್ಟರವರೆಗೆ ಮಸೀದಿಯನ್ನು ಪುನರ್ನಿರ್ಮಿಸಲು ಸಾಧ್ಯವಾಗಲಿಲ್ಲವೆಂಬುದಾಗಿದೆ. ಹೀಗೆ ಹೇಳಿ ಅವರು ಅಳುತ್ತಿದ್ದರು.

ಪಾಕಿಸ್ಥಾನದ ಅವಸ್ಥೆ ಎಲ್ಲರಿಗೂ ಗೊತ್ತು. ಅಕ್ರಮ ಮತ್ತು ಕ್ರೂರತೆಯ ಹೊಸ ದುಃಖಭರಿತ ಪುಟಗಳು ಅಲ್ಲಿ ರಚಿಸಲ್ಪಡುತ್ತಿವೆ. ಇವರಿಗೆ ಅಲ್ಲಾಹನ ಶಕ್ತಿಪ್ರಭಾವದ ಬಗ್ಗೆ ಸ್ವಲ್ಪವಾದರೂ ವಿಶ್ವಾಸವಿಲ್ಲವೆಂದು ತೋರುತ್ತದೆ. ಅಲ್ಪವಾದರೂ ನಂಬಿಕೆಯಿರುತ್ತಿದ್ದರೆ ಅಲ್ಲಾಹನ ನಾಮದಲ್ಲಿ ಈ ವಿಧ ದುಷ್ಕೃತ್ಯಗಳನ್ನು ಅವರು ಮಾಡುತ್ತಿರಲಿಲ್ಲ. ಕಳೆದ ರಮಝಾನ್ ಬಳಿಕ ಈ ತನಕ ಅಲ್ಲಿ 99 ಮಂದಿ ಹುತಾತ್ಮರಾದರು. ಒಂದೇ ದಿನದಲ್ಲಿ ಅವರು 86 ಮಂದಿಯನ್ನು ಹತ್ಯೆಗೆಯ್ದರು. ಅಹ್ಮದಿಯರ ರಕ್ತಕ್ಕೆ ಏನೂ ಬೆಲೆಯಿಲ್ಲವೆಂದು ಈ ದುಷ್ಕರ್ಮಿಗಳು ಭಾವಿಸುತ್ತಾರೋ? ಅಹ್ಮದಿಯರ ಈ ರಕ್ತಹರಿಸುವವರು ಒಂದು ವಿಚಾರವನ್ನು ತಿಳಿದಿರುವುದು ಒಳಿತು. ಈ ಪ್ರತಿಯೊಂದು ಹನಿ ರಕ್ತಕ್ಕೆ ಈ ದುಷ್ಕರ್ಮಿಗಳಿಂದ ಅಲ್ಲಾಹು ಬದಲು ಕೇಳುವನು. ಅವನು ಬದಲು ಕೇಳಿಯೇ ಬಿಡುವನು. ಈ ಪ್ರತಿಯೊಂದು ಹನಿ ರಕ್ತವನ್ನು ಅವನು ಸ್ವೀಕರಿಸಿ ನಮ್ಮನ್ನು ಆ ಸ್ಪಷ್ಟವಾದ ವಿಜಯದ ಸಮೀಪಕ್ಕೆ ಕೊಂಡೊಯ್ಯುತ್ತಿದ್ದಾನೆ.

ಲಾಹೋರ್ ಘಟನೆ ಬಳಿಕ ಪೂರ್ವಾಧಿಕ ವಿಪುಲವಾದ ರೀತಿಯಲ್ಲಿ ಲೋಕದಲ್ಲಿ ಅಹ್ಮದಿಯಾ ಜಮಾಅತಿನ ಬಗ್ಗೆ ತಿಳಿಯಲಾಯಿತು. ಮೊದಲೇ ಲೋಕದಲ್ಲಿ ತಿಳಿಯಲ್ಪಟ್ಟಿದ್ದರೂ ಲೋಕವು ಜಮಾಅತಿನ ಬಗ್ಗೆ ಗಮನಿಸಿರಲಿಲ್ಲ. ಈಗ ಜಮಾಅತಿನ ಬಗ್ಗೆ ಜನರು ಗಮನಿಸಲು ತೊಡಗಿದ್ದಾರೆ. ಜಮಾಅತಿನೆಡೆಗೆ ಜನರ ಗಮನ ಸೆಳೆಯಲು ನಮ್ಮ ಶಕ್ತ್ಯಾನುಸಾರ ನಾವು ಪ್ರಯತ್ನಿಸುವುದಾದರೆ ಅದಕ್ಕೆ ದಶಗಟ್ಟಲೆ ವರ್ಷಗಳು ಬೇಕಾಗುತ್ತಿತ್ತು. ಅಲ್ಲಾಹನ ವಾಗ್ದಾನ ಪ್ರಕಾರ ಈ ಹುತಾತ್ಮರು ಶಹಾದತ್ ಪದವಿ ಗಳಿಸಿಕೊಂಡು ಪರಲೋಕದಲ್ಲಿ ನಿತ್ಯಜೀವನ ಪಡೆದರು. ಮಾತ್ರವಲ್ಲ, ಇಹಲೋಕದಲ್ಲಿ ತಮ್ಮ ಜೀವಾರ್ಪಣೆ ಮಾಡಿ ಹಝ್ರತ್ ಮಸೀಹ್ ಮೌಊದರ(ಅ) ಸಂದೇಶವನ್ನು ಜಗತ್ತಿನೆಲ್ಲೆಡೆ ತಲಪಿಸಿದರು. ಸಂದೇಶವನ್ನು ಅಲ್ಲಾಹನು ತಲಪಿಸುತ್ತಾನೆ. ಅದನ್ನು ಅವನು ಮಾಡುತ್ತಿದ್ದಾನೆ. ಅದಕ್ಕಿರುವ ಮಾರ್ಗಗಳನ್ನು ಅವನು ಸಿದ್ಧಗೊಳಿಸುತ್ತಾನೆ. ಅದಕ್ಕಿರುವ ಒಂದು ಶೀಘ್ರ ಮಾರ್ಗವಾಗಿ ಈ ಶಹಾದತುಗಳನ್ನು ಅವನು ಮಾಡಿದನು. ಆದುದರಿಂದ ತ್ಯಾಗಿಗಳಾದ ಇವರು ಅನುಗ್ರಹೀತರು. ಪಾಕಿಸ್ಥಾನದಲ್ಲಿ ಈಗ ಡಜನುಗಟ್ಟಲೆ ಮುಸ್ಲಿಮರೂ ಅಮುಸ್ಲಿಮರೂ ತೀವ್ರವಾದಿಗಳ ಆಕ್ರಮಣಕ್ಕೆ ಗುರಿಯಾಗಿ ತಮ್ಮ ಜೀವವನ್ನು ತೊರೆಯುತ್ತಿದ್ದಾರೆ. ಹಲವು ನಿಷ್ಕಳಂಕ ಜೀವಗಳು ನಂದಿ ಹೋಗುತ್ತವೆ. ಮಕ್ಕಳು ಅನಾಥರಾಗುತ್ತಾರೆ. ಸ್ತ್ರೀಯರು ವಿಧವೆಯರಾಗುತ್ತಾರೆ. ವೃದ್ಧ ಮಾತಾಪಿತರು ತಮ್ಮ ಮಕ್ಕಳ ನೆರವು ಇಲ್ಲದವರಾಗುತ್ತಾರೆ. ಆದರೆ ಈ ಸಾಯುವವರಿಗೆ ಗೊತ್ತಿಲ್ಲ – ತಾವು ಯಾಕೆ ಕೊಲ್ಲಲ್ಪಡುತ್ತಿದ್ದೇವೆಂದು. ಮಾತ್ರವಲ್ಲ, ತಮ್ಮ ಬಂಧುಗಳನ್ನು ಯಾಕೆ ಕೊಲ್ಲಲಾಯಿತೆಂದು ಇವರ ಬಂಧು ಬಾಂಧವರಿಗೆ ಗೊತ್ತಿಲ್ಲ. ಆದರೆ ಪ್ರತಿಯೊಬ್ಬ ಅಹ್ಮದಿ ಪಾಕಿಸ್ಥಾನದಲ್ಲಿ ತನ್ನ ಜೀವ ಅಪಾಯದಲ್ಲಿದೆಯೆಂದು ತಿಳಿದುಕೊಂಡೇ ದಿನರಾತ್ರಿಗಳನ್ನು ಕಳೆಯುತ್ತಾನೆ. ಅವರಿಗೆ ಗೊತ್ತು – ತಮ್ಮ ಜೀವ ಬಲಿಯಾಗುವುದು ಅತ್ಯುನ್ನತವಾದ ಒಂದು ಲಕ್ಷ್ಯಕ್ಕೋಸ್ಕರವೆಂದು. ಹುತಾತ್ಮರ ಬಂಧುಮಿತ್ರಾದಿಗಳಿಗೂ ಮಕ್ಕಳಿಗೂ ವಿಧವೆಯರಿಗೂ ಮಾತಾಪಿತರಿಗೂ ಇವರು ಮಹತ್ತರ ಲಕ್ಷ್ಯಕ್ಕೋಸ್ಕರ ತಮ್ಮ ಜೀವವನ್ನು ಬಲಿಕೊಟ್ಟಿದ್ದಾರೆಂದು ಸರಿಯಾಗಿ ತಿಳಿದಿರುತ್ತದೆ. ಹುತಾತ್ಮರು ತಮ್ಮ ಜೀವಾರ್ಪಣೆ ಮಾಡಿ ನಿತ್ಯ ಜೀವನ ಪಡೆದಾಗ ಅವರ ಉತ್ತರಾಧಿಕಾರಿಗಳ ಶಿರಸ್ಸು ಅಭಿಮಾನದಿಂದ ಎತ್ತಿ ಹಿಡಿಯಲು ಹೇತುವಾಯಿತು. ತಮ್ಮನ್ನು ಅಗಲಿದ ತಮ್ಮ ಪ್ರೀತಿಪಾತ್ರರು ತಮ್ಮ ಸ್ಥಾನವನ್ನು ಎಷ್ಟರ ಮಟ್ಟಿಗೆ ಉನ್ನತಗೊಳಿಸಿರುವರೆಂದು ನೆನೆಸಿ ತಾವು ಆಶ್ಚರ್ಯಚಕಿತರಾಗಿದ್ದೇವೆಂದು ಬರೆದ ಹಲವು ಪತ್ರಗಳು ನನಗೆ ತಲಪುತ್ತಿರುತ್ತವೆ. ಇದು ವೈಯಕ್ತಿಕ ಲಾಭವಾದರೂ ಸಾಮೂಹಿಕವಾಗಿಯೂ ಜಮಾಅತಿಗೆ ಇದರಿಂದ ಮಹತ್ತರ ಲಾಭ ಲಭಿಸುತ್ತಿದೆ. ಅದರಲ್ಲಿ ಪ್ರಧಾನವಾದುದು ಅಹ್ಮದಿಯರ ವಿಶ್ವಾಸದಲ್ಲಿ ಹೆಚ್ಚಳವಾಗಿದೆ. ಇದಕ್ಕೆ ಸಂಬಂಧಿಸಿದ ಪತ್ರಗಳೂ ನನಗೆ ಬರುತ್ತಿವೆ. ಅವರು ಪತ್ರಗಳಲ್ಲಿ ಬರೆಯುತ್ತಾರೆ ಇವರು ನೀಡಿದ ತ್ಯಾಗಗಳ ಫಲವಾಗಿ ತಮ್ಮ ಭಯವೆಲ್ಲ ದೂರವಾಗಿದೆ. ಅಲ್ಲಾಹನ ಸಾಮೀಪ್ಯಗಳಿಸುವ ಅತಿಯಾದ ಆವೇಶ ಉಕ್ಕಿಬರುತ್ತದೆ. ಮುಂಚೆ ಇದ್ದ ಆಲಸ್ಯಗಳನ್ನು ಹೋಗಲಾಡಿಸಲು ನಮ್ಮ ಗಮನ ಹರಿದಿದೆ. ಅದರೊಂದಿಗೆ, ನಾನು ಹೇಳಿದಂತೆ ಜಮಾಅತಿನ ಪ್ರಚಾರ ಮೈದಾನ ಈ ಮೂಲಕ ತೆರೆಯಲ್ಪಟ್ಟಿದೆ.

ನಮ್ಮ ಹುತಾತ್ಮರು ಅತಿ ಮಹತ್ತರ ತ್ಯಾಗ ಅರ್ಪಿಸಿದ್ದಾರೆಂಬುದಕ್ಕೆ ಏನೂ ಸಂಶಯವಿಲ್ಲ. ಆದರೆ ಈ ಮಹತ್ತಾದ ತ್ಯಾಗದ ಬಳಿಕ ನಾವು ಕಾಣುತ್ತಿರುವ ಅತಿ ಮಹತ್ತರ ಕ್ರಾಂತಿಯ ಚಲನೆಗಳು ನಮ್ಮೊಡನೆ ಹೇಳುವುದೇನೆಂದರೆ, ಲೋಕವು ಇದನ್ನು ಕಂಡು ತಮ್ಮಲ್ಲಿ ಒಂದು ಕ್ರಾಂತಿಯನ್ನು ಉಂಟುಮಾಡುವಾಗ ಯಥಾರ್ಥ ಹಬ್ಬವೆಂದು. ಲೋಕ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪತಾಕೆಯ ಕೆಳಗೆ ಜಮಾಯಿಸುವಾಗ ನಮಗೆ ಯಥಾರ್ಥ ಹಬ್ಬವನ್ನು ಆಚರಿಸಲು ಸಾಧ್ಯವಾಗುವುದು. ಅಹ್ಮದಿಯರು ಅನುಭವಿಸುತ್ತಿರುವ ಈ ದೌರ್ಜನ್ಯದ ಕಾಲ ನಮ್ಮೊಡನೆ ಹೇಳುವುದೇನೆಂದರೆ, ಖಂಡಿತವಾಗಿಯೂ ಉಸ್‌ರ್‌ನ (ಕಷ್ಟದ) ಕಾಲ ನಮಗೆ ಇದೆ. ಆದರೆ ಮುಹಮ್ಮದೀ ಮಸೀಹ್‌ರಿಗೆ ನೀಡಿದ ವಾಗ್ದಾನ ಪ್ರಕಾರ ಕಷ್ಟದ ಬಳಿಕ ಯುಸ್‌ರ್‌ನ (ಸುಖದ) ಸ್ಥಿತಿ ಉಂಟಾಗುವುದು. ಅಂದು ತ್ಯಾಗ ಸ್ಮರಣೆಯ ಪ್ರಭಾಪೂರ್ಣ ಹೊಸ ಅಧ್ಯಾಯ ರಚಿಸಲ್ಪಡುವುದು.

ಅಹ್ಮದಿಯತ್ ಅಥವಾ ಯಥಾರ್ಥ ಇಸ್ಲಾಮಿನ ವಿಜಯ ಕಹಳೆ ಖಂಡಿತವಾಗಿಯೂ ಮೊಳಗಿಸಲ್ಪಡುವುದು. ಅಂದು ಆ ವಿಜಯೋತ್ಸಾಹದಲ್ಲಿ ಈದ್ ಆಚರಿಸುವಾಗ ಈ ಹುತಾತ್ಮರನ್ನು ನಿಶ್ಚಯವಾಗಿಯೂ ಸ್ಮರಿಸಲಾಗುವುದು. ಇಂದು ನೀವು ಆಚರಿಸುವ ಈ ವಿಜಯೋತ್ಸವ ಯಥಾರ್ಥದಲ್ಲಿ ತಮ್ಮ ರಕ್ತವನ್ನು ಧರ್ಮಕ್ಕೋಸ್ಕರ ಹರಿಸಿದ ಹುತಾತ್ಮರ ತ್ಯಾಗದ ಫಲವೆಂದು ಅಂದು ಲೋಕದೊಡನೆ ಹೇಳಲಾಗುವುದು. ಅಹ್ಮದಿಯರ ರಕ್ತ ಬೆಲೆಯಿಲ್ಲದ್ದೆಂದು ಶತ್ರುಗಳು

ತಿಳಿದಿರುವುದು ಬೇಡ! ಈ ರಕ್ತದ ಮೌಲ್ಯ ದಿನಂಪ್ರತಿ ವರ್ಧಿಸುತ್ತಿದೆ. ಇಸ್ಲಾಮಿನ ಆದಿಕಾಲ ಪ್ರವಾದಿ ಶಿಷ್ಯಂದಿರು ಸಮರ್ಪಿಸಿದ ತ್ಯಾಗಗಳನ್ನು ಲೋಕ ಇಂದಿನ ತನಕ ಮರೆತಿಲ್ಲ. ಅವರ ಕಾಲಹೆಜ್ಜೆಗಳನ್ನು ಹಿಂಬಾಲಿಸುತ್ತಾ ಮಾಡಲಾಗುವ ತ್ಯಾಗಗಳನ್ನೂ ಚರಿತ್ರೆ ಎಂದಿಗೂ ಮರೆತುಬಿಡಲಿಕ್ಕಿಲ್ಲ. ಆದುದರಿಂದ ಹುತಾತ್ಮರ ಬಂಧುಮಿತ್ರಾದಿಗಳೂ ನಾವೂ ಹುತಾತ್ಮರಿಗೆ ಆದರಾರ್ಪಿಸುತ್ತಾ ಈದ್ ಆಚರಿಸಬೇಕಾಗಿದೆ. ಅವರು ತಮ್ಮ ರಕ್ತ ನೀಡಿ ಕಾಲಘಟ್ಟದ ಇಮಾಮರ ಎಲ್ಲ ವ್ಯಾಕುಲತೆಗಳನ್ನು ನೀಗಿಸಿ ತಮ್ಮ ರಕ್ತದಿಂದ ಹೊಸ ಚರಿತ್ರೆ ರಚಿಸಿದ್ದಾರೆ. ಅದರೊಂದಿಗೆ, ಹೇಗೆ ಈದ್ ಆಚರಿಸಬೇಕೆಂದು ನಮಗೂ ಪಾಠ ಕಲಿಸಿಕೊಟ್ಟಿದ್ದಾರೆ.

ರಮಝಾನಿನಲ್ಲಿ ನಾವು ಅಲ್ಲಾಹನ ಆಜ್ಞೆಯಂತೆ ಅನುಮತಿಸಲ್ಪಟ್ಟ ವಿಚಾರಗಳಿಂದ ಕೂಡ ಅಗಲಿ ನಿಂತು ಕೊನೆಗೆ ಆಜ್ಞೆಯನ್ನು ಪಾಲಿಸಲು ಸಾಧ್ಯವಾದ ಸಂತೋಷದಲ್ಲಿ ಈದ್ ಆಚರಿಸುತ್ತೇವೆ. ಇದೇ ರೀತಿ ನಮ್ಮಲ್ಲಿ ಕೆಲವರು ರಮಝಾನಿನಲ್ಲಿ ತಮ್ಮ ಜೀವವನ್ನು ದೇವಮಾರ್ಗದಲ್ಲಿ ಬಲಿಕೊಟ್ಟು ಯಥಾರ್ಥ ಈದ್‌ನ ಹಕ್ಕುದಾರರಾಗಿ ಬದಲಾಯಿಸಲ್ಪಟ್ಟಿದ್ದಾರೆ. ಹಾಗೆ ಅಲ್ಲಾಹನ ಸಂಪ್ರೀತಿಯನ್ನು ಅವರು ಪಡೆದಿದ್ದಾರೆ. ಅವರ ಉತ್ತರಾಧಿಕಾರಿಗಳಿಗೆ ಅವರ ಶಹಾದತ್ ಖಂಡಿತವಾಗಿಯೂ ದುಃಖದಾಯಕವಾಗಿದೆ. ಸ್ವಂತ ಜನರ ಅಗಲಿಕೆ ಖಂಡಿತವಾಗಿಯೂ ಮರೆಯಲು ಅಸಾಧ್ಯ. ಬಾಹ್ಯವಾದ ಸಂತೋಷದ ಸುದಿನ ಬರುವಾಗ ಈ ಅಗಲಿಕೆಯ ದುಃಖ ಖಂಡಿತವಾಗಿಯೂ ಹೆಚ್ಚಾಗುತ್ತದೆ. ಹಲವು ವಿಧವೆಯರು ತಮ್ಮ "ಇದ್ದಃ" ಕಾಲದಲ್ಲಿದ್ದಾರೆ. ಹಬ್ಬ ಬಂದರೂ ಒಂದು ವಿಧ ದುಃಖದಲ್ಲಿ ಅವರಿದ್ದಾರೆ. ಈ ವರ್ಷದ ಹಬ್ಬದಲ್ಲಿ ತಮ್ಮ ಪಿತರ ಲಾಲನೆ ಗಳಿಸದ ಹಲವು ಮಕ್ಕಳಿದ್ದಾರೆ. ಅನೇಕ ತಾಯಂದಿರು ಹಬ್ಬದ ಸುದಿನದಲ್ಲಿ ತಮ್ಮ ಮಕ್ಕಳನ್ನು ಎದೆಗರ್ಪಿಸಿ ಈದ್ ಮುಬಾರಕ್ ಕೋರುತ್ತಿದ್ದರು. ಆದರೆ ಈ ಹಬ್ಬಕ್ಕೆ ಆ ಮಕ್ಕಳ ಸಮಾಧಿ ಬಳಿ ಹೋಗಿ ಎರಡು ಕೈಗಳನ್ನೆತ್ತಿ ಅವರಿಗೋಸ್ಕರ ಪ್ರಾರ್ಥಿಸುತ್ತಾ ತಮ್ಮ ಹೃದಯದ ನೋವನ್ನು ಶಮನಗೊಳಿಸುತ್ತಾರೆ. ಹಲವು ಪಿತರು ತಮ್ಮ ಹುತಾತ್ಮರಾದ ಮಕ್ಕಳ ಸಹಾಯದೊಂದಿಗೆ ಹಬ್ಬ ಆಚರಿಸಲು ಹೋಗುತ್ತಿದ್ದರು. ಅವರು ಇಂದು ಬೇರೆಯವರ ಸಹಾಯದಿಂದ ಆ ಮಕ್ಕಳ ಸಮಾಧಿ ಹತ್ತಿರ ಪ್ರಾರ್ಥನೆ ಮಾಡಲು ಹೋಗುತ್ತಿರಬಹುದು. ಈ ಸ್ಥಿತಿ ರಕ್ತಬಂಧುಗಳಿಗೂ ನಿಕಟ ಸಹವರ್ತಿಗಳಿಗೂ ಬಹಳ ಅಸ್ವಸ್ಥತೆ ಮಾಡುವುದು. ಅವರಿಗೆ ಹಬ್ಬದ ಸಂತೋಷಕ್ಕೆ ಬದಲು ದುಃಖದ ನೋವು ಇರುತ್ತದೆ. ಆದರೆ ನಾವು ಚಿಂತನೆ ಮಾಡುವುದಾದರೆ, ರಮಝಾನ್ ಮತ್ತು ಈದ್ ದಿನಗಳಲ್ಲಿ ಸಾಮಾನ್ಯವಾಗಿ ಎಷ್ಟೆಲ್ಲ ಜೀವಗಳು ನಂದಿಹೋಗುತ್ತವೆ. ಅದನ್ನೆಲ್ಲ ಸಹಿಸುವುದರ ಹೊರತು ಬೇರೇನು ಮಾಡಲು ಸಾಧ್ಯ. ಆದರೆ ಈ ಹುತಾತ್ಮರ ಮರಣ ಜಮಾಅತಿಗೆ ಜೀವದಾನ ಮಾಡಿದೆ. ಹಝ್ರತ್ ಪೈಗಂಬರರ(ಸ) ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಮಾಡಿದ ಪ್ರತಿಜ್ಞೆಯನ್ನು ಪಾಲಿಸುತ್ತಾ ಈ ಹುತಾತ್ಮರು ತಮ್ಮ ಜೀವ ಬಲಿದಾನ ಮಾಡಿದ್ದಾರೆ. ದೇವ ಸಂಪ್ರೀತಿಗೋಸ್ಕರ ಅವರು ತಮ್ಮ ಜೀವಾರ್ಪಣೆಮಾಡಿದ್ದಾರೆ. ಆದುದರಿಂದ ಅಲ್ಲಾಹನ ಸಂಪ್ರೀತಿಗೋಸ್ಕರ ಇಂದು ನಾವು ಈದ್ ಆಚರಿಸದಿರಲಿಕ್ಕೆ ಯಾವುದೇ ಕಾರಣವಿಲ್ಲ.

ನಾವು ಈದ್ ಆಚರಿಸುವಾಗ ನಮ್ಮ ಹೃದಯದ ನೋವನ್ನು ಅಲ್ಲಾಹನ ಮುಂದೆ ಸಮರ್ಪಿಸುವೆವು. ಈ ಪ್ರಾರ್ಥನೆಗಳು ಹುತಾತ್ಮರ ಪದವಿಗಳನ್ನು ಇನ್ನೂ ಉನ್ನತಿಗೇರಿಸಲು ಹೇತುವಾಗುವುದರೊಂದಿಗೆ ನಮಗೂ ಸಾಂತ್ವನ ನೀಡುವುವು. ಕಷ್ಟಗಳ ಈ ಕಿರಿದಾದ ಕಾಲಾವಧಿ ಸಂತೋಷ ಮತ್ತು ಸುಖದ ದೀರ್ಘವಾದ ಕಾಲವಾಗಿ ಮಾರ್ಪಡುವುದು. ಇನ್‌ಶಾಅ್ ಅಲ್ಲಾಹ್.

ಹಬ್ಬಗಳ ಸಂಬಂಧಿಸಿ ಮಸೀಹ್ ಮೌಊದ್‌ರಿಗೆ ಲಭಿಸಿದ ಇಲ್ಹಾಮ್ (ದಿವ್ಯ ಸಂದೇಶ)ಗಳು ನಮಗೆ ಈದ್‌ನ ಸಂತೋಷದ ಕುರಿತು ಮುನ್ಸೂಚನೆ ನೀಡುತ್ತವೆ. ಆದುದರಿಂದ ಬಾಹ್ಯವಾಗಿ ಸಂತೋಷಿಸಲು ಅಲ್ಲಾಹು ಅನುಮತಿಸಿದ ಈ ಸುದಿನವನ್ನು ನಾವು ಆಚರಿಸುವೆವು. ಅದರೊಂದಿಗೆ ಈ ಕಾಲದ ಇಮಾಮರಿಗೆ ಅಲ್ಲಾಹನು ನಿಶ್ಚಯಿಸಿದ ಸಂತೋಷದಲ್ಲಿ ನಾವು ಸಹ ಪಾಲುಗಾರರಾಗುತ್ತೇವೆ.

ಹಝ್ರತ್ ಮಸೀಹ್ ಮೌಊದ್‌ರಿಗೆ ಹೀಗೊಂದು ಇಲ್ಹಾಮ್ ಉಂಟಾಯಿತು. "ಆಂದನ್ ಈದ್ ಮುಬಾರಕ್ ಬಾದದ್ ಈದ್ ತೋ ಹೆ ಛಾಹೆ ಕರೋ ಯಾ ನ ಕರೋ."- ಈದ್ ನಿನಗೆ ಅನುಗ್ರಹೀತವಾಗಲಿ. ಈದ್, ಇಚ್ಛೆ ಇದ್ದರೆ ಆಚರಿಸಬಹುದು, ಆಚರಿಸದೆಯೂ ಇರಬಹುದು. ಸಂಕ್ಷಿಪ್ತವಾಗಿ, ಈದ್ ಬರುವುದು ಹಝ್ರತ್ ಮಸೀಹ್ ಮೌಊದರಿಗೆ ಅನುಗ್ರಹೀತವಾಗಿದೆ. ಆ ಮಹಾತ್ಮರ ನೆರಳಿನಲ್ಲಿ ಅಹ್ಮದಿಯತಿಗೂ ಮುಸ್ಲಿಂ ಉಮ್ಮತಿಗೂ ಅನುಗ್ರಹೀತವಾಗಿದೆ. ಮುಸ್ಲಿಂ ಉಮ್ಮತಿಗೆ ಯಥಾರ್ಥ ಈದ್ ಆ ಮಹಾತ್ಮರನ್ನು ಸ್ವೀಕರಿಸುವಾಗ ಲಭಿಸುತ್ತದೆ. ಹಝ್ರತ್ ಮಸೀಹ್ ಮೌಊದರ ಆಗಮನದೊಂದಿಗೆ ಅಲ್ಲಾಹು ಈದ್ ನೀಡಿರುವನು. ಕಷ್ಟಗಳ ಕೊನೆಯಲ್ಲಿ ಸಂತೋಷಪಡುವ ರೀತಿಯನ್ನು ಇಲ್ಲಿ ಆವಿಷ್ಕರಿಸಲಾಗಿದೆ. ಅಂಗೀಕರಿಸುವವರಿಗೆ ಈ ಹಬ್ಬ ಅನುಗ್ರಹೀತವಾಗಿದೆ. ಅಂಗೀಕರಿಸದವರಿಗೆ ಈ ಹಬ್ಬ ಲಭ್ಯವಲ್ಲ.

ಇನ್ನೊಂದು ಇಲ್ಹಾಮ್ ಈ ರೀತಿಯಾಗಿದೆ: "ಅಲ್ ಈದುಲ್ ಆಖಿರು ತನಾಲು ಮಿನ್‌ಹು ಫತಹನ್ ಅಸೀಮನ್." - ಇನ್ನೊಂದು ಈದ್ ಸಹ ಇದೆ. ಅದರಲ್ಲಿ ನೀನು ದೊಡ್ಡ ವಿಜಯ ಪಡೆಯುವೆ. ಅಲ್ಲಾಹು ಹಝ್ರತ್ ಮಸೀಹ್ ಮೌಊದ್‌ರಿಗೆ ವಿಜಯದ ಕುರಿತುಳ್ಳ ಸುವಾರ್ತೆಗಳನ್ನು ಈದ್‌ನೊಂದಿಗೆ ಜೋಡಿಸಿ ನೀಡಿರುವಾಗ ನಾವು ನಮ್ಮ ದುಃಖಗಳನ್ನು ಮರೆತುಕೊಂಡು ಕಾಲಘಟ್ಟದ ಇಮಾಮರೊಂದಿಗೆ ಮಹತ್ತರವಾದ ಆ ಸಂತೋಷದಲ್ಲಿ ಯಾಕೆ ಪಾಲುಗೊಳ್ಳಬಾರದು. ಈ ಸಂತೋಷದ ಸುದಿನದಲ್ಲಿ ಅಲ್ಲಾಹನ ಮುಂದೆ ನಮ್ಮ ಕಣ್ಣೀರನ್ನು ನಾವು ಹರಿಸುತ್ತೇವೆ. ಆದರೆ ಶತ್ರುಗಳ ಮುಂದೆ ನಾವು ಯಾವುದೇ ಬಲಹೀನತೆಯನ್ನು ತೋರಿಸಲಿಕ್ಕಿಲ್ಲ. ಅವರೊಡನೆ ನಮಗೆ ಯಾವ ದೂರೂ ಇಲ್ಲ. ಅಲ್ಲಾಹನ ಮುಂದೆ ಹನಿಹನಿಯಾಗಿ ಬೀಳುವ ಈ ಕಣ್ಣೀರುಗಳು ನಮ್ಮನ್ನು ವಿಜಯದ ಸೋಪಾನಗಳಿಗೆ ತಲಪಿಸುವುವು.

ಪಾಕಿಸ್ಥಾನದಲ್ಲಿ ಅಹ್ಮದಿಯರ ಜೀವ ಅತಿ ದುಸ್ತರವಾಗುತ್ತಿದೆ. ಅವರ ಮೇಲೆ ನಡೆಸುವ ದೌರ್ಜನ್ಯಗಳನ್ನು ಧೈರ್ಯದಿಂದ ಅವರು ಎದುರಿಸುತ್ತಿದ್ದಾರೆ. ಆದುದರಿಂದ ಲೋಕದಲ್ಲಿರುವ ಎಲ್ಲ ಅಹ್ಮದಿಯರು ಅವರಿಗೋಸ್ಕರ ಕಡ್ಡಾಯವಾಗಿಯೂ ದುಆ ಮಾಡಬೇಕಾಗಿದೆ. ಭಯಾನಕವಾದ ವಾತಾವರಣವನ್ನು ಕಣ್ಣ ಮುಂದೆ ಕಂಡು ಕೂಡ ಧೀರತೆಯಿಂದ ಅವರು ಈದ್ ಆಚರಿಸುತ್ತಾರೆ. ಯಥಾರ್ಥ ಈದ್ ಅವರದೇ ಆಗಿದೆ.

ಇತ್ತೀಚೆಗೆ ಮರ್ದಾನ್‌ನಲ್ಲಿ ಉಂಟಾದ ಘಟನೆ. ಸರಿಯಾಗಿ ಹೇಳಿದರೆ ಅದು ದೊಡ್ಡ ಒಂದು ನಷ್ಟವನ್ನುಂಟುಮಾಡಲು ಶತ್ರುವಿನ ಯೋಜನೆಯಾಗಿತ್ತು. ಆದರೆ ಅಲ್ಲಾಹು ನಮ್ಮನ್ನು ಅದರಿಂದ ಕಾಪಾಡಿದನು. ಅಹ್ಮದಿಯರು ಇಂದು ಮಸೀದಿಗೆ ಹೋಗುವುದೇ ಬಹಳ ಧೀರವಾದ ಕ್ರಮವಾಗಿದೆ. ಅದು ಸದಾ ಜೀವವನ್ನು ಅರ್ಪಿಸಲು ತಾವು ಸಿದ್ಧರೆಂಬ ಪ್ರತಿಜ್ಞೆಯ ಪ್ರತ್ಯಕ್ಷ ಪ್ರಕಟನೆಯಾಗಿದೆ. ಪುರುಷರು ಮಸೀದಿಗಳಿಗೆ ಹೋಗುತ್ತಾರೆ. ಸ್ತ್ರೀಯರುನ್ನೂ ಮಕ್ಕಳನ್ನೂ ಇಂದಿನ ಪರಿಸ್ಥಿತಿಯಲ್ಲಿ ಮಸೀದಿಗೆ ಹೋಗುವುದರಿಂದ ಮತ್ತು ಒಂದೆಡೆ

ಒಗ್ಗೂಡುವುದರಿಂದ ತಡೆಯಲಾಗಿದೆ. ಈ ಕಾರಣದಿಂದ ಅತೃಪ್ತಿ ಪ್ರಕಟಿಸುತ್ತಾ ಮಹಿಳೆಯರ ಪತ್ರಗಳು ನನಗೆ ಬರುತ್ತಿವೆ. ಸ್ತ್ರೀಯರನ್ನೂ, ಮಕ್ಕಳನ್ನೂ ಈದ್ ನಮಾಝಿಗೆ ಒಂದೆಡೆ ಒಂದುಗೂಡಿಸುವುದರಿಂದ ತಡೆದದ್ದು ಇದು ಮೊತ್ತಮೊದಲಾಗಿರಬಹುದು. ಪಾಕಿಸ್ತಾನದಲ್ಲಿ ಶತ್ರುಗಳ ಕ್ರೂರವಾದ ಯೋಜನೆಯನ್ನು ಮುಂದಿರಿಸಿ ಈ ಕ್ರಮವನ್ನು ನಾವು ಸ್ವೀಕರಿಸಬೇಕಾಯಿತು. ಈ ಕಾರಣದಿಂದ ಅವರು ಅಸಮಾಧಾನ ಗೊಂಡಿದ್ದಾರೆ. ಆದುದರಿಂದ ಆ ಸ್ತ್ರೀಯರೊಡನೆ ಮತ್ತು ಮಕ್ಕಳೊಡನೆ ನನಗೆ ಹೇಳಲಿಕ್ಕಿರುವುದೇನೆಂದರೆ, ಶತ್ರುಗಳ ದುಷ್ಕೃತ್ಯದ ಕಾರಣದಿಂದ ನಿಮ್ಮನ್ನು ಮಸೀದಿಗಳಿಗೆ ಹೋಗುವುದರಿಂದಲೂ ಈದ್‌ಗಾಹ್‌ನಲ್ಲಿ ಒಟ್ಟು ಸೇರುವುದರಿಂದಲೂ ತಡೆದಿದ್ದರೆ ಅದು ಜೀವವನ್ನು ಸಂರಕ್ಷಿಸಲಿ ಕ್ಕೋಸ್ಕರ, ಏಕೆಂದರೆ ಭೌತಿಕ ಮುಂಜಾಗ್ರತೆ ವಹಿಸುವುದು ಬೌದ್ಧಿಕವಾಗಿ ಮತ್ತು ಧಾರ್ಮಿಕವಾಗಿ ಕಡ್ಡಾಯವಾಗಿದೆ. ನಿಮಗೆ ಮಸೀದಿಗಳಿಗೂ ಈದ್‌ಗಾಹ್‌ಗಳಿಗೂ ಹೋಗಿ ಈದ್ ಆಚರಿಸಲಿಕ್ಕೆ ಸಾಧ್ಯವಾಗುವುದಿಲ್ಲ ವಾದರೆ ನೀವು ದೇವಸನ್ನಿಧಿಯಲ್ಲಿ ಅಳುತ್ತಾ ಪ್ರಲಾಪಿಸುತ್ತಾ ಪಾರ್ಥಿಸುತ್ತಾ ನಿಮ್ಮ ಮನೆಗಳನ್ನು ತುಂಬಿಸಿರಿ. ಹಾಗೆ ಅಲ್ಲಾಹು ನಿಮಗೆ ಈ ಪ್ರಕಾರ ಸಾಂತ್ವನ ನೀಡಲಿ: ನನ್ನ ದಾಸಿಯರೇ, ನನ್ನ ಮಕ್ಕಳೇ, ಫಇನ್ನ ಮುಅಲ್ ಉಸ್‌ರಿ ಯುಸ್‌ರಾ, ಇನ್ನ ಮುಅಲ್ ಉಸ್‌ರಿ ಯುಸ್‌ರಾ ಎಂಬ ಅಲ್ಲಾಹನ ವಾಗ್ದಾನ ಸಂಪೂರ್ಣ ಸತ್ಯವಾಗಿದೆ. ಆ ಸಂತೋಷದ ಸುದಿನ ಖಂಡಿತವಾಗಿಯೂ ಬರುವುದು. ನಿಮ್ಮ ಕಷ್ಟ ಮತ್ತು ಪೀಡನೆಯ ಕಾಲ ಸಂತೋಷ ಮತ್ತು ಸುಖದ ಕಾಲವಾಗಿ ಬದಲಾಯಿಸಲ್ಪಡುವುದು. ಹಾಗೆ ವಾಗ್ದತ್ತ ಮಸೀಹರೊಡನೆ ಮಾಡಲಾಗಿರುವ ವಾಗ್ದಾನಗಳು ಸತ್ಯವೆಂದು ಸಾಬೀತಾಗುವುದು. ಆದುದರಿಂದ ನೀವು ನಿಮ್ಮ ಪ್ರಭುವಿನ ಮುಂದೆ ಸುಜೂದ್ ಮಾಡುವುದರಿಂದಲೂ ರೋದಿಸುತ್ತಾ ಬೇಡುವುದರಿಂದಲೂ ಎಂದಿಗೂ ದಣಿಯಬಾರದು. ಹಝ್ರತ್ ಮಸೀಹ್ ಮೌಊದರಿಗೆ ಉಂಟಾದ ಒಂದು ಇಲ್ಹಾಮ್ ಹೀಗಿದೆ: "ಈದ್ ನಾಳೆಯಲ್ಲ, ನಾಡಿದ್ದು." ಆದುದರಿಂದ ಹಬ್ಬ ನಾಳೆಯಲ್ಲವಾದರೆ ನಾಡಿದ್ದು ಖಂಡಿತವಾಗಿಯೂ ಬರುವುದು. ಅದು ನಮ್ಮ ಜೀವಮಾನದಲ್ಲಿ ಬರುವಂತಾಗಲಿ. ನಮ್ಮ ಬಲಹೀನತೆಯ ಕಾರಣದಿಂದ ಆ ವಾಗ್ದಾನಗಳು ಮುಂದೂಡಲ್ಪಡದಿರಲಿ. ಈ ಜಮಾಅತಿಗೆ ಅಲ್ಲಾಹು ವಿಜಯ ನೀಡುವುದೆಂಬುದರಲ್ಲಿ ಏನೂ ಸಂಶಯವಿಲ್ಲ. ಮಹತ್ತಾದ ವಿಜಯ ಯಾವಾಗ ಸಿದ್ಧಿಸುವುದೆಂಬುದು ಅವನಿಗೆ ಮಾತ್ರ ಗೊತ್ತು. ಜರ್ಮನ್ ಜಲ್ಸದಲ್ಲಿ ಅಹ್ಮದಿಯೇತರ ಜರ್ಮನ್‌ರೊಂದಿಗೆ ಒಂದು ಕಾರ್ಯಕ್ರಮ ನನಗಿತ್ತು. ನಾನು ಅವರೊಡನೆ ಹೇಳಿದ್ದೇನೆಂದರೆ, ನನ್ನ ಮಾತುಗಳನ್ನು ಒಂದು ವೇಳೆ ಬರೇ ಬಡಾಯಿ ಮಾತೆಂದು ನೀವು ಭಾವಿಸಬಹುದು. ಹಝ್ರತ್ ಮಸೀಹ್ ಮೌಊದ್[ಅ] ಮೂಲಕ ಅಲ್ಲಾಹು ಸ್ಥಾಪಿಸಿದ ಈ ವ್ಯವಸ್ಥೆಯೇ ಇನ್ನು ಲೋಕದಲ್ಲಿ ನೆಲೆನಿಲ್ಲುವುದೆಂದು ನಾವು ದೃಢವಾಗಿ ನಂಬುತ್ತೇವೆ. ಈ ವಿಧಿಯನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಈ ಕ್ರಾಂತಿ ಸ್ನೇಹ ಮತ್ತು ಸಹಾನು ಭೂತಿಯಿಂದ ಕೂಡಿದ್ದಾಗಿರುವುದು. ಸರಕಾರವನ್ನು ಅಡಿಮೇಲು ಮಾಡಿಯಲ್ಲ. ಭೀಕರ ಕೃತ್ಯ ನಡೆಸಿಕೊಂಡಲ್ಲ. ನಿಷ್ಕಳಂಕರನ್ನು ಹತ್ಯೆ ಮಾಡಿಯಲ್ಲ. ಅನ್ಯರ ಸಂಪತ್ತನ್ನು ಕೊಳ್ಳೆಹೊಡೆದುಕೊಂಡಲ್ಲ. ಯಾರದಾದರೂ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಥವಾ ರಾಜಕೀಯ ಆಟಗಳಲ್ಲಿ ಸೇರಿಕೊಂಡು ಅಲ್ಲ. ಬದಲು, ಅಲ್ಲಾಹನ ಅಧಿಕಾರವನ್ನು ಲೋಕದಲ್ಲಿ ಸ್ಥಾಪಿಸುತ್ತಾ ಅದು ಜಾರಿಗೆ ಬರುವುದು. ಇದು ನಮ್ಮ ಲಕ್ಷ್ಯವಾಗಿದೆ. ಇದು ಬಡಾಯಿ ಮಾತಲ್ಲ. ಬದಲು ಅಲ್ಲಾಹು ಇದನ್ನು ಈಡೇರಿಸಿಯೇ ಬಿಡುವನು. ಆ ದಿನ ನಮ್ಮ ಯಥಾರ್ಥ ಈದ್‌ನ ಸುದಿನವಾಗಿದೆ. ಅಹ್ಮದಿಯರು ಹುತಾತ್ಮ ರಾಗುವುದಾದರೆ, ತ್ಯಾಗಗಳನ್ನು ಮಾಡುವುದಾದರೆ, ಮನೆಗಳಿಂದ ಹೊರಕ್ಕಟ್ಟಲ್ಪಡುವುದಾದರೆ, ಅಹ್ಮದಿಯಾ ಜಮಾಅತಿಗೆ ವಿಧಿಸಲ್ಪಟ್ಟ ಈದ್‌ಗೋಸ್ಕರ ಇವೆಲ್ಲ ಮಾಡಲ್ಪಡುತ್ತವೆ. ಅಹ್ಮದಿಯಾ ಜಮಾಅತಿನಲ್ಲಿ ಇಂದು ಪ್ರತ್ಯಕ್ಷದಲ್ಲಿ ಕಾಣುವ ಈ ರಾತ್ರಿಗಳು ಅಲ್ಲಾಹನ ಆದರದ ಖದ್ರ್‌ನ (ನಿರ್ಣಯದ) ರಾತ್ರಿಗಳಾಗಿವೆ. ಇದು ಹಬ್ಬಕ್ಕೆ ಮುಂಚೆ ಎಲ್ಲ ರಮಝಾನಿನಲ್ಲಿ ಬರುವ ರಾತ್ರಿಯಾಗಿದೆ. ಅಲ್ಲಾಹು ಕಳುಹಿಸಿದ ಮಹಾತ್ಮರುಗಳ ಕಾಲದಲ್ಲಿ ಸಹ ಈ ಖದ್ರ್‌ನ ರಾತ್ರಿಗಳು ಬರುತ್ತವೆ. ಆ ಬಳಿಕ ಕ್ರಾಂತಿಯುಂಟಾಗುತ್ತದೆ. ಅನಂತರ ಒಂದು ಈದಲ್ಲ, ಈದ್‌ಗಳ ಸರಣಿಯೇ ಅರಂಭವಾಗುತ್ತದೆ.

ಆದುದರಿಂದ ಇಂದು ಪಾಕಿಸ್ತಾನದಲ್ಲೂ ಬೇರೆ ಕೆಲವು ದೇಶಗಳಲ್ಲೂ ಕಷ್ಟದ ಕಾಲವೆಂಬುದರಲ್ಲಿ ಏನಿದೆ. ಇದು ಸಂತೋಷದೆಡೆಗೆ ನಮ್ಮನ್ನು ಕೊಂಡೊಯ್ಯುವುದು. ಆದುದರಿಂದ ಪ್ರಾರ್ಥನೆ ಮೂಲಕ ಅಲ್ಲಾಹನ ಸಹಾಯ, ಅವನ ಸಾಮೀಪ್ಯ ಮತ್ತು ಭೇಟಿಯನ್ನು ಅರಸುತ್ತಲೇ ಇರುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಪ್ರಿಯರು ಸಮರ್ಪಿಸಿದ ತ್ಯಾಗದ ಫಲವಾಗಿ ಮನೆಯಲ್ಲಿ ದುಃಖ ಮಡುಗಟ್ಟಿ ಕೊಂಡಿದ್ದರೂ ಹಬ್ಬದ ದಿನ ಸ್ತೀಯರಿಗೂ ಮಕ್ಕಳಿಗೂ ಪಾಲುಗೊಳ್ಳಲು ಸಾಧ್ಯವಾಗದ ಬೇಸರವಿದ್ದರೂ ಅವನ್ನೆಲ್ಲ ದೇವಪ್ರೀತಿಯನ್ನು ಸಂಪಾದಿಸಲು ಹೇತುವಾಗಿ ಮಾರ್ಪಡಿಸಿರಿ. ನಮ್ಮ ಕ್ಷಮೆಯೂ ಸಹನೆಯೂ ಅಲ್ಲಾಹನ ಸನ್ನಿಧಿಯಲ್ಲಿ ಸ್ವೀಕಾರಾರ್ಹವಾಗಲಿಯೆಂದು ಪ್ರಾರ್ಥಿಸಿರಿ. ಆಗ ಹುತಾತ್ಮರ ರಕ್ತ ಫಲ ನೀಡುವುದು ಹೇಗೆಂದು ಲೋಕಕ್ಕೆ ತಿಳಿಯುವುದು. ಬನ್ನಿರಿ, ನಾವಿಂದು ಸರ್ವಶಕ್ತನಾದ ದೇವನೊಡನೆ ಪ್ರಾರ್ಥಿಸೋಣ. ನಮ್ಮ ಸಹನೆ ಮತ್ತು ಧೀರತೆ ಅಲ್ಲಾಹನ ಪ್ರೀತಿಯನ್ನು ಆಕರ್ಷಿಸುವಂತಾಗಲಿ. ಅವನ ಅನುಗ್ರಹದ ಮಳೆ ಪೂರ್ವಾಧಿಕ ಸುರಿಯಲು ಕಾರಣವಾಗಲಿ. ಅಲ್ಲಾಹು ಯಥಾರ್ಥ ಹಬ್ಬದ ಸಂತೋಷವನ್ನು ನಮಗೆ ದಯಪಾಲಿಸಲಿ.

ಎಲ್ಲರಿಗೂ ಈದ್ ಮುಬಾರಕ್. ಇಲ್ಲಿರುವವರಿಗೂ ಲೋಕದೆಲ್ಲೆಡೆ ಖುತುಬ ಆಲಿಸುವವರಿಗೂ ಆಲಿಸಲಾಗದ ಅಹ್ಮದಿಯರಿಗೂ ಈದ್ ಮುಬಾರಕ್. ಇನ್ನು ದುಆ ಮಾಡಲಾಗುತ್ತದೆ. ಅಹ್ಮದಿಯತಿನ ಹುತಾತ್ಮರ ಪದವಿ ಉನ್ನತಗೊಳ್ಳಲಿಕ್ಕೂ ಅವರ ಬಂಧುಗಳಿಗೋಸ್ಕರವೂ ದುಆ ಮಾಡಿರಿ. ಅಲ್ಲಾಹು ಅವರ ಸದುದ್ದೇಶಗಳನ್ನು ಈಡೇರಿಸಿಕೊಡಲಿ. ಅವರನ್ನು ತನ್ನ ಸಂರಕ್ಷಣೆಯಲ್ಲಿರಿಸಲಿ. ಪಾಕಿಸ್ತಾನದಲ್ಲಿರುವ ಪ್ರತಿಯೊಬ್ಬ ಅಹ್ಮದಿಯನ್ನು ಅಲ್ಲಾಹು ತನ್ನ ಸಂರಕ್ಷಣೆಯಲ್ಲಿಡಲಿ. ಅವರ ದುಃಖವನ್ನು ಸಂತೋಷವಾಗಿ ಬದಲಾಯಿಸಲಿ. ದೇವಮಾರ್ಗದಲ್ಲಿ ಸೆರೆಮನೆಯಲ್ಲಿರು ವವರಿಗೂ ದುಆ ಮಾಡಿರಿ. ಅವರ ಬಿಡುಗಡೆಯ ಮಾರ್ಗವನ್ನು ಅಲ್ಲಾಹು ತೆರೆಯಲಿ. ಧನತ್ಯಾಗ ಮಾಡುವವರ ಧನದಲ್ಲೂ ಮಕ್ಕಳಲ್ಲೂ ಅನಂತವಾದ ಅನುಗ್ರಹಗಳನ್ನು ಸುರಿಸಲಿ. ಪಾಕಿಸ್ತಾನದಲ್ಲಿ ಜಮಾಅತಿನ ಕಟ್ಟಡಗಳ ಸಂರಕ್ಷಣೆಗೋಸ್ಕರ ಡ್ಯೂಟಿ ಕೊಡುವವರ ಜೀವ ಮತ್ತು ಸೊತ್ತಿನ ಸಂರಕ್ಷಣೆಗೋಸ್ಕರ ಸಹ ದುಆ ಮಾಡಿರಿ. ಜಗತ್ತಿನಲ್ಲಿರುವ ಎಲ್ಲ ಅಹ್ಮದಿಯರಿಗೂ ಪಾಕಿಸ್ತಾನದ ಅಹ್ಮದಿಯರಿಗೆ ವಿಶಿಷ್ಟವಾಗಿಯೂ ದುಆ ಮಾಡಿರಿ. ಅಲ್ಲಾಹು ಅವರನ್ನು ಎಲ್ಲ ಕೆಡುಕುಗಳಿಂದ ಕಾಪಾಡಲಿ. ಅಲ್ಲಾಹು ನಮ್ಮನ್ನು ಅವನ ಯಥಾರ್ಥ ದಾಸರನ್ನಾಗಿ ಮಾಡಲಿ.

★

(ಅನುವಾದಕ : ಮುಹಮ್ಮದ್ ಯೂಸುಫ್)

# ಏಕ ಲೋಕ ನಿರ್ಮಾಣಕ್ಕೆ ಮಾರ್ಗಗಳು



**ಸರ್ ಮುಹಮ್ಮದ್ ಝಫರುಲ್ಲಾ ಖಾನ್ (1893 - 1985) ಅವರು ವಾಗ್ದತ್ತ ಮಸೀಹ್‌ರ(ಅ) ಶಿಷ್ಯರೂ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ಗೆ ಸೇರಿದ ಶ್ರೇಷ್ಠ ವಿದ್ವಾಂಸರೂ ಆಗಿದ್ದರು. ಲಾಹೋರಿನ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಅಧ್ಯಯನ ಮಾಡಿ 1911ರಲ್ಲಿ ಬಿರುದು ಗಳಿಸಿದ ನಂತರ ಅವರು ಲಂಡನಿನ ಕಿಂಗ್ಸ್ ಕಾಲೇಜಿನಲ್ಲಿ ನ್ಯಾಯಶಾಸ್ತ್ರವನ್ನು ಅಧ್ಯಯನ ಮಾಡಿ ಲಿಂಕೊಲ್ನ್ಸ್ ಇನ್ನ್‌ನಲ್ಲಿ ನ್ಯಾಯವಾದಿಯಾಗಿ ನೋಂದಾಯಿಸಲ್ಪಟ್ಟರು. 1947ರ ಡಿಸೆಂಬರ್‌ನಲ್ಲಿ ಅವರು ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿಯಲ್ಲಿ ಪಾಕಿಸ್ಥಾನದ ಪ್ರತಿನಿಧಿ ಸಂಘದ ನಾಯಕನಾಗಿ ಭಾಗವಹಿಸಿ ಪಾಲೆಸ್ತೀನ್ ಸಮಸ್ಯೆಯ ಬಗ್ಗೆ ಮುಸ್ಲಿಮ್ ರಾಷ್ಟ್ರಗಳ ನಿಲುವನ್ನು ಸ್ಪಷ್ಟಪಡಿಸಿದರು. ಅವರನ್ನು 1947ರಲ್ಲಿ ಪಾಕಿಸ್ತಾನದ ಪ್ರಥಮ ವಿದೇಶ ಕಾರ್ಯ ಮಂತ್ರಿಯನ್ನಾಗಿ ನೇಮಿಸಲಾಗಿತ್ತು. ಅವರು 1954ರ ತನಕ ಈ ಹುದ್ದೆಯನ್ನು ಅಲಂಕರಿಸಿದರು. 1962 - 63ರ ಕಾಲಾವಧಿಯಲ್ಲಿ ಅವರು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಅಧ್ಯಕ್ಷರಾಗಿದ್ದರು. 1970ರಲ್ಲಿ ಹೇಗ್‌ನಲ್ಲಿರುವ ಇಂಟರ್‌ನೇಶನಲ್ ಕೋರ್ಟ್ ಆಫ್ ಜಸ್ಟಿಸ್ (ಜಾಗತಿಕ ನ್ಯಾಯಾಲಯ) ಇದರ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟು ಈ ಹುದ್ದೆಯಲ್ಲಿ 1973ರ ತನಕ ಮುಂದುವರಿದ ಅವರು ವಿಪುಲವಾಗಿ ಬರೆಯುವವರಾಗಿದ್ದರು. ಅವರು ಪವಿತ್ರ ಖುರ್‌ಆನನ್ನು ಇಂಗ್ಲೀಷ್‌ಗೆ ಭಾಷಾಂತರಿಸಿರುವರಲ್ಲದೆ ಅನೇಕ ಪುಸ್ತಕಗಳನ್ನೂ ಬರೆದಿದ್ದರು. ಅವರು ಪ್ರತಿಭಾವಂತರಾದ ವಾಗ್ಮಿಯಾಗಿದ್ದರು. 1974ರ ಮೇ ದಿನಾಂಕ 2ರಂದು ಕೋರ್ನೆಲ್ ಯುನಿವರ್ಸಿಟಿಯಲ್ಲಿ ಅವರು ಮಾಡಿದ ಭಾಷಣವನ್ನು ಕೆಳಗೆ ಕೊಡಲಾಗಿದೆ.**

ಕೋರ್ನೈಲ್‌ನಲ್ಲಿರುವ ಇಂಟರ್ ರಿಲೀಜಸ್ ಇಂಟರ್‌ನೇಶನಲ್ ಮಿನಿಸ್ಟ್ರಿ ಮತ್ತು ವಾಶಿಂಗ್ಟನ್ ಡಿ.ಸಿ.ಯಲ್ಲಿರುವ ಟೆಂಪಲ್ ಆಫ್ ಅಂಡರ್‌ಸ್ಟೇಂಡಿಂಗ್ ಇವುಗಳ ವತಿಯಿಂದ ನಿಮ್ಮನ್ನು ಸಂಬೋಧಿಸಲು ನನ್ನನ್ನು ಆಹ್ವಾನಿಸಿ ನನಗೆ ಗೌರವ ನೀಡಲಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಆಗಿರುವ ನಮ್ಮ ಪ್ರಿಯ ಸ್ನೇಹಿತ ಮಾನನೀಯ ಡಾ॥ ಯು. ಥಾಂಟ್‌ರವರು ಅನಾರೋಗ್ಯ ನಿಮಿತ್ತ ಇಲ್ಲಿಗೆ ಆಗಮಿಸಲು ಸಾಧ್ಯವಾಗಿಲ್ಲ. ಅವರ ವಿಶಾಲ ಜ್ಞಾನ, ಅನುಭವ ಮತ್ತು ಬುದ್ಧಿವೈಭವದ ಲಾಭವನ್ನು ನಮಗೆ ನೀಡುವುದರಿಂದ ಅವರು ತಡೆಯಲ್ಪಟ್ಟಿದ್ದಾರೆ. ಅವರು ಬೇಗನೆ ಸ್ವಸ್ಥರಾಗಲಿ ಎಂದು ವಿನೀತರಾಗಿ ನಾವು ಪ್ರಾರ್ಥಿಸುತ್ತೇವೆ. ನಾನು ಅವರಿಗೆ ಬದಲಿಯಾಗಿ ಬಂದಿರುವೆನಾದರೂ ನಾನು ಸಾಕಷ್ಟು ಪರಿಣತಿಯನ್ನು ಹೊಂದಿಲ್ಲವೆಂದು ನನಗೆ ಚೆನ್ನಾಗಿ ಗೊತ್ತಿದೆ. ನೀವು ನನ್ನ ನ್ಯೂನತೆಗಳನ್ನು ಕಡೆಗಣಿಸುವಿರೆಂದು ಆಶಿಸುತ್ತೇನೆ.

ಭೌಗೋಳಿಕವಾಗಿ ನೋಡುವುದಾದರೆ ನಾವು ಏಕಲೋಕದ ಕಡೆಗೆ ವೇಗವಾಗಿ ಸಾಗುತ್ತಿದ್ದೇವೆ. ಸಂಪರ್ಕ ಮಾಧ್ಯಮಗಳು ಅದ್ಭುತಕರವಾದ ವೇಗದಿಂದ ವರ್ಧಿಸುತ್ತಾ ಹೋಗುತ್ತಿವೆ. ಇದರಿಂದ ಸೃಷ್ಟಿಸಲ್ಪಟ್ಟ ಸಮಸ್ಯೆಗಳು ಪರಿಹರಿಸಲ್ಪಡಲು ಉಂಟಾಗಿರುವ ಕೂಗು ನಿರ್ಲಕ್ಷಿಸಲ್ಪಡುವುದು ಮತ್ತು ಅದನ್ನು ಪರಿಹರಿಸುವುದನ್ನು ಮುಂದೂಡುವುದು ಬಹಳ ಅಪಾಯಕರವಾಗಿದೆ.

ಎಲ್ಲಾ ಸಮಸ್ಯೆಗಳಿಗಿರುವ ಪರಿಹಾರವು ಸಹಾನುಭೂತಿ, ಸಾಮರಸ್ಯ ಮತ್ತು ಮನಗಾಣಿಸುವಿಕೆ ಮೂಲಕ ಎಲ್ಲಾ ಹಂತಗಳಲ್ಲೂ ಎಲ್ಲಾ ಕಾಲಗಳಲ್ಲೂ ಕಂಡುಕೊಳ್ಳಬೇಕಾಗಿದೆ. ನಿಶ್ಚಯವಾಗಿಯೂ ಇವು ಎಲ್ಲಾ ವಲಯಗಳಲ್ಲೂ ಆವಶ್ಯಕವಾಗಿವೆ. ಸಾಮಾಜಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ, ಜಾಗತಿಕ ಮತ್ತು ಸಾರ್ವತ್ರಿಕವಾಗಿ ಇವುಗಳ ಆವಶ್ಯಕತೆ ಇದೆ. ಇಪ್ಪತ್ತನೆಯ ಶತಮಾನದ ಪ್ರಥಮ ಚತುರ್ಥ ಭಾಗವು ಕೊನೆಗೊಳ್ಳುವ ಮೊದಲು ವಿವೇಕಶಾಲಿಗಳು ಇದನ್ನು ಮನವರಿಕೆ ಮಾಡಿದ್ದರೂ ದ್ವಿತೀಯ ಜಾಗತಿಕ ಮಹಾಯುದ್ಧದ ನಂತರ ಈ ಬಗ್ಗೆ ಆಗ್ರಹಪೂರ್ಣ ಬೇಡಿಕೆ ತಲೆದೋರಿ ಸಂಯುಕ್ತರಾಷ್ಟ್ರ ಸಂಘ ಮತ್ತು ಅದರ ಅಂಗ ಸಂಸ್ಥೆಗಳ ಸ್ಥಾಪನೆಗೆ ಕಾರಣವಾಯಿತು. ಅವುಗಳ ಮೂಲಕ ಮತ್ತು ಅವುಗಳ ಹೊರಗೆ ಸಹ ಬಹಳ ಕೆಲಸಗಳು ಸಾಧಿಸಲ್ಪಟ್ಟಿವೆ. ಆದರೆ ಬಹಳ ಕಾರ್ಯಗಳು ಇನ್ನೂ ಈಡೇರಿಸಲ್ಪಡಬೇಕಾಗಿವೆ. ಅವುಗಳಲ್ಲಿ ಬಹುತೇಕ ಭಾಗ ತುರ್ತಾಗಿ, ವೇಗವಾಗಿ ಮತ್ತು ವಿಸ್ತಾರವಾದ ಆಯಾಮದಲ್ಲಿ ಸಾಧಿಸಲ್ಪಡಬೇಕಾಗಿವೆ.

ಸಂಯುಕ್ತ ರಾಷ್ಟ್ರ ಸಂಘ (ಯು.ಎನ್.ಓ.)ದಲ್ಲಿ ರಾಷ್ಟ್ರಗಳ ಬಗ್ಗೆ ಬಹಳ ಒತ್ತು ನೀಡಲಾಗುತ್ತಿದೆ ಎಂದೂ ಅವುಗಳ ಸಂಯುಕ್ತತೆ (ಐಕ್ಯತೆ) ಬಗ್ಗೆ ಸಾಕಷ್ಟು ಗಮನ ನೀಡಲಾಗುತ್ತಿಲ್ಲ ಎಂದೂ ಹೇಳಲಾಗುತ್ತಿದೆ. ಇದಕ್ಕಿರುವ ಎದುರುತ್ತರವೇನೆಂದರೆ, ರಾಷ್ಟ್ರಗಳಿದ್ದರೆ ಮಾತ್ರ ಅವುಗಳ ಐಕ್ಯತೆ ಸಾಧ್ಯ.

ಒಂದು ವಿಷಯವನ್ನು ಮನವರಿಕೆ ಮಾಡಿಕೊಳ್ಳಬೇಕು. ಸಂಯುಕ್ತ ರಾಷ್ಟ್ರ ಸಂಘವು ಜನರು ತಮ್ಮ ದೇಶಗಳ ಒಡೆಯರಾಗಲು ಅನೇಕ ದೇಶಗಳ ಜನರನ್ನು ಪ್ರೇರೇಪಿಸಿ ಅದರಲ್ಲಿ ವೇಗತೆಯನ್ನ ಉಂಟುಮಾಡಿ ಎಲ್ಲಾ ರಾಷ್ಟ್ರಗಳ ಜನರು ಒಗ್ಗೂಡಿ ತಮ್ಮ ಸಾಮೂಹಿಕ ಒಳಿತಿಗಾಗಿ ಪ್ರಯತ್ನಿಸುವಂತೆ ಮಾಡಿದೆ. ಈ ಕೆಲಸ ಈಗ ಬಹುಮಟ್ಟಿಗೆ ಪೂರ್ಣಗೊಂಡಿದೆ. ಅದರ ಪರಿಣಾಮವಾಗಿ ಈ ಸಂಘವು ಜಾಗತಿಕ ಸ್ಥಾನದ ಹೊಸ್ತಿಲನ್ನು ತಲುಪಿದೆ. ಕಠಿಣ, ನಿವಾರಿಸಲು ಅಸಾಧ್ಯವೆಂದು ತೋರುವ ಕೆಲವು ಅಡ್ಡಿ ಆತಂಕಗಳು ಇವೆ. ಆದರೆ ಮಾನವರ ಸ್ವಾತಂತ್ರ್ಯ ಮತ್ತು ಮಾನವರ ಗೌರವದ ಕಡೆಗೆ ಇರುವ ಹರಿವು ಎಷ್ಟು ಬಲವತ್ತಾಗಿದೆ ಎಂದರೆ ತಡೆಗಟ್ಟುಗಳು ಸುದೀರ್ಘವಾಗಿ ಮುಂದುವರಿಯಲಾರವು. ಪ್ರತಿರೋಧವು ವಿವೇಕಯುತವಾಗಿ ಮತ್ತು ಬೇಗನೆ ಈ ಬಗ್ಗೆ ಹೆಚ್ಚು ಮನವರಿಕೆ ಮಾಡಿದ ನಂತರ ನಿವಾರಣೆಯಾಗುವುದೆಂದೂ ಮನುಷ್ಯರು ಅನುಭವಿಸುವ ಹಿಂಸೆಯು ಕೊನೆಗೊಳ್ಳುವುದೆಂದೂ ನಾವು ಆಶಿಸೋಣ. ಈ ಕೆಲಸವು ಪೂರ್ಣವಾಗಿ ಈಡೇರಿದಾಗ ಏಕಲೋಕದ ಬಗ್ಗೆ ನಮಗಿರುವ ದೃಷ್ಟಿಯು ಸಾಕ್ಷಾತ್ಕಾರ ಹೊಂದುವುದು.

ರಾಜಕೀಯ ವಲಯದಲ್ಲಿ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಯಾವುದೇ ಶಕ್ತಿಶಾಲಿ ದೇಶದೊಂದಿಗೆ ಸಂಬಂಧ ಹೊಂದಿರದ ನಿರ್ಲಿಪ್ತ ರಾಷ್ಟ್ರಗಳ ಮೂರನೆಯ ಒಂದು ಗುಂಪು ಉದ್ಭವಿಸಿದೆ. ಸಂಯುಕ್ತ ರಾಷ್ಟ್ರ ಸಂಘದ ಸ್ಥಾಪನೆಯ ನಂತರ ಮಹಾಶಕ್ತಿಗಳ ಕಡೆಗೆ ಕೇಂದ್ರೀಕೃತವಾದ ಲೋಕದ ವಿಭಿನ್ನ ದೇಶಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಈ ಗುಂಪು ಸಹಾಯಮಾಡಿದೆ. ಹಸಿವು, ರೋಗ ಮತ್ತು ಅಜ್ಞಾನವು ಬೇಗನೆ ನಿವಾರಣೆಯಾಗಿ ಲೋಕದಲ್ಲೆಲ್ಲಾ ಇರುವ ಜನರ ಜೀವಿತವನ್ನು ಒಂದು ಉತ್ತಮ ಮಟ್ಟಕ್ಕೆ ಏರಿಸಬೇಕೆಂದು ಆ ಗುಂಪು ಆಗ್ರಹ ಪಡಿಸುತ್ತಿದೆ. ಈ ಉದ್ದೇಶ ಲಕ್ಷ್ಯಗಳು ಈಗ ಸಾರ್ವತ್ರಿಕವಾಗಿ ಅಂಗೀಕಾರ ಪಡೆದಿವೆ. ಇದನ್ನು ಹೇಗೆ ಸಾಧಿಸುವುದು ಮತ್ತು ಎಷ್ಟು

ವೇಗವಾಗಿ ಸಾಧಿಸಬೇಕು ಎಂಬುದರ ಬಗ್ಗೆ ಮಾತ್ರ ಭಿನ್ನಾಭಿಪ್ರಾಯಗಳಿವೆ.

ನಾವು ಏಕಲೋಕದ ಬಗ್ಗೆ ಪ್ರಸ್ತಾಪಿಸುವಾಗ ನಾವು ನಮ್ಮ ಮನಸ್ಸಿನಲ್ಲಿ ಅದರ ಬಗ್ಗೆ ಹೊಂದಿರುವ ಕಲ್ಪನೆ ಏನು? ಅದಕ್ಕಾಗಿ ಪ್ರಯತ್ನಿಸಲು ಅರ್ಹವಾಗಿರುವ ಲೋಕವು ಹೇಗಿರಬೇಕು? ನಿಶ್ಚಯವಾಗಿಯೂ ಹಸಿವು, ರೋಗ, ಅಜ್ಞಾನ ಭರಿತ ಲೋಕವನ್ನು ನಾವು ಬಯಸಲಾರೆವು. ಕುಡುಕರು, ಮಾದಕ ದ್ರವ್ಯ ಸೇವಕರು, ಜುಗಾರಿ ಕೋರರು ಮತ್ತು ವಿಕೃತ ಮನೋಭಾವ ಹೊಂದಿರುವವರಿರುವ ಲೋಕವನ್ನು ನಾವು ಬಯಸಲಾರೆವೆಂದು ನಾನು ಪ್ರತೀಕ್ಷಿಸುತ್ತೇನೆ.

ಸಜ್ಜನಿಕೆ, ದಯೆ, ಸಹಭಾಗಿಯಾಗುವಿಕೆ, ಸಹಕಾರ, ಮದ್ಯರಹಿತ, ಸುಸ್ವಭಾವ ಹೊಂದಿದ, ನ್ಯಾಯ ಮತ್ತು ಕರುಣೆ, ಸಮಾನತೆ, ತಾರತಮ್ಯ ಭಾವನೆ ಇಲ್ಲದ, ಶಾಂತಿಭರಿತ, ಸುವ್ಯವಸ್ಥಿತ, ಹರ್ಷಭರಿತ, ಶುಭಕೋರುವ, ಪ್ರಗತಿ ಮತ್ತು ಅಭಿವೃದ್ಧಿ ಬಯಸುವ ಜನರಿರುವ ಲೋಕವನ್ನು ನಾವು ಆಶಿಸುತ್ತೇವೆ. ಇಂತಹ ಲೋಕಕ್ಕೆ ದೇವವಿಶ್ವಾಸದ ಮೂಲಕ ಪ್ರವೇಶವನ್ನು ಗಳಿಸಲು ಸಾಧ್ಯ. ನಾವು ಆವಶ್ಯಕವಾಗಿರುವ ಪರಿಶ್ರಮವನ್ನು ಮಾಡಬೇಕು. ನಾವು ನಿಷ್ಠೆಯಿಂದ, ಸಹನೆಯಿಂದ, ನಿರಂತರವಾಗಿ ಪ್ರಯತ್ನಿಸಬೇಕು. ಆದರೆ ದೇವಾನುಗ್ರಹದ ಮೂಲಕ ಮಾತ್ರ ಜಯವು ಲಭಿಸುವುದು.

ಇಂದು ಹಸಿವು, ರೋಗ ಮತ್ತು ಅಜ್ಞಾನಗಳನ್ನು ನಿವಾರಿಸಲು ಅಸಾಧ್ಯವೇನೂ ಅಲ್ಲ. ಸಾಮೂಹಿಕ ನಾಶಕ್ಕಾಗಿ ನಿರ್ಮಿಸಲ್ಪಡುವ ಆಯುಧಗಳಿಗಾಗಿ ಮಾಡುವ ಪರಿಶ್ರಮ, ಶಕ್ತಿ ಮತ್ತು ಸಂಪನ್ಮೂಲದ ಹತ್ತರಲ್ಲಿ ಒಂದಂಶವನ್ನು ಮನುಷ್ಯನ ಸೇವೆಗಾಗಿ ವಿನಿಯೋಗಿಸುವುದಾದರೆ ಅದರ ಮೂಲಕ ಹಸಿವು, ರೋಗ ಮತ್ತು ಅಜ್ಞಾನವನ್ನು ಅಳಿಸಿಬಿಡಲು ಸಾಧ್ಯವಾಗುವುದು. ಆವಶ್ಯಕವಾಗಿರುವುದು ದೇವನು ದಯಪಾಲಿಸಿದ ಅನುಗ್ರಹಗಳ ವಿನಿಯೋಗದ ಕುರಿತು ಅವನಿಗೆ ಲೆಕ್ಕ ಒಪ್ಪಿಸಲಿಕ್ಕಿದೆ ಎಂಬ ದೃಢವಿಶ್ವಾಸವಾಗಿದೆ.

ಪ್ರತಿಯೊಂದು ಹೊಸ ಜ್ಞಾನವು ದೇವನ ಅನುಗ್ರಹವಾಗಿದೆ. ಅವನು ಅದರ ಬಗ್ಗೆ ಹೀಗೆ ಹೇಳುತ್ತಾನೆ:

> *ನೀವು ನನ್ನ ಅನುಗ್ರಹಗಳನ್ನು ಸದುಪಯೋಗಪಡಿಸಿದರೆ ನಾನು ಖಂಡಿತವಾಗಿಯೂ ನಿಮಗೆ ಅನುಗ್ರಹಗಳನ್ನು ವೃದ್ಧಿಗೊಳಿಸುವೆನು. ನೀವು ಅವುಗಳನ್ನು ದುರುಪಯೋಗಪಡಿಸಿದರೆ ನನ್ನ ಶಿಕ್ಷೆ ನಿಶ್ಚಯವಾಗಿಯೂ ಕಠೋರವಾಗಿರುವುದು.*
> ***(ಪವಿತ್ರ ಖುರ್‌ಆನ್ ಅಧ್ಯಾಯ 14: ವಚನ 8)***

ಈ ವಚನದಲ್ಲಿ ಸ್ಪಷ್ಟವಾಗಿ ಹೀಗೆ ಮುನ್ನೆಚ್ಚರಿಕೆ ನೀಡಲಾಗಿದೆ: ದೇವನ ಅನುಗ್ರಹಗಳನ್ನು ದುರುಪಯೋಗಪಡಿಸಿದರೆ, ಅವುಗಳನ್ನು ನಾಶದ ಉಪಕರಣಗಳಾಗಿ ಮಾರ್ಪಡಿಸಲಾಗುವುದು. ಅದರ ಬಗ್ಗೆ ನಮ್ಮ ಮುಂದೆ ಸ್ಪಷ್ಟವಾದ ಚಿತ್ರಗಳಿವೆ. ನಾವು ಅವುಗಳನ್ನು ಲಕ್ಷಿಸುವುದಾದರೆ ಅವುಗಳಿಂದ ನೀತಿ ಪಾಠಗಳನ್ನು ಕಲಿಯಬಹುದಾಗಿದೆ.

ಮಾಲ್ತಸ್ ಮತ್ತು ಅವನ ಹಾಗೆ ಯೋಚಿಸುವ ಜನರಿದ್ದರೂ ಜನಸಂಖ್ಯೆ ಸಾಕಷ್ಟು ವೃದ್ಧಿಯಾಗಿದ್ದರೂ ಆಹಾರದ ಉತ್ಪಾದನೆಯು ವೈಜ್ಞಾನಿಕ ಮತ್ತು ತಾಂತ್ರಿಕ ವಿಧಾನಗಳ ಬಳಕೆಯ ಕಾರಣ ಎಷ್ಟು ಹೆಚ್ಚಾಗಿದೆ ಎಂದರೆ ಆವಶ್ಯಕತೆಗಳಿಗೆ ಸಾಕಾಗದಿರುವ ಸ್ಥಿತಿ ಇಲ್ಲ. ಲೋಕದ ವಿವಿಧ ಭಾಗಗಳಲ್ಲಿ ವಿವಿಧ ಕಾಲಗಳಲ್ಲಿ ತಲೆದೋರುವ ಕ್ಷಾಮವು ಬೆಳೆನಾಶದ ಕಾರಣದಿಂದ ಉದ್ಭವಿಸುತ್ತವೆ. ಅವುಗಳನ್ನು ಮುಂಚಿತವಾಗಿ ಮನವರಿಕೆ ಮಾಡಿಕೊಂಡು ಪರಿಹರಿಸಲು ಸಾಧ್ಯವಿದೆ. ಜನರಿಗೆ ಸಹಾಯ ತಲಪಿಸಲು ಹೆಚ್ಚು ಆಸಕ್ತಿ, ಮಾನವರ ಕಷ್ಟಗಳ ಬಗ್ಗೆ ಹೆಚ್ಚು ಸಹಾನುಭೂತಿ, ಹೆಚ್ಚು ಮುಂದಾಲೋಚನೆ ಮತ್ತು ಕರ್ತವ್ಯನಿಷ್ಠೆಯ ಮೂಲಕ ಇವುಗಳನ್ನು ಪರಿಹರಿಸಬಹುದಾಗಿದೆ. ಕೃಷಿ ಯೋಗ್ಯವಾದ ವಿಶಾಲ ಪ್ರದೇಶಗಳು ಉಳುಮೆಗಾಗಿ ಪ್ರತೀಕ್ಷೆ ಮಾಡುತ್ತಾ ಇವೆ. ಜೀವದಾಯಕ ನದಿಗಳ ನೀರಿನ ಬಹುಭಾಗ ಸಾಗರಗಳನ್ನು ಸೇರುತ್ತಿವೆ. ಅವುಗಳನ್ನು ಬಳಸಿಕೊಂಡು ಬರಡು ಪ್ರದೇಶಗಳಲ್ಲಿ ಕೃಷಿ ಮಾಡಬಹುದಾಗಿದೆ. ನೆರೆ ಹಾವಳಿಯ-ನಿಯಂತ್ರಣ ಮೂಲಕ ಬೆಳೆಗಳನ್ನುನಾಶದಿಂದ ರಕ್ಷಿಸಬಹುದಾಗಿದೆ. ವೈಜ್ಞಾನಿಕ ಕೃಷಿ ವಿಧಾನಗಳನ್ನು ಬಳಸಿ ರಸಗೊಬ್ಬರ ಉಪಯೋಗಿಸಿ ಕೆಲವೇ ವರ್ಷಗಳಲ್ಲಿ ಈಗಿನ ಉತ್ಪಾದನೆ ಗಿಂತ ನಾಲ್ಕು ಪಟ್ಟು ವರ್ಧಿಸಬಹುದೆಂದು ಉತ್ಪ್ರೇಕ್ಷೆರಹಿತ ಅಂದಾಜು ಮಾಡಲಾಗಿದೆ. ಆದರೆ ಇದನ್ನು ಈಡೇರಿಸಲು ರಾಜಕೀಯ ಉದ್ದೇಶಲಕ್ಷ್ಯ ಗಳಿಗಿಂತ ಮನುಷ್ಯರ ಆವಶ್ಯಕತೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು ಅಗತ್ಯವಾಗಿದೆ.

ಆಹಾರ, ಬಟ್ಟೆ ಮತ್ತು ವಸತಿಗೆ ಸಂಬಂಧಿಸಿ ಶ್ರೀಮಂತ ಸಮಾಜಗಳಿಗೆ ಒಂದು ಮುನ್ನೆಚ್ಚರಿಕೆ ನೀಡಬೇಕಾಗಿದೆ. ಲೋಕದ ಎಲ್ಲಾ ಪ್ರದೇಶಗಳಲ್ಲೂ ಜೀವಿತದ ಮಟ್ಟವನ್ನು ಮೇಲೆತ್ತಲು ಎಲ್ಲಾ ಪ್ರಯತ್ನಗಳನ್ನು ಮಾಡುವುದು ಉತ್ತಮವಾಗಿದ್ದರೂ ಮನುಷ್ಯನ ಗೌರವಕ್ಕೆ ಅರ್ಹವಾದ ಸುಖ ಸೌಲಭ್ಯಗಳು ಎಲ್ಲರಿಗೂ ಸಿಗುವಂತೆ ಪ್ರಯತ್ನ ಮಾಡುವುದು ಆವಶ್ಯಕವಾಗಿದ್ದರೂ ಇಹಲೋಕದಲ್ಲಿ ಸುಖ ಸಮೃದ್ಧಿಯನ್ನು ಅನುಭವಿಸುವ ಭಾಗ್ಯಶಾಲಿಗಳು ಅವುಗಳನ್ನು ಮಿತವಾಗಿ ಬಳಸಿಕೊಂಡು ಅವರಿಗಿಂತ ಕಡಿಮೆ ಭಾಗ್ಯ ಪಡೆದವರ ಮುಂದೆ ಅವುಗಳನ್ನು ಹೆಮ್ಮೆಯಿಂದ ಪ್ರದರ್ಶಿಸಬಾರದು. ಎಲ್ಲಾ ರೀತಿಯ ಅತಿರೇಕ ವರ್ತನೆಗಳನ್ನು ಬಿಟ್ಟುಬಿಡಬೇಕು. ಎಲ್ಲಾ ವಿಷಯಗಳಲ್ಲೂ ಮಿತವಾಗಿ ವರ್ತಿಸುವುದು ಉತ್ತಮವಾದ ನಡೆವಳಿಕೆಯಾಗಿದೆ. ಅದು ಸುಸ್ವಭಾವವೂ ಆಗಿದೆ. ಒಂದು ಡಚ್‌ಗಾದೆ ಹೀಗಿದೆ: "ಅಗತ್ಯವಾದಷ್ಟು ಸಾಕಾಗುತ್ತದೆ; ಆದರೆ ಹೆಚ್ಚಾದರೆ ವಿಪರೀತವಾಗುತ್ತದೆ."

ರೋಗದ ಪ್ರತಿರೋಧ ಮತ್ತು ಚಿಕಿತ್ಸೆ ಸ್ವಲ್ಪ ಜಟಿಲ ಸಮಸ್ಯೆಯಾಗಿದೆ. ಆದರೆ ನನಗೆ ಈ ವಿಷಯದಲ್ಲಿಯೂ ಬಹಳ ನೆಮ್ಮದಿ ದೊರಕಿದೆ. ಪಶ್ಚಿಮ ಆಫ್ರಿಕದ ನಾಲ್ಕು ದೇಶಗಳಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆ ನಡೆಸಿದ ಶೈಕ್ಷಣಿಕ ಮತ್ತು ವೈದ್ಯಕೀಯ ಸಹಾಯದ ಕಾರ್ಯಕ್ರಮಗಳು ಆಶ್ಚರ್ಯಕರವಾಗಿ ಜಯಶಾಲಿಯಾದುವು. ದೇವನ ಸಂಪ್ರೀತಿಯನ್ನು ಗಳಿಸುವ ಏಕ ಉದ್ದೇಶದಿಂದ ಪ್ರೇರಿತರಾಗಿ ನಿಷ್ಠೆಯಿಂದಲೂ ನಿಸ್ವಾರ್ಥತೆಯಿಂದಲೂ ಮಾನವರಿಗಾಗಿ ಮಾಡುವ ಸೇವೆಯು ಎಷ್ಟು ಫಲಕಾರಿ ಆಗಬಲ್ಲುದು ಎಂಬುದನ್ನು ಇದು ತೋರಿಸಿಕೊಟ್ಟಿದೆ. ಈ ಕಾರ್ಯಕ್ರಮದ ವೈಶಿಷ್ಟ್ಯತೆ ಏನೆಂದರೆ ಇದು ಸಂಪೂರ್ಣವಾಗಿ ಯಾವುದೇ ಅಧಿಕಾರಿಯ ಅಥವಾ ಸರಕಾರದ ಸಂಬಂಧವಿಲ್ಲದೆ ಮಾಡುವ ಸ್ವಯಂಸೇವೆಯಾಗಿದೆ. ಈ ಕಾರ್ಯಕ್ರಮ ಇದುವರೆಗೆ ಗಳಿಸಿದ ಯಶಸ್ಸು ಈ ಕಾರ್ಯಕ್ರಮವನ್ನು ವಿಸ್ತರಿಸಿ ಹೆಚ್ಚು ಶಕ್ತಿಶಾಲಿಯನ್ನಾಗಿ ಮಾಡಬಹುದೆಂಬ ಪ್ರತೀಕ್ಷೆಗೆ ಬಲ ನೀಡುತ್ತದೆ. ರೋಗ ಮತ್ತು ಅಜ್ಞಾನವನ್ನು ಹೋಗಲಾಡಿಸಲು ತುರ್ತಾಗಿ ಆವಶ್ಯಗಳಿರುವ ಪ್ರದೇಶಗಳಲ್ಲಿ ಇದನ್ನು ಒಂದು ಮಾದರಿಯನ್ನಾಗಿ ಮಾಡಬಹುದಾಗಿದೆ.

ಏಕಲೋಕ ವ್ಯವಸ್ಥೆ ಸ್ಥಾಪಿತವಾದಾಗ ಮನುಷ್ಯರ ಪರಸ್ಪರ ಸಂಬಂಧಗಳು ಸುಲಭವಾಗಬೇಕು. ಕೃತಕ ತಡೆಗಳನ್ನು ಸಾಧ್ಯವಾದಷ್ಟು ದೂರಸರಿಸಬೇಕು ಅಥವಾ ಕಡಿಮೆಮಾಡಬೇಕು. ಎಲ್ಲಾ ವಿಷಯಗಳಲ್ಲೂ ಶುಚಿತ್ವಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕು. ಅದಕ್ಕೆ ಪ್ರೋತ್ಸಾಹ ನೀಡಬೇಕು. ಆಡಂಬರದ ಆಚರಣೆಗಳನ್ನು ಕಡಿಮೆ ಮಾಡಬೇಕು. ಅವುಗಳು ಮನುಷ್ಯರ ಮಧ್ಯೆ ಸಂಬಂಧವನ್ನು ತಡೆಯದಂತೆ ಕನಿಷ್ಠ ಸ್ಥಿತಿಗೆ ಇಳಿಸಬೇಕು. ನಾನು ಒಂದು ಘಟನೆಯನ್ನು ನೆನಪಿಸುತ್ತೇನೆ. ವರ್ಲ್ಡ್ ಬ್ರದರ್‌ಹುಡ್ (ಜಾಗತಿಕ ಭ್ರಾತೃತ್ವ) ಎಂಬ ಸಂಸ್ಥೆಯು ಒಂದು ಸತ್ಕಾರಕೂಟಕ್ಕೆ ವಾಶಿಂಗ್‌ಟನ್ ಡಿ.ಸಿ.ಯಲ್ಲಿ ನನ್ನನ್ನು ಆಮಂತ್ರಿಸಿತ್ತು.

ನಾನು ಆ ಸಂಸ್ಥೆಯ ಉಪಾಧ್ಯಕ್ಷ ಆದ ಕಾರಣ ಆ ಸಂಸ್ಥೆಯ ಆದರ್ಶಗಳ ಪರವಾಗಿ ಮಾತನಾಡಲಿಕ್ಕಿತ್ತು. ಆಮಂತ್ರಣ ಪತ್ರಿಕೆಯಲ್ಲಿ ಕಪ್ಪು ಟೈ ಧರಿಸಬೇಕೆಂದು ಸ್ಪಷ್ಟಪಡಿಸಲಾಗಿತ್ತು. ನಾನು ಕಪ್ಪು ಟೈ ಧರಿಸದೆ ಲೌಂಜ್ ಸೂಟ್‌ನಲ್ಲಿ (ದಿನಚರಿಯ ಸಾಮಾನ್ಯ ಉಡುಪಿನಲ್ಲಿ) ಆ ಸಭೆಗೆ ಹೋದೆನು. ನಾನು ಆ ಸತ್ಕಾರ ಕೂಟದಲ್ಲಿ ಹೀಗೆ ಹೇಳಿದೆ: ನಾನು ಮತ್ತು ಇನ್ನೊಬ್ಬ ಮನುಷ್ಯ ಸಮಾನವಾಗಿ ಉಡುಗೆ ತೊಡುಗೆಗಳನ್ನು ಧರಿಸಿರದಿದ್ದರೆ ನಾವಿಬ್ಬರೂ ಒಟ್ಟಿಗೆ ಕುಳಿತು ಕೊಂಡು ಊಟ ಮಾಡಲಾರೆವು ಎಂದಾದರೆ ಜಾಗತಿಕ ಭ್ರಾತೃತ್ವವು ಹೇಗೆ ತಾನೆ ಸ್ಥಾಪಿತವಾಗುವುದು?

ಅನಂತರ ಅಲ್ಲಿನ ಸತ್ಕಾರ ಕೂಟಗಳಲ್ಲಿ ಕಪ್ಪು ಟೈ ಸೂಟುಗಳನ್ನು ಧರಿಸಬೇಕೆಂಬ ನಿಯಮ ರದ್ದುಗೊಳಿಸಲ್ಪಟ್ಟಿತು.

ನಮ್ಮ ಪೈಕಿ ಬಹುತೇಕ ಜನರು ಹಗುರವಾಗಿ ಹೀಗೆ ಭಾವಿಸುತ್ತೇವೆ: ಏಕ ಲೋಕದ ಕಡೆಗೆ ನಾವು ಸಮೀಪಿಸುವಾಗ ನಮ್ಮ ಹೊರತು ಉಳಿದ ಲೋಕದ ಜನರು ನಮ್ಮ ಆಚಾರ ವಿಚಾರಗಳನ್ನು ಕೈಗೊಳ್ಳುವರೆಂದೂ ಅವರು ನಮ್ಮ ಹೃದಯದ ಆಶಯಗಳಿಗನುಸಾರವಾಗಿ ವರ್ತಿಸುವರೆಂದೂ. ಭಾಷೆ, ವರ್ಣ, ಧರ್ಮ, ಜನಾಂಗ, ಉಡುಗೆ ತೊಡುಗೆ ಮತ್ತು ವರ್ತನೆಯ ರೀತಿ ವಿವಿಧವಾಗಿದ್ದರೂ "ಮನುಷ್ಯನು ಮನುಷ್ಯನೇ" ಎಂಬ ಸತ್ಯವನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು.

ಹಸಿವು, ರೋಗ ಮತ್ತು ಅಜ್ಞಾನಗಳನ್ನು ದೂರೀಕರಿಸಲು ವಿಶೇಷ ಶ್ರದ್ಧೆವಹಿಸಬೇಕು. ಈಗ ನಮಗೆ ಅದನ್ನು ಸಾಧಿಸಲು ಧಾರಾಳ ಮಾರ್ಗಗಳಿವೆ. ಆವಶ್ಯಕವಾಗಿರುವುದು ಅದರ ಬಗ್ಗೆ ಮನಸ್ಸು ಮತ್ತು ದೃಢ ನಿರ್ಧಾರ. ಈ ಆವಶ್ಯಕತೆಗಳನ್ನು ಈಡೇರಿಸುವುದು ಕಷ್ಟಕರವಾದುದೇನೂ ಅಲ್ಲ. ಐಶ್ವರ್ಯದ ವರ್ಧನೆಯ ಕಾರಣದಿಂದ ತಲೆದೋರಿರುವ ದೋಷಗಳನ್ನು ಪರಿಹರಿಸಲು ಬೇರೆಯೇ ರೀತಿಯಲ್ಲಿ ಸಮೀಪಿಸಬೇಕಾಗಿದೆ. ನಾವು ಈ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗದೆ ನಮ್ಮ ತಲೆಗಳನ್ನು ಮರಳಿನಲ್ಲಿ ಹೂಳಿ ಆ ಸಮಸ್ಯೆಗಳನ್ನು ನಿರ್ಲಕ್ಷಿಸಲು ವ್ಯರ್ಥ ಪರಿಶ್ರಮ ಮಾಡಬಹುದಾಗಿದೆ. ಅಥವಾ ನಾವು ಧೈರ್ಯದಿಂದ ಆ ಸಮಸ್ಯೆಗಳನ್ನು ಪರಿಹರಿಸಲು ಮುಂದೆ ಬಂದು ಪರಿಹಾರ ಮಾರ್ಗಗಳನ್ನು ರೂಪಿಸಿ ಕೃತಿಗಿಳಿಸಬಹುದು. ಆದರೆ ಆ ನಿಟ್ಟಿನಲ್ಲಿ ನಮ್ಮ ಅನುಭವವು ಪ್ರೋತ್ಸಾಹದಾಯಕವಾಗಿಲ್ಲ ಎಂದು ನಾವು ತಪ್ಪೊಪ್ಪಿಗೆ ನೀಡಬೇಕಾಗಿದೆ.

ನಾನು ಅವಲಂಬಿಸುವ ಧರ್ಮವಾದ ಇಸ್ಲಾಮ್, ಮನುಷ್ಯನು ಶರೀರ, ಮನಸ್ಸು ಮತ್ತು ಆತ್ಮದ ಸಂಯುಕ್ತವೆಂದು ಪ್ರತಿಪಾದಿಸುತ್ತದೆ. ಈ ಘಟಕಗಳು ಪರಸ್ಪರ ಪ್ರಭಾವ ಬೀರುತ್ತವೆ. ಒಂದು ಘಟಕವು ಭ್ರಷ್ಟವಾದರೆ ಉಳಿದವು ಅದರಿಂದ ಪ್ರಭಾವಿತವಾಗುತ್ತವೆ. ಸಂಪೂರ್ಣ ಸ್ವಸ್ಥ ಕಾರ್ಯ ನಿರ್ವಹಣೆಗೆ ಮನುಷ್ಯನ ಮೇಲೆ ಕೆಲವು ನಿಯಮಗಳನ್ನು ಇಸ್ಲಾಮ್ ಧರ್ಮವು ಹೇರುತ್ತದೆ. ಉದಾಹರಣೆಗೆ ಅದು ಆಹಾರ ಪಾನೀಯಗಳ ಬಗ್ಗೆ ನಿಯಂತ್ರಣ ಸೂಚಿಸಿದೆ. ಮನುಷ್ಯನಿಗೆ ಹಾನಿಕಾರಕ ಆಹಾರ ಪಾನೀಯಗಳನ್ನು ನಿಷಿದ್ಧಗೊಳಿಸಿ ಶುದ್ಧವೂ ಆರೋಗ್ಯಕರವೂ ಆಗಿರುವುದನ್ನು ಮಿತವಾಗಿ ಬಳಸಲು ಅದು ಆದೇಶಿಸುತ್ತದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಅಲ್ಲಾಹನು ನಿಮಗೆ ಒದಗಿಸಿ ಕೊಟ್ಟವುಗಳಿಂದ ಧರ್ಮಬದ್ಧವೂ ಪರಿಶುದ್ಧವೂ ಆದ ವಸ್ತುಗಳನ್ನು ನೀವು ಭುಜಿಸಿರಿ. ನೀವು ನಂಬಿಕೊಂಡಿರುವ ಅಲ್ಲಾಹನಿಗೆ ಭಯಭಕ್ತಿಯುಳ್ಳವರಾಗಿರಿ.* *(5:89)*

*ಓ ಆದಮ್ ಸಂತತಿಗಳೇ, ನಿಮ್ಮ ಆರಾಧನೆಯ ಪ್ರತಿಯೊಂದು (ಸಮಯದಲ್ಲೂ) ಸ್ಥಳದಲ್ಲೂ ನಿಮ್ಮ ಅಲಂಕಾರದ ಬಗ್ಗೆ ಗಮನ ಕೊಡಿರಿ. ನೀವು ತಿನ್ನಿರಿ, ಕುಡಿಯಿರಿ; ಆದರೆ ಮಿತಿ ಮೀರಬೇಡಿರಿ. ಮಿತಿಮೀರುವವರನ್ನು ಅವನು (ಅಲ್ಲಾಹನು) ಖಂಡಿತವಾಗಿಯೂ ಇಷ್ಟಪಡುವುದಿಲ್ಲ.* (7:32)

ಮುಹಮ್ಮದ್ ಪೈಗಂಬರ್[ಸ] ಒಮ್ಮೆ ಹೀಗೆಂದರು:

*ಹಸಿವುಂಟಾದಾಗ ಮಾತ್ರ ನಾವು ತಿನ್ನಲು ಪ್ರಾರಂಭಿಸಿ ಹಸಿವನ್ನು ಪೂರ್ಣವಾಗಿ ಪರಿಹರಿಸುವ ಮೊದಲೇ ತಿನ್ನುವುದನ್ನು ನಿಲ್ಲಿಸುವ ಜನರು ನಾವಾಗಿದ್ದೇವೆ. ನಮಗೆ ವೈದ್ಯರ ಆವಶ್ಯಕತೆ ಬಹಳ ಕಡಿಮೆ ಇದೆ."*

ಇಂದು ಲೋಕದಾದ್ಯಂತ ಇರುವ ವೈದ್ಯಕೀಯ ಅಭಿಪ್ರಾಯ ಹೊಗೆಬತ್ತಿ ಸೇವನೆ ಮತ್ತು ವಿಶಿಷ್ಟವಾಗಿ ಸಿಗರೇಟು ಸೇವನೆ ಹಾನಿಕರ ಎಂದಾಗಿದೆ. ಹೀಗಿದ್ದರೂ ಇಪ್ಪತ್ತನೆಯ ಶತಮಾನದ ಕೊನೆಯ ಕಾಲುಭಾಗದ ಹೊಸ್ತಿಲಲ್ಲಿರುವ ಮನುಷ್ಯರು ತಮ್ಮ ಮಾನವ ರೂಪದ ಪರಮ ಹಂತವನ್ನು ತಲಪಿದ್ದರೂ ಅವರ ಈ ಕೆಟ್ಟ ಅಭ್ಯಾಸವು ಇಳಿಮುಖವಾಗಿಲ್ಲ. ಈ ಅಭ್ಯಾಸವು ಯಾವುದಾದರೂ ರೀತಿಯಲ್ಲಿ ಗುಣಕರವೆಂದು ಯಾರೂ ವಾದಿಸುವುದಿಲ್ಲ. ಅದರ ಹವ್ಯಾಸ ಹೊಂದಿದವರೂ ಅದರಿಂದ ಪೀಡಿತರಾಗುವ ನಿಷ್ಕಳಂಕರೂ ಅದರ ಹಾನಿಕರವಾದ ಪರಿಣಾಮಗಳ ಬಗ್ಗೆ ಒಮ್ಮತ ಹೊಂದಿದ್ದಾರೆ. ಈ ಪರಿಸ್ಥಿತಿಯಲ್ಲಿ ಇದಕ್ಕಿಂತ ಹೆಚ್ಚು ಹಾನಿಕರವಾದ ಮದ್ಯಪಾನ ಮತ್ತು ಮಾದಕ ದ್ರವ್ಯ ಸೇವನೆಯಂತಹ ಕೆಟ್ಟ ಅಭ್ಯಾಸಗಳಿಂದ ಮುಕ್ತಿಯನ್ನು ಪಡೆಯುವುದು ಹೆಚ್ಚು ದುಷ್ಕರವಾಗಿ ತೋರುತ್ತದೆ

ಇತ್ತೀಚೆಗೆ ಅಂಟ್ಲಾಂಟಿಕ್ ಸಾಗರದ ಇಬ್ಬದಿಗಳಲ್ಲಿರುವ ದೇಶಗಳಲ್ಲಿ ಈ ದುರಭ್ಯಾಸಗಳಿಂದ ಹಾನಿಯನ್ನು ಅನುಭವಿಸುವವರ ಸಂಖ್ಯೆ ವರ್ಧಿಸುತ್ತಾ ಇರುವುದರ ಬಗ್ಗೆ ಕೂಗು ಕೇಳಿಸುತ್ತಾ ಇದೆ. ಮದ್ಯವ್ಯಸನದ ಬಗ್ಗೆ ಹೇಳುವುದಾದರೆ ಈ ನಿಟ್ಟಿನಲ್ಲಿ "ಅಲ್ಕೊಹಾಲಿಕ್ಸ್ ಎನೋನಿಮಸ್" ಎಂಬ ಸಂಸ್ಥೆ ನಡೆಸುತ್ತಿರುವ ಉತ್ತಮ ಕೆಲಸಗಳ ಬಗ್ಗೆ ನಮ್ಮ ಗಾಢವಾದ ಮೆಚ್ಚುಗೆಯನ್ನು ಸೂಚಿಸಬೇಕಾಗಿದೆ. ಅದು ಸಾಕೆ? ಅದು ಮಾಡುವ ಕೆಲಸ ಮದ್ಯವ್ಯಸನ ನಿವಾರಿಸಲು ನಿಜವಾದ ಪರಿಹಾರ ಮಾರ್ಗವಾಗಿರುವುದೇ? ಪ್ರತಿಯೊಬ್ಬ ಮದ್ಯವ್ಯಸನಿಯು ಮಿತವಾಗಿ ಮದ್ಯಪಾನ ಮಾಡುವವನಾಗಿ ಪ್ರಾರಂಭ ಮಾಡುತ್ತಾನೆ. ಆದುದರಿಂದ ಮಿತವಾಗಿ ಮದ್ಯಪಾನ ಮಾಡುವವನು ಸಹ ಮದ್ಯವ್ಯಸನಿ ಆಗಬಹುದಾಗಿದೆ. ಅಷ್ಟು ಮಾತ್ರವಲ್ಲ, ಅವನ ಜೊತೆಗೂಡಿ ಮದ್ಯಪಾನ ಮಾಡುವವರನ್ನು ಪ್ರೇರೇಪಿಸಿದ ಅಪರಾಧಕ್ಕೂ ಅವನು ಭಾಗೀದಾರನಾಗುತ್ತಾನೆ. ಒಬ್ಬನು ಮದ್ಯಪಾನ ಮಾಡುವುದನ್ನು ತ್ಯಜಿಸುವುದಾದರೆ ಅವನು ಮದ್ಯವ್ಯಸನಿಯಾಗುವುದನ್ನು ಸ್ವಯಂ ತಡೆಗಟ್ಟುತ್ತಾನಲ್ಲದೆ ತನ್ನ ಮಾದರಿಯ ಕಾರಣದಿಂದ ಇನ್ನಷ್ಟು ಜನರನ್ನು ಮದ್ಯವ್ಯಸನಿಗಳಾಗದಂತೆ ತಡೆಯಲು ಸಮರ್ಥನಾಗುತ್ತಾನೆ. ಅಲ್ಕೊಹಾಲಿಕ್ಸ್ ಎನೋನಿಮಸ್ ಎಂಬ ಸಂಸ್ಥೆ ಅತ್ಯಂತ ಪ್ರಶಂಸಾರ್ಹವಾದ ಪ್ರಯತ್ನಗಳನ್ನು ಮಾಡುತ್ತಿದ್ದರೂ ಮದ್ಯವ್ಯಸನಿಗಳ ಸಂಖ್ಯೆಯನ್ನು ತಗ್ಗಿಸಲು ಸಾಧ್ಯವಾಗಲಿಲ್ಲ. ಅವರ ಸಂಖ್ಯೆ ಹೆಚ್ಚುತ್ತಾ ಇದೆ. ಆದುದರಿಂದ ಮದ್ಯ ವ್ಯಸನವನ್ನು ಚಿಕಿತ್ಸೆಯ ಮೂಲಕ ಭಾಗಶಃ ಮತ್ತು ತಾತ್ಕಾಲಿಕವಾಗಿ ಮಾತ್ರ ಗುಣಪಡಿಸಲು ಸಾಧ್ಯವೆಂದೂ ಪ್ರಭಾವಶಾಲಿಯಾದ ಏಕಮಾತ್ರ ಮಾರ್ಗ ಮದ್ಯಸೇವನೆಯನ್ನು ಸಂಪೂರ್ಣವಾಗಿ ಎಲ್ಲರೂ ತ್ಯಜಿಸುವು ದಾಗಿದೆ ಎಂದೂ ಒಪ್ಪಿಕೊಳ್ಳಬೇಕಾಗಿದೆ. ಆದರೆ ಹೀಗೆ ಸಂಭವಿಸುತ್ತಾ ಇಲ್ಲ. ಪ್ರತಿಯೊಬ್ಬ ವ್ಯಕ್ತಿ ಉಪಯೋಗಿಸುವ ಮದ್ಯದ ಪ್ರಮಾಣವು ಸ್ಥಿರವಾಗಿ ಗಮನಾರ್ಹವಾಗಿ ವರ್ಧಿಸುತ್ತಾ ಇದೆ. ಆದುದರಿಂದ ಈ ಪರಿಸ್ಥಿತಿಯ ಸುಧಾರಣೆ ಗಮನಾರ್ಹವಾದ ರೀತಿಯಲ್ಲಿ ಸಂಭವಿಸುವುದರ ಬಗ್ಗೆ ನಿರೀಕ್ಷೆಯು

ಮಂಕಾಗಿದೆ.

ಯುವ ಜನರಲ್ಲಿರುವ ಮದ್ಯವ್ಯಸನಕ್ಕೆ ಸಂಬಂಧಿಸಿ ಸಹ ಹೀಗೆಯೇ ಹೇಳಬಹುದು. ಅವರಿಗೆ ಸಂಬಂಧಿಸಿ ಹೇಳುವುದಾದರೆ, ಮದ್ಯಪಾನವನ್ನು ತಡೆಯುವ ಬಗ್ಗೆ ಹೆಚ್ಚು ಒತ್ತುಕೊಡಬೇಕು. ಆದರೆ ಮದ್ಯಪಾನವು ಹೆಚ್ಚು ಹೆಚ್ಚಾಗಿ ಹರಡುವ ಹಾಗೆ ಮದ್ಯಪಾನ ನಿಷೇಧದ ಪ್ರಯತ್ನವು ಅದಕ್ಕೆ ಸಮಾನವಾಗಿ ಕಾರ್ಯನಿರತವಾಗಿಲ್ಲ. ಆದುದರಿಂದ ಮುಂದಿನ ಪರಿಣಾಮವು ಆಶ್ವಾಸದಾಯಕವಾಗಿಲ್ಲ.

ಜುಗಾರಿ ವಿವಿಧ ರೀತಿಗಳಲ್ಲಿ ಜಾರಿಯಲ್ಲಿದ್ದರೂ ಅದನ್ನು ಒಂದು ಕೆಟ್ಟ ಕೆಲಸವೆಂದು ಕೂಡ ಪರಿಗಣಿಸಲಾಗುತ್ತಿಲ್ಲ. ಕೆಲವು ಸಂದರ್ಭಗಳಲ್ಲಿ ಅದನ್ನು ಒಂದು ಸಾಮಾಜಿಕ ಒಳಿತೆಂದೂ ಅದರಲ್ಲಿ ಭಾಗವಹಿಸುವುದು ಕರ್ತವ್ಯವೆಂದೂ ಸತ್ಕಾರ್ಯವೆಂದೂ ಗಣಿಸಲಾಗುತ್ತಿದೆ. ಉದಾಹರಣೆಗೆ, ಸಮಾಜಕ್ಕೆ ಹಿತಕರವಾದ ಯೋಜನೆಗಳಿಗೆ ಹಣ ಸಂಗ್ರಹಿಸಲು ಲಾಟರಿ ಎಂಬ ಜುಗಾರಿ ಆಟ ನಡೆಸುವುದು ಒಂದು ಸತ್ಕಾರ್ಯ ಎಂದೇ ಭಾವಿಸಲಾಗುತ್ತಿದೆ. ಆದರೆ ಹೃದಯಗಳಲ್ಲಿರುವ ಹುಣ್ಣಿನ ಬಗ್ಗೆ ನಿರಾಕರಿಸಲಾಗದು.

ಮೇಲೆ ವಿವರಿಸಿದ ವಿಷಯಗಳಿಗೆ ಸಂಬಂಧಿಸಿದ ದೋಷ ವೇನೆಂದರೆ, ಬಲಿಷ್ಠ ನೈತಿಕ ಆದೇಶವು ಇವುಗಳಲ್ಲಿಲ್ಲದಿರುವುದಾಗಿದೆ ಹಾಗೂ ಗುಂಪಿನ ಪ್ರಭಾವವನ್ನು ಸುಲಭವಾಗಿ ಪ್ರತಿರೋಧಿಸಲು ಸಾಧ್ಯವಾಗುವುದಿಲ್ಲ. ಇಸ್ಲಾಮ್ ಧರ್ಮಕ್ಕೆ ಸಂಬಂಧಿಸಿ ಹೇಳುವುದಾದರೆ, ಅದರ ಸ್ಥಿತಿ ಬೇರೆಯೇ ಆಗಿದೆ. ಇಸ್ಲಾಮ್ ತನ್ನ ಅನುಯಾಯಿಗಳಿಗೆ ಶಕ್ತಿಯುತವಾದ ನೈತಿಕ ಆದೇಶ ನೀಡುತ್ತದೆ. ಸಾಮಾಜಿಕ ಸ್ಥಾನವನ್ನು ಗಳಿಸಲು ಮತ್ತು ನಾಗರಿಕರೆಂದು ಪರಿಗಣಿಸಲ್ಪಡಲು ಪಶ್ಚಿಮವನ್ನು ಅನುಕರಿಸಲು ಇರುವ ಆಶೆಯು ಇತರ ಮುಸ್ಲಿಮರ ದೃಷ್ಟಿಯಲ್ಲಿ ತಮ್ಮ ಬಗ್ಗೆ ಉಂಟಾಗಬಹುದಾದ ಕೀಳು ಭಾವನೆಯ ಅಸ್ಪಷ್ಟಕರವಾದ ಅರಿವಿನ ಕಾರಣದಿಂದ ನಿಯಂತ್ರಿಸಲ್ಪಡುತ್ತದೆ.

ಮದ್ಯಪಾನ, ಜೂಜಾಟ, ಬಾಣವೆಸೆದು ಶಕುನ ನೋಡುವುದು ಇತ್ಯಾದಿ ಹೇಯವಾದ ಪೈಶಾಚಿಕ ಕೃತ್ಯಗಳಾಗಿವೆಯೆಂದೂ ಜನರು ಏಳಿಗೆ ಹೊಂದಲಿಕ್ಕಾಗಿ ಅವುಗಳಿಂದ ದೂರವಿರಬೇಕೆಂದೂ ಇಸ್ಲಾಮ್ ಸ್ಪಷ್ಟವಾಗಿ ಹೇಳುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಈ ಬಗ್ಗೆ ಹೀಗೆ ಹೇಳಿರುವರು:

ಯಾವ ವಸ್ತುವು ಹೆಚ್ಚು ಉಪಯೋಗಿಸಿದರೆ ಮತ್ತನ್ನುಂಟು ಮಾಡುತ್ತದೆಯೋ ಆ ವಸ್ತುವನ್ನು ಅಲ್ಪ ಮಾತ್ರವೂ ಉಪಯೋಗಿಸ ಬಾರದು. ಅದನ್ನು ಪೂರ್ಣವಾಗಿ ನಿಷಿದ್ಧಗೊಳಿಸಲಾಗಿದೆ.

ಪವಿತ್ರ ಖುರ್‌ಆನಿನ ಉಪದೇಶ ಮತ್ತು ಪ್ರವಾದಿಯವರ(ಸ) ವ್ಯಾಖ್ಯಾನವು ಮುಸ್ಲಿಮ್ ಧರ್ಮಾನುಯಾಯಿಗಳಲ್ಲಿ ಈ ವಸ್ತುಗಳ ಬಗ್ಗೆ ಎಂತಹ ಅಸಹ್ಯ ಭಾವನೆ ಉಂಟುಮಾಡಿದೆ ಎಂದರೆ ಕೆಲವು ಸಂತರು ಹೀಗೆ ಸಹ ಹೇಳಿದ್ದಾರೆ:

ಒಂದು ಹನಿಯಷ್ಟು ಮದ್ಯದಿಂದ ಕೂಡ ಯಾವುದಾದರೂ ನಾಲಗೆ ಮತ್ತು ಬಾಯಿಯು ಕಳಂಕಿತವಾಗಿದ್ದರೆ ಅಂತಹ ನಾಲಗೆ ಮತ್ತು ಬಾಯಿ ದೇವನ ಮಹಿಮೆಯನ್ನು ಕೊಂಡಾಡಲು ಅನರ್ಹ ವಾಗುತ್ತವೆ.

ವಿಕೃತ ನಡೆವಳಿಕೆಗಳು ಮತ್ತು ಲೈಂಗಿಕ ಅನಾಚಾರಗಳು ಅಶ್ಲೀಲ ಸಾಹಿತ್ಯ ಮೊದಲಾದವುಗಳಿಂದ ಪೋಷಿಸಲ್ಪಡುತ್ತವೆ. ಇವು ಸೂಕ್ತ ಪರಿಹಾರ ಮಾರ್ಗಗಳಿಗೆ ಅಧೀನವಾಗದೆ ತಪ್ಪಿಸಿಕೊಳ್ಳುತ್ತವೆ. ಇದು ಸುಖ ಸಮೃದ್ಧಿಯ ಒಂದು ಉಪ ಉತ್ಪನ್ನವಾಗಿದೆ. ಇದನ್ನು ಅನುಮತಿ ಸಲಾದುದೆಂದು ಹೇಳಿ ಅದನ್ನು ನಿಂದಿಸುವುದನ್ನು ಹಗುರಗೊಳಿಸ ಲಾಗುತ್ತಿದೆ. ಇದಕ್ಕೆ ಸಂಬಂಧಿಸಿ ನಾನು ಹೀಗೆ ಹೇಳಬಯಸುತ್ತೇನೆ: ಸಾಮಾಜಿಕ ನಡತೆಗಳನ್ನು ಮತ್ತು ಅಭ್ಯಾಸಗಳನ್ನು ಮುಂದುವರಿಸುತ್ತಾ ಹೋದರೆ ಅದರಿಂದ ಒಂದು ನಿಶ್ಚಿತ ಪರಿಣಾಮ ಖಂಡಿತವಾಗಿಯೂ ಉಂಟಾಗುವುದು. ಅದು ಅನಿವಾರ್ಯವಾಗಿದೆ. ಅದರ ಪರಿಣಾಮವನ್ನು ತಡೆಗಟ್ಟಬೇಕಾದರೆ ನಡೆವಳಿಕೆಯನ್ನು ಪೂರ್ಣವಾಗಿ ಬದಲಾಯಿಸುವುದು ಮತ್ತು ನಿಯಂತ್ರಿಸುವುದು ಆವಶ್ಯಕವಾಗಿದೆ. ಸ್ವತಂತ್ರರಾಗಿ ಜನರನ್ನು ವರ್ತಿಸಲು ಬಿಡುವುದಾದರೆ ಅದರ ಪರಿಣಾಮ ತಪ್ಪಿಸಲು ಅಸಾಧ್ಯ ವಾಗುವುದು. ನಿಯಂತ್ರಣವು ಆರಂಭದ ಘಟ್ಟದಲ್ಲಿಯೇ ಪ್ರಾರಂಭವಾಗ ಬೇಕಾಗಿದೆ. ಹಾಗೆ ಆದರೆ ಮಾತ್ರ ಅದು ಪ್ರಯೋಜನಕರವಾಗುವುದು. ಇಸ್ಲಾಮ್ ಈ ಬಗ್ಗೆ ಹೇರಿರುವ ನಿಯಂತ್ರಣಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸುತ್ತೇನೆ:

*ಸತ್ಯವಿಶ್ವಾಸಿಗಳೊಂದಿಗೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿ ಕೊಳ್ಳಲಿ. ಅದು ಅವರಿಗೆ ಪರಿಶುದ್ಧ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ.*

*ಸತ್ಯವಿಶ್ವಾಸಿನಿಯರೊಂದಿಗೆ ಹೇಳು: ಅವರು ತಮ್ಮ ಕಣ್ಣು ಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. ಅವರು ತಮ್ಮ ಸೌಂದರ್ಯವನ್ನು ತೋರ್ಪಡಿಸ ದಿರಲಿ – ತನ್ನಿಂತಾನೆ ಪ್ರಕಟಗೊಳ್ಳುವುದರ ಹೊರತು. ಅವರು ತಮ್ಮ ಶಿರೋವಸ್ತ್ರದಿಂದ ತಮ್ಮ ಎದೆಯನ್ನೂ ಮುಚ್ಚಲಿ. ಅವರು ತಮ್ಮ ಪತಿಯರು, ಪಿತರು, ಪತಿಯ ಪಿತರು, ಪುತ್ರರು, ಪತಿಯ ಪುತ್ರರು, ಸಹೋದರರು, ಸಹೋದರರ ಪುತ್ರರು, ಸಹೋದರಿಯರ ಪುತ್ರರು, ತಮ್ಮಂತಹ ಸ್ತ್ರೀಯರು, ತಮ್ಮ ಅಧೀನದಲ್ಲಿರುವವರು (ದಾಸಿಯರು), ಪುರುಷರ ಪೈಕಿ ಲೈಂಗಿಕಾಭಿಲಾಷೆಯಿಲ್ಲದ ಪರಿಚಾರಕರು, ಸ್ತ್ರೀಯರ ಲೈಂಗಿಕ ರಹಸ್ಯಗಳ ಅರಿವಿಲ್ಲದ ಬಾಲಕರು–ಇವರಿಗೆ ಹೊರತು ತಮ್ಮ ಸೌಂದರ್ಯವನ್ನು ತೋರ್ಪಡಿಸಬಾರದು. ತಮ್ಮ ಮುಚ್ಚಿಟ್ಟ ಸೌಂದರ್ಯವನ್ನು ಬಹಿರಂಗಪಡಿಸಲಿಕ್ಕಾಗಿ ಅವರು ತಮ್ಮ ಕಾಲುಗಳನ್ನು ನೆಲಕ್ಕೆ ಅಪ್ಪಳಿಸಬಾರದು. ಓ ಸತ್ಯವಿಶ್ವಾಸಿಗಳೇ, ನೀವು ಯಶಸ್ಸನ್ನು ಗಳಿಸಲಿಕ್ಕೋಸ್ಕರ ಎಲ್ಲರೂ ಅಲ್ಲಾಹನ ಕಡೆಗೆ ತಿರುಗಿರಿ.*

*(ಪವಿತ್ರ ಖುರ್‌ಆನ್ 24:31, 32)*

ವಿವಾಹಿತ ಜೀವಿತವು ಇಸ್ಲಾಮಿನ ಸಾಮಾನ್ಯ ರೀತಿಯಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಸನ್ಯಾಸವನ್ನು ನಿಷಿದ್ಧಗೊಳಿಸಲಾಗಿದೆ. (57:28)*

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿರುವರು:

ವಿವಾಹವಾಗುವುದು ನಮ್ಮ ಧರ್ಮದ ಮಾರ್ಗವಾಗಿದೆ. ಅದರ ಕಡೆಯಿಂದ ಮುಖ ತಿರುಗಿಸುವವನು ನಮ್ಮೊಂದಿಗೆ ಸೇರಿದವನಲ್ಲ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಮದುವೆ ಆಗಲು ಅನುಕೂಲವಿಲ್ಲದವರು ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ಸಂಪನ್ನಗೊಳಿಸುವ ತನಕ ತಮ್ಮ ಚಾರಿತ್ರ್ಯವನ್ನು ಕಾಪಾಡಿಕೊಳ್ಳಲಿ. (24:34)*

ವ್ಯಭಿಚಾರವನ್ನು ನಿಷಿದ್ಧಗೊಳಿಸಿ ಅದಕ್ಕೆ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಅದರ ಸಮೀಪ ಹೋಗುವುದನ್ನು ಕೂಡ ನಿಷಿದ್ಧಗೊಳಿಸಲಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ನೀವು ವ್ಯಭಿಚಾರದ ಸಮೀಪಕ್ಕೆ ಕೂಡ ಹೋಗಬೇಡಿರಿ. ನಿಶ್ಚಯವಾಗಿಯೂ ಅದು ಅಶ್ಲೀಲಕರವೂ ದುಷ್ಟ ಮಾರ್ಗವೂ ಆಗಿದೆ. (17:33)*

*ವ್ಯಭಿಚಾರಿಣಿ ಮತ್ತು ವ್ಯಭಿಚಾರಿ ಅವರಿಬ್ಬರಲ್ಲಿ ಒಬ್ಬೊಬ್ಬರಿಗೆ ನೂರರಂತೆ ಛಡಿಯೇಟು ಕೊಡಿರಿ. ನೀವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದ ಬಗ್ಗೆ ವಿಶ್ವಾಸವುಳ್ಳವರಾಗಿದ್ದರೆ ಅಲ್ಲಾಹನ ನಿಯಮವನ್ನು ಜಾರಿಗೆ ತರುವ ವಿಚಾರದಲ್ಲಿ ಅವರೀರ್ವರಿಗೆ ಸಂಬಂಧಿಸಿದಂತೆ ನೀವು ಏನೂ ದಾಕ್ಷಿಣ್ಯ ತೋರಿಸಬಾರದು. (24:3)*

ನಾನು ಇಷ್ಟರವರೆಗೆ ವಿವರಿಸಿದುದು ನಾವು ಇಷ್ಟಪಡದ ಲೋಕದ ಕೆಲವು ದುರಾಚಾರಗಳ ಕುರಿತಾಗಿದೆ. ಇದರೊಂದಿಗೆ ನಾವು ಎಂತಹ ಲೋಕವನ್ನು ಬಯಸುತ್ತೇವೆ ಎಂದು ಸಹ ವಿವರಿಸುವುದು ಸಮರ್ಪಕವಾಗಿದೆ. ಅಂತಹ ಲೋಕವನ್ನು ಸ್ಥಾಪಿಸುವುದು ದೇವನ ಮೂಲಕ ಎಂದು ಹೇಳಲು ನಾನು ಧೈರ್ಯ ಹೊಂದಿದ್ದೇನೆ. ಆದರೆ ಈಗ ದಯಾಮಯನಾದ ಸೃಷ್ಟಿಕರ್ತನ ಬಗ್ಗೆ ವಿಶ್ವಾಸವನ್ನು ಹೊಂದಿರುವುದಾಗಿ ವಾದಿಸುವ ಜನರು ಪರಸ್ಪರ ಜಗಳ ಮಾಡುತ್ತಿದ್ದು ವಾಸ್ತವಿಕವಾಗಿ ದೇವನಿಂದ ದೂರಸರಿದಿದ್ದಾರೆ. ಆವಶ್ಯಕವಾಗಿರುವುದೇನೆಂದರೆ, ನಾವು ಅವನನ್ನು ಪ್ರತಿಕ್ಷಣದಲ್ಲಿಯೂ ಅವಲಂಬಿತರಾಗಿದ್ದೇವೆಂಬ ಪ್ರಜ್ಞೆ ಇರಬೇಕು ಮತ್ತು ನಾವೆಲ್ಲರೂ ಅವನ ಸೃಷ್ಟಿ ಎಂದೂ ಅವನ ಸೇವಕರೆಂದೂ ಆ ಕಾರಣದಿಂದ ನಾವೆಲ್ಲರೂ ಸಹೋದರರೆಂದೂ ವಿನೀತರಾಗಿ, ಯಾವುದೇ ಅಹಂಭಾವದ ಸಂಶಯ ಕೂಡ ಇಲ್ಲದ ಹಾಗೆ ದೃಢವಾಗಿ ನಂಬಬೇಕು.

ನಮ್ಮ ಪ್ರಥಮ ಮತ್ತು ಅತ್ಯಂತ ಮುಖ್ಯ ಕಾಳಜಿ ನಮ್ಮ ಸೃಷ್ಟಿಕರ್ತನೊಂದಿಗೆ ಸಂಬಂಧವನ್ನು ಸ್ಥಾಪಿಸುವುದಾಗಿರಬೇಕು. ಅವನ ಎಲ್ಲಾ ಗುಣ ವಿಶೇಷಗಳು ಶಾಶ್ವತವೂ ಸದಾ ಕಾಲ ಕಾರ್ಯನಿರತವೂ ಆಗಿವೆ. ಅವನೇ ಸೃಷ್ಟಿಕರ್ತ. ಅವನು ಸೃಷ್ಟಿಸುತ್ತಾ ಹೋಗುತ್ತಾನೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಅವನು ನಿರ್ಜೀವಿಗಳಿಂದ ಜೀವಿಗಳನ್ನು ಹೊರಡಿಸುತ್ತಾನೆ. ಜೀವಿಗಳಿಂದ ನಿರ್ಜೀವಿಗಳನ್ನೂ ಹೊರಡಿಸುತ್ತಾನೆ. ಅವನು ಭೂಮಿಯನ್ನು ಅದರ ಮರಣದ ಬಳಿಕ ಜೀವಂತಗೊಳಿಸುತ್ತಾನೆ. ಅದೇ ಪ್ರಕಾರ ನಿಮ್ಮನ್ನು ಸಹ ಹೊರತರಲಾಗುವುದು.*

*ನಿಮ್ಮನ್ನು ಅವನು ಮಣ್ಣಿನಿಂದ ಸೃಷ್ಟಿಸಿದನು. ಹಾಗೆ ನೀವು ಭೂಮಿಯಲ್ಲಿ ವ್ಯಾಪಿಸುವ ಮನುಷ್ಯರಾಗಿ ಬಿಟ್ಟಿದ್ದೀರಿ. ಇದು ಸಹ ಅವನ ದೃಷ್ಟಾಂತಗಳಲ್ಲಿ ಸೇರುತ್ತದೆ.*

*ನೀವು ಮನಶ್ಶಾಂತಿ ಪಡೆಯಲಿಕ್ಕೋಸ್ಕರ ನಿಮ್ಮ ವರ್ಗದಿಂದಲೇ ಅವನು ನಿಮಗಾಗಿ ಬಾಳ ಸಂಗಾತಿಗಳನ್ನು ಸೃಷ್ಟಿಸಿದ್ದಾನೆ. ಇದು ಅವನ ದೃಷ್ಟಾಂತಗಳಲ್ಲೊಂದು. ನಿಮ್ಮ ಮಧ್ಯೆ ಅವನು ಪ್ರೀತಿಯನ್ನೂ ಕರುಣೆಯನ್ನೂ ಉಂಟುಮಾಡಿದನು. ಚಿಂತನಶೀಲರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.*

*ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಹಾಗೂ ನಿಮ್ಮ ಭಾಷೆ ಮತ್ತು ವರ್ಣಗಳ ವೈವಿಧ್ಯ – ಇದು ಸಹ ಅವನ ದೃಷ್ಟಾಂತಗಳಲ್ಲಿ ಸೇರಿದೆ. ಜ್ಞಾನಿಗಳಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.*

*ರಾತ್ರಿಯಲ್ಲಿ ಮತ್ತು ಹಗಲಿನಲ್ಲಿ ನಿಮ್ಮ ನಿದ್ರೆ ಮತ್ತು ಅವನ ಅನುಗ್ರಹದಿಂದ ನೀವು ಹುಡುಕುವುದು – ಇದು ಸಹ ಅವನ ದೃಷ್ಟಾಂತಗಳಲ್ಲೊಂದು. (ಗಮನ ಕೊಟ್ಟು ಆಲಿಸುವವರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.)*

*ಅವನ ಇನ್ನೊಂದು ದೃಷ್ಟಾಂತ – ನಿಮಗೆ ಭಯ ಮತ್ತು ಭರವಸೆ ಹುಟ್ಟಿಸುವಂತೆ ಅವನು ಮಿಂಚನ್ನು ತೋರಿಸುತ್ತಾನೆ. ಅವನು ಆಕಾಶದಿಂದ ಮಳೆಯನ್ನು ಸುರಿಸಿ, ಆ ಮೂಲಕ ಭೂಮಿಯನ್ನು ಅದರ ಮರಣದ ಬಳಿಕ ಜೀವಂತಗೊಳಿಸುತ್ತಾನೆ. ಮನವರಿಕೆ ಮಾಡುವ ಜನರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.*

*ಅವನ ಮತ್ತೊಂದು ದೃಷ್ಟಾಂತ – ಆಕಾಶವೂ ಭೂಮಿಯೂ ಅವನ ಆಜ್ಞಾನುಸಾರ ನೆಲೆಗೊಂಡಿರುವುದಾಗಿದೆ. ಆಮೇಲೆ ಭೂಮಿಯಿಂದ ನಿಮಗೊಂದು ಕರೆ ನೀಡಿದರೆ ಕೂಡಲೇ ನೀವು ಹೊರಗೆ ಬರುವಿರಿ.*

*ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನಿಗೆ ಸೇರಿವೆ. ಸಕಲವೂ ಅವನಿಗೆ ವಿಧೇಯವಾಗಿವೆ.*

*ಸೃಷ್ಟಿಯನ್ನು ಆರಂಭಿಸುವವನು ಅವನೇ. ಅನಂತರ ಅವನು ಅದನ್ನು ಪುನರಾವರ್ತನೆ ಮಾಡುತ್ತಾನೆ. ಅದು ಅವನಿಗೆ ಸುಲಭವಾಗಿದೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಅವನಿಗೆ ಅತ್ಯುನ್ನತ ಸ್ಥಾನವಿದೆ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. (30:20-28)*

*ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನು ಅವರಂಥ ಸೃಷ್ಟಿಗಳನ್ನು ಸೃಷ್ಟಿಸಲು ಸಮರ್ಥನಲ್ಲವೇ? ಹೌದು, ಅವನು ಸರ್ವಜ್ಞನಾದ ಸೃಷ್ಟಿಕರ್ತನಾಗಿದ್ದಾನೆ.*

*ನಿಸ್ಸಂದೇಹವಾಗಿಯೂ ಅವನು ಒಂದು ವಸ್ತುವನ್ನು ಬಯಸಿದರೆ "ಆಗು" ಎಂದು ಮಾತ್ರ ಅವನು ಆದೇಶಿಸಿದಾಗ ಅದು ಆಗುತ್ತದೆ. (36:82-83)*

ದೇವನ ಪ್ರತಿಯೊಂದು ಸೃಷ್ಟಿಗೆ ಅವನೊಂದಿಗೆ ಸಂಪರ್ಕ ಸ್ಥಾಪಿಸಲು, ಅದನ್ನು ಜಾರಿಯಲ್ಲಿರಿಸಲು ಮತ್ತು ಅದನ್ನು ಶಕ್ತವನ್ನಾಗಿ ಮಾಡಲು ಸಾಮರ್ಥ್ಯವಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ನಿಮ್ಮ ಪ್ರಭು ಹೇಳುತ್ತಾನೆ: ನನ್ನೊಡನೆ ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರ ನೀಡುವೆನು. (40:61)*

*(ಓ ಪ್ರವಾದಿ) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) – ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದುದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ. (2:187)*

*ಯಾರು ನಮ್ಮ ಪ್ರಭು ಅಲ್ಲಾಹನು ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬಂದು ಹೇಳುವರು: ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ.*

*ಇಹಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಮಿತ್ರ*

ರಾಗಿದ್ದೇವೆ. ನಿಮ್ಮ ಮನಸ್ಸು ಬಯಸುವುದೆಲ್ಲ ನಿಮಗೆ ಅಲ್ಲಿ ದೊರಕುವುದು. ನೀವು ಕೇಳುವುದೆಲ್ಲ ನಿಮಗೆ ಅಲ್ಲಿ ಲಭಿಸುವುದು.

*ಅದು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆದವನಿಂದ ಒಂದು ಸತ್ಕಾರವಾಗಿದೆ. (41:31-33)*

ಈ ದೇಶದಲ್ಲಿ ಸ್ವತಃ ವಿರೋಧಾಭಾಸವಾಗಿರುವ ಒಂದು ಪ್ರಕಟಣೆ ಮಾಡಲಾಗಿದೆ: ದೇವನು ಮೃತನಾಗಿರುವನೆಂದು ನಮ್ಮ ಕಾಲದ ಒಂದು ಚಾರಿತ್ರಿಕ ಘಟನೆ ಎಂಬಂತೆ ಸೂಚಿಸಲಾಗಿದೆ. ಆದರೆ ಸತ್ಯವು ಹೀಗೆ ಕಹಳೆ ಊದಿ ಹೇಳಲ್ಪಟ್ಟಿದೆ:

*ಅನಶ್ವರನಾದ, ಸದಾ ಜೀವಂತನಾಗಿರುವ ಅಲ್ಲಾಹನ ಮೇಲೆ ನೀನು ಭರವಸೆಯನ್ನಿಡು. ಅವನ ಸ್ತುತಿಕೀರ್ತನೆಯನ್ನೂ ಗುಣಗಾನವನ್ನೂ ಮಾಡು. ತನ್ನ ದಾಸರ ಪಾಪಗಳ ಬಗ್ಗೆ ಅವನು ಸಾಕಷ್ಟು ತಿಳಿದವನಾಗಿದ್ದಾನೆ. (ಪವಿತ್ರ ಖುರ್‌ಆನ್ 25:59)*

*ಭೂಮಿಯನ್ನು ನಿಮಗೋಸ್ಕರ ವಾಸಸ್ಥಳವನ್ನಾಗಿಯೂ ಆಕಾಶವನ್ನು (ನಿಮ್ಮ ಸುರಕ್ಷೆಗಾಗಿ) ಮೇಲ್ಛಪ್ಪರವನ್ನಾಗಿಯೂ ಮಾಡಿದವನು ಅಲ್ಲಾಹನೇ ಆಗಿದ್ದಾನೆ. ಅವನು ನಿಮ್ಮ ರೂಪವನ್ನು ಅತ್ಯಂತ ಸುಂದರಗೊಳಿಸಿದ್ದಾನೆ; ಶುದ್ಧವಾದ ಆಹಾರವನ್ನು ನಿಮಗೆ ದಯಪಾಲಿಸಿದ್ದಾನೆ. ಅವನೇ ನಿಮ್ಮ ಪ್ರಭುವಾದ ಅಲ್ಲಾಹನು. ಹಾಗೆ, ಸಕಲ ಲೋಕಗಳ ಪ್ರಭುವಾದ ಅಲ್ಲಾಹನು ಅನುಗ್ರಹಪೂರ್ಣನಾಗಿದ್ದಾನೆ.*

*ಅವನು ಸದಾ ಜೀವಂತನು. ಅವನ ಹೊರತು ಬೇರೆ ಆರಾಧ್ಯನಿಲ್ಲ. ಆದ್ದರಿಂದ ಪ್ರಾಮಾಣಿಕವಾದ ಧರ್ಮನಿಷ್ಠೆಯಿಂದ ಅವನನ್ನು ಪ್ರಾರ್ಥಿಸಿರಿ. ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೆ ಸರ್ವಸ್ತುತಿ ಸ್ತೋತ್ರಗಳು ಸಲ್ಲುತ್ತವೆ. (ಪವಿತ್ರ ಖುರ್‌ಆನ್ 40:65, 66)*

ದೇವನು ಎಂದೂ ಮೃತನಾಗಲಾರನು. ಅವನು ಸದಾಕಾಲ ಜಾಗರೂಕನಾಗಿರುತ್ತಾನೆ.

*ಅಲ್ಲಾಹ್ – ಅವನ ಹೊರತು ಬೇರೆ ಆರಾಧ್ಯನಿಲ್ಲ. (ಅವನು) ಸದಾ ಜೀವಂತನೂ ಸ್ವತಃ ನೆಲೆ ನಿಂತಿರುವವನೂ (ಎಲ್ಲವನ್ನು) ನೆಲೆನಿಲ್ಲಿಸುವವನೂ ಆಗಿದ್ದಾನೆ. ತೂಕಡಿಕೆಯಾಗಲಿ ನಿದ್ರೆಯಾಗಲಿ ಅವನಿಗಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ಅವನ ಅನುಮತಿ ಇಲ್ಲದೆ ಅವನ ಸನ್ನಿಧಿಯಲ್ಲಿ ಶಿಫಾರಸು ಮಾಡುವವರು ಯಾರಿದ್ದಾರೆ? ಅವರ ಮುಂದೆ ಮತ್ತು ಹಿಂದೆ ಇರುವ ಎಲ್ಲವನ್ನು ಅವನು ಬಲ್ಲನು. ಅವನು ಇಚ್ಛಿಸುವುದರ ಹೊರತು, ಅವನ ಜ್ಞಾನದಿಂದ ಏನನ್ನೂ ಅವರು ಗಳಿಸುವುದಿಲ್ಲ. ಅವನ ಸಿಂಹಾಸನ ಆಕಾಶಗಳಲ್ಲೂ ಭೂಮಿಯಲ್ಲೂ ವ್ಯಾಪಿಸಿಕೊಂಡಿದೆ. ಅವುಗಳ ಸಂರಕ್ಷಣೆ ಅವನನ್ನು ಆಯಾಸಗೊಳಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾಮಹಿಮನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 2:256)*

ದೇವನ ಅತ್ಯಂತ ಸುಂದರ ಗುಣವಿಶೇಷಗಳನ್ನು ಹೀಗೆ ವಿವರಿಸಲಾಗಿದೆ:

*ಅವನೇ ಅಲ್ಲಾಹನು. ಅವನ ಹೊರತು ಬೇರೆ ಆರಾಧ್ಯನಿಲ್ಲ. ಪರೋಕ್ಷವಾದುದನ್ನು ಪ್ರತ್ಯಕ್ಷವಾದುದನ್ನೂ ಅವನು ತಿಳಿಯುತ್ತಾನೆ. ಅವನು ದಯಾವಂತನೂ ಕಾರುಣ್ಯನಿಧಿಯೂ ಆಗಿದ್ದಾನೆ.*

*ಅವನೇ ಅಲ್ಲಾಹನು. ಅವನ ಹೊರತು ಬೇರೆ ಆರಾಧ್ಯನಿಲ್ಲ. (ಅವನು) ಸಾರ್ವಭೌಮನೂ ಪರಮ ಪರಿಶುದ್ಧನೂ ಶಾಂತಿಯ ಸಾಮ್ರಾಟನೂ ಅಭಯದಾತನೂ ಸಂರಕ್ಷಕನೂ ಪ್ರತಾಪ ಶಾಲಿಯೂ ಒಡೆದುದನ್ನು ಜೋಡಿಸುವವನೂ ಮಹೋನ್ನತನೂ ಆಗಿದ್ದಾನೆ. ಅವರು ಕಲ್ಪಿಸುವ ಸಹಭಾಗಿತ್ವದಿಂದೆಲ್ಲ ಅವನು ಪರಿಶುದ್ಧನು.*

*ಅವನೇ ಅಲ್ಲಾಹನು. (ಅವನು) ಸೃಷ್ಟಿಕರ್ತನೂ ನಿರ್ಮಾಪಕನೂ ರೂಪಕೊಡುವವನೂ ಆಗಿದ್ದಾನೆ. ಬಲು ಸುಂದರವಾದ ನಾಮಗಳು ಅವನಿಗಿವೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನ ಸ್ತುತಿ ಕೀರ್ತನೆ ಮಾಡುತ್ತವೆ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 59:23-25)*

ದೇವನು ವಿಶ್ವದ ಬೆಳಕಾಗಿದ್ದಾನೆ. ಅದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. ಅವನ ಪ್ರಕಾಶದ ಉಪಮೆ – ಒಂದು (ಹೊಳಪುಳ್ಳ) ಗೋಡೆ ಗೂಡು ಇದ್ದು ಅದರೊಳಗೆ ಒಂದು ದೀಪವಿಟ್ಟ ಹಾಗೆ. ಆ ದೀಪ ಒಂದು ಗಾಜಿನ ಬುರುಡೆಯೊಳಗಿದೆ; ಆ ಗಾಜಿನ ಬುರುಡೆ ಪ್ರಕಾಶಮಾನವಾದ ನಕ್ಷತ್ರದಂತೆ ಹೊಳೆಯುತ್ತದೆ. ಅದು (ಆ ದೀಪ) ಪೌರ್ವಾತ್ಯವಾಗಲಿ ಪಾಶ್ಚಿಮಾತ್ಯವಾಗಲಿ ಅಲ್ಲದ ಅನುಗ್ರಹೀತವಾದೊಂದು ಓಲಿವ್ ವೃಕ್ಷದ ತೈಲದಿಂದ ಉರಿಸಲ್ಪಡುತ್ತದೆ. ಅಗ್ನಿ ಆ ತೈಲವನ್ನು ಸ್ಪರ್ಶಿಸಿಲ್ಲವಾದರೂ ಅದು ತನ್ನಿಂದ ತಾನೇ ಪ್ರಕಾಶಿಸುವುದು. ಪ್ರಕಾಶದ ಮೇಲೆ ಪ್ರಕಾಶ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನ ಪ್ರಕಾಶದ ಕಡೆಗೆ ಕೊಂಡೊಯ್ಯುತ್ತಾನೆ. ಜನರಿಗೋಸ್ಕರ ಅಲ್ಲಾಹನು ಉಪಮೆಗಳನ್ನು ನೀಡುತ್ತಾನೆ. ಅಲ್ಲಾಹನು ಎಲ್ಲ ವಿಚಾರಗಳನ್ನು ಬಲ್ಲವನಾಗಿದ್ದಾನೆ. (24:36)*

ದೇವನ ಹೊರತು ಪ್ರಕಾಶವಿಲ್ಲ. ಅದರ ಬಗ್ಗೆ ಹೀಗೆ ಹೇಳಲಾಗಿದೆ:

*ಅವಿಶ್ವಾಸಿಗಳಾದರೋ, ಅವರ ಕೃತ್ಯಗಳು ಮರುಭೂಮಿಯಲ್ಲಿರುವ ಮರೀಚಿಕೆಯಂತೆ. ಬಾಯಾರಿಕೆಯಾದವನು ಅದನ್ನು ನೀರೆಂದು ಗ್ರಹಿಸುತ್ತಾನೆ. ಅವನು ಹತ್ತಿರ ಬಂದಾಗ ಅದು ಏನೂ ಅಲ್ಲವೆಂದು ಅವನಿಗೆ ಮನವರಿಕೆಯಾಗುತ್ತದೆ. ಅಲ್ಲಿ ಅವನು ಪೂರ್ಣವಾಗಿ ಲೆಕ್ಕ ತೆಗೆಯುವ ಅಲ್ಲಾಹನನ್ನು ಕಾಣುವನು. ಅಲ್ಲಾಹನು ಶೀಘ್ರವಾಗಿ ಲೆಕ್ಕ ತೆಗೆಯುವವನಾಗಿದ್ದಾನೆ.*

*ಅಥವಾ (ಅವರ ಕೃತ್ಯಗಳು) ಆಳವಾದ ಸಮುದ್ರದ ಅಂಧಕಾರದಂತೆ. ಅದನ್ನು (ಸಮುದ್ರವನ್ನು) ಅಲೆಗಳು ಮುಚ್ಚುತ್ತವೆ. ಅಲೆಗಳ ಮೇಲೆ ಅಲೆಗಳು ಏಳುತ್ತವೆ. ಅದರ ಮೇಲೆ ಮೇಘಗಳು. ಒಂದರ ಮೇಲೆ ಮತ್ತೊಂದರಂತೆ ಅಂಧಕಾರಗಳೇ. ತನ್ನ ಕೈಯನ್ನು ಹೊರಚಾಚಿದರೆ ಅವನು ಅದನ್ನೂ ಕಾಣಲಾರ. ಯಾರಿಗೆ ಅಲ್ಲಾಹನು ಪ್ರಕಾಶವನ್ನು ನೀಡುವುದಿಲ್ಲವೋ ಅವನಿಗೆ ಯಾವ ಪ್ರಕಾಶವೂ ಲಭಿಸಲಾರದು. (ಪವಿತ್ರ ಖುರ್‌ಆನ್ 24:40, 41)*

ದೇವನು ಜನರಿಗೆ ಮಾರ್ಗದರ್ಶನ ನೀಡಲು ತನ್ನ ಸಂದೇಶ ವಾಣಿಯನ್ನು ಅವತೀರ್ಣಗೊಳಿಸುತ್ತಾನೆ. ಮನುಷ್ಯರು ದೇವನ ಅಸ್ತಿತ್ವದ ಬಗ್ಗೆ ತರ್ಕಿಸುತ್ತಾ ಇದ್ದರೂ ದೇವನು ಹಾಗೆ ಮಾಡುತ್ತಾನೆ. ಅವನು ಪರಿಶುದ್ಧನು. ಅವನೊಂದಿಗೆ ಅವರು ಕಲ್ಪಿಸುವ ಸಹಭಾಗಿಗಳಿಗಿಂತ ಅವನು ಉನ್ನತನೂ ಪರಿಶುದ್ಧನೂ ಆಗಿದ್ದಾನೆ. ಅವನು ತನ್ನ ಆಜ್ಞೆ

ಪ್ರಕಾರ ದೇವದೂತರನ್ನು ಸ್ಥಿರಚಿತ್ತರಾಗಿರುವ ತನ್ನ ದಾಸರ ಪೈಕಿ ತಾನಿಚ್ಛಿಸುವವರಿಗೆ ಇಳಿಸಿಕೊಡುತ್ತಾನೆ. ಇದರ ಬಗ್ಗೆ ಹೀಗೆ ಹೇಳಲಾಗಿದೆ:

*ಯಾರು "ಅಲ್ಲಾಹನು ನಮ್ಮ ಪ್ರಭು" ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬಂದು (ಹೇಳುವರು:) "ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ.*

*"ಇಹಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಮಿತ್ರರಾಗಿದ್ದೇವೆ. ನಿಮ್ಮ ಮನಸ್ಸು ಬಯಸುವುದೆಲ್ಲ ನಿಮಗೆ ಅಲ್ಲಿ ದೊರಕುವುದು. ನೀವು ಕೇಳುವುದೆಲ್ಲ ನಿಮಗೆ ಅಲ್ಲಿ ಸಿಗುವುದು."*

*"ಅದು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆದವನಿಂದ ಒಂದು ಸತ್ಕಾರವಾಗಿದೆ." (ಪವಿತ್ರ ಖುರ್‌ಆನ್ 41 : 31-33)*

*ಅವರು ಸಹಭಾಗಿಗಳನ್ನು ಕಲ್ಪಿಸುವುದರಿಂದೆಲ್ಲ ಅವನು ಪರಮ ಪವಿತ್ರನೂ ಮಹೋನ್ನತನೂ ಆಗಿದ್ದಾನೆ.*

*ಅವನು ತನ್ನ ಭಕ್ತ ದಾಸರ ಪೈಕಿ ತಾನು ಇಚ್ಛಿಸುವವರ ಮೇಲೆ ತನ್ನ ಆಜ್ಞೆಯಿಂದ ಕೂಡಿದ ಸಂದೇಶದೊಂದಿಗೆ ದೇವದೂತರನ್ನು (ಮಲಾಯಿಕ) ಇಳಿಸುತ್ತಾನೆ. "ನನ್ನ ಹೊರತು ಬೇರೆ ಆರಾಧ್ಯನಿಲ್ಲ. ಆದ್ದರಿಂದ ಭಯಭಕ್ತಿ ಇರಿಸಿಕೊಳ್ಳಿರಿ ಎಂದು ಜನರಿಗೆ ಎಚ್ಚರಿಕೆ ನೀಡಿರಿ" (ಎಂದು ಹೇಳುತ್ತಾ).*

*ಅವನು ಆಕಾಶಗಳನ್ನೂ ಭೂಮಿಯನ್ನೂ ಯುಕ್ತವಾಗಿ ಸೃಷ್ಟಿಸಿದ್ದಾನೆ. ಅವರು ಸಹಭಾಗಿಗಳನ್ನು ಕಲ್ಪಿಸುವುದರಿಂದೆಲ್ಲ ಅವನು ಮಹೋನ್ನತನು.*

*ಅವನು ಮನುಷ್ಯನನ್ನು ಒಂದು ವೀರ್ಯಾಣುವಿನಿಂದ ಸೃಷ್ಟಿಸಿದನು. ಆದರೆ ಅದೋ ಅವನು ಪ್ರತ್ಯಕ್ಷವಾಗಿ ವಿವಾದಕ್ಕಿಳಿಯುತ್ತಾನೆ. (ಪವಿತ್ರ ಖುರ್‌ಆನ್ 16:2-5)*

*ನಾವು ಅವನನ್ನು (ಕೇವಲ) ಒಂದು ವೀರ್ಯಾಣುವಿನಿಂದ ಸೃಷ್ಟಿಸಿರುವವೆಂದು ಮನುಷ್ಯನಿಗೆ ಗೊತ್ತಿಲ್ಲವೇ? ಈಗ ಅದೋ ಅವನು ದೊಡ್ಡ ಜಗಳಗಂಟಿಯಾಗಿ ಬಿಟ್ಟಿದ್ದಾನೆ.*

*ನಮ್ಮ ಬಗ್ಗೆ ಅವನು ಹೋಲಿಕೆಗಳನ್ನು ಕೊಡುತ್ತಾನೆ. ಹಾಗೂ ತಾನು ಸೃಷ್ಟಿಸಲ್ಪಟ್ಟ ಬಗ್ಗೆ ಅವರು ಮರೆತುಬಿಡುತ್ತಾನೆ. (ಪವಿತ್ರ ಖುರ್‌ಆನ್ 36-78, 79)*

ಮನುಷ್ಯನನ್ನು ಅವನ ಕೃತಘ್ನತೆಗೋಸ್ಕರ ನಿಂದಿಸಲಾಗಿದೆ:

*(ಅವಿಶ್ವಾಸಿಯಾದ) ಮನುಷ್ಯನಿಗೆ ನಾಶ. ಅವನು ಎಂಥಾ ಕೃತಘ್ನನು.*

*ಅವನನ್ನು ಯಾವ ವಸ್ತುವಿನಿಂದ ಅವನು (ಅಲ್ಲಾಹನು) ಸೃಷ್ಟಿಸಿದ್ದಾನೆ? (ಎಂಬುದನ್ನು ಯೋಚಿಸಲಿ)–*

*ಒಂದು ವೀರ್ಯಾಣುವಿನಿಂದ! ಮತ್ತೆ ಅವನು (ಅಲ್ಲಾಹನು) ಒಂದು ಪರಿಮಾಣವನ್ನು ಅವನಿಗೆ ನಿರ್ಣಯಿಸುತ್ತಾನೆ.*

*ಅನಂತರ ಅವನು ಅವನಿಗೆ ಮಾರ್ಗವನ್ನು ಸುಗಮಗೊಳಿಸುತ್ತಾನೆ.*

*ಆ ಬಳಿಕ ಅವನು ಮೃತಪಡಿಸುತ್ತಾನೆ ಮತ್ತು ಸಮಾಧಿಗೊಳಿಸುತ್ತಾನೆ.*

*ಅನಂತರ, ಅವನು (ಅಲ್ಲಾಹನು) ಇಚ್ಛಿಸುವಾಗ ಅವನನ್ನು ಪುನರುತ್ಥಾನಗೊಳಿಸುವನು.*

*ಇಲ್ಲ, ಅಲ್ಲಾಹನು ಅವನಿಗೆ ಆಜ್ಞಾಪಿಸಿದ್ದನ್ನು ಅವನು ಪಾಲಿಸಲಿಲ್ಲ. (ಪವಿತ್ರ ಖುರ್‌ಆನ್ 80:18-24)*

ನಾನು ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನಗಳ ಕುರಿತು ಸಂಕ್ಷಿಪ್ತವಾಗಿ ಕೂಡ ವ್ಯಾಖ್ಯಾನ ನೀಡಲು ಸಮಯಾವಕಾಶವಿಲ್ಲ. ಈ ಉಲ್ಲೇಖಗಳು ದೇವನ ಗುಣವಿಶೇಷಗಳನ್ನು ವಿವರಿಸುತ್ತಿವೆಯಾದರೂ ಅವುಗಳಲ್ಲಿ ಅನೇಕ ಭವಿಷ್ಯವಾಣಿಗಳು ಅಡಕವಾಗಿವೆ. ಅವುಗಳು ಈಡೇರುತ್ತಾ ಇರುತ್ತವೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ನಿನ್ನ ಪ್ರಭುವಿನ ವಚನ ಸತ್ಯ ಮತ್ತು ನ್ಯಾಯದಿಂದ ಪರಿಪೂರ್ಣಗೊಳಿಸಲ್ಪಟ್ಟಿದೆ. ಅವನ ಮಾತನ್ನು ಬದಲಾಯಿಸುವವರು ಯಾರೂ ಇಲ್ಲ. ಅವನು ಎಲ್ಲವನ್ನು ಕೇಳುವವನೂ ಎಲ್ಲವನ್ನು ತಿಳಿಯುವವನೂ ಆಗಿದ್ದಾನೆ. (6:116)*

ಎಲ್ಲಾ ಮಾನವರು ಏಕದೇವನಿಂದ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ಇದು ಅವರ ಸಮಾನ ಮಾನವೀಯತೆಯ ಅಸ್ತಿಭಾರವಾಗಿದೆ. "ಪ್ರತಿಯೊಬ್ಬ ಮನುಷ್ಯ ನನ್ನ ದೇವನ ಸೃಷ್ಟಿ" ಎಂಬ ಜೀವಂತ ಪ್ರಜ್ಞೆಯಿಂದ ಮಾತ್ರ ಲೋಕದ ವಿವಿಧ ಜನಾಂಗಗಳ ಮಧ್ಯೆ ಸಾಮರಸ್ಯವನ್ನು ಸ್ಥಾಪಿಸಲು ಸಾಧ್ಯವಾಗುವುದು. ಅದು ನಮ್ಮನ್ನು ಏಕಲೋಕದ ಕಡೆಗೆ ಒಯ್ಯುವುದು. ಮನುಷ್ಯನು ದೇವನ ಮೂಲಕ ಇತರ ಮನುಷ್ಯರೊಂದಿಗೆ ಸ್ಥಾಪಿಸುವ ಸಂಬಂಧವು ಮನುಷ್ಯರನ್ನು ಒಗ್ಗೂಡಿಸಲು ಮತ್ತು ವಿವಾದಗಳನ್ನು ಪರಿಹರಿಸಲು ಇರುವ ಏಕಮಾತ್ರ ಖಾತರಿಯಾಗಿದೆ. ಇಂತಹ ಸಂಬಂಧ ಸ್ಥಾಪನೆಯು ಶಾಶ್ವತವಾಗಿ ಬಾಕಿಯಾಗಿ ಉಳಿಯುವುದು ಮತ್ತು ಎಲ್ಲಾ ರೀತಿಯ ಬಿಗುವು ಮತ್ತು ವಿಷಮ ಪರಿಸ್ಥಿತಿಗಳನ್ನು ದಾಟಿಕೊಂಡು ಮುಂದೆ ಸಾಗುವುದು. ರಕ್ತಸಂಬಂಧಿಕರ, ಆಪ್ತಮಿತ್ರರ ಮಧ್ಯೆ ಇರುವ ಸಂಬಂಧವು ಎಷ್ಟು ನಿಕಟವಾಗಿದ್ದರೂ ಅದು ಮುರಿದು ಹೋಗಲು ಸಾಧ್ಯವಿದೆ. ಆದರೆ ದೇವನ ಮೂಲಕ ಸ್ಥಾಪಿತವಾದ ಸಂಬಂಧ ಸ್ಥಾಯೀಯಾಗಿ ಮುಂದುವರಿಯುವುದು.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ನೀವೆಲ್ಲರೂ ಒಟ್ಟು ಸೇರಿಕೊಂಡು ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ, ಭಿನ್ನಭಿನ್ನರಾಗದಿರಿ. ನೀವು ಪರಸ್ಪರ ಶತ್ರುಗಳಾಗಿದ್ದಾಗ ಅಲ್ಲಾಹನು ನಿಮಗೆ ನೀಡಿದ ಅನುಗ್ರಹಗಳನ್ನು ಸ್ಮರಿಸಿರಿ. ಅವನು ನಿಮ್ಮ ಹೃದಯಗಳನ್ನು ಅನ್ಯೋನ್ಯ ಒಂದುಗೂಡಿಸಿದ ಫಲವಾಗಿ ಅವನ ಅನುಗ್ರಹದಿಂದ ನೀವು ಪರಸ್ಪರ ಸಹೋದರರಾದಿರಿ ನೀವು ಒಂದು ಅಗ್ನಿಕುಂಡದ ಅಂಚಿನಲ್ಲಿದ್ದಾಗ ಅವನು ನಿಮ್ಮನ್ನು ಅದರಿಂದ ರಕ್ಷಿಸಿದನು. ಹೀಗೆ ಅಲ್ಲಾಹನು ತನ್ನ ಆಜ್ಞೆಗಳನ್ನು ವಿವರಿಸಿಕೊಡುತ್ತಾನೆ – ನೀವು ಸತ್ಪಥ ಪಡೆಯಲಿಕ್ಕಾಗಿ.*

*ಒಳಿತಿನ ಕಡೆಗೆ ಕರೆಯುವ, ಒಳಿತನ್ನು ಉಪದೇಶಿಸಿ ಕೆಡುಕನ್ನು ವಿರೋಧಿಸುವ ಒಂದು ಪಂಗಡ ನಿಮ್ಮಲ್ಲಿ ಇರಬೇಕಾಗಿದೆ. ಅವರೇ ವಿಜಯಶಾಲಿಗಳಾಗುವರು. (3:104, 105)*

ಮನುಷ್ಯರು ಒಂದು ದಾರದಲ್ಲಿ ಪೋಣಿಸಲ್ಪಟ್ಟ ಮುತ್ತುಗಳ ಹಾಗೆ ಇರಬೇಕೆಂದು ಇದು ಆವಶ್ಯಪಡುತ್ತದೆ. ಹೀಗೆ ಮಾಡದಿದ್ದರೆ ಜನರು ಛಿನ್ನ ಭಿನ್ನರಾಗುವರು. ಪರಸ್ಪರ ಜಗಳಮಾಡುವ ಗುಂಪುಗಳಾಗಿ ಜನರು ಅಗ್ನಿಕುಂಡಕ್ಕೆ ಬಿದ್ದುಹೋಗುವ ಅಪಾಯಕ್ಕೆ ಈಡಾಗುವರು.

ಇದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಈ ಮುನ್ನೆಚ್ಚರಿಕೆಯನ್ನು ಚಿತ್ರೀಕರಿಸಲು ಸಾಧ್ಯವೇ? ಅಲ್ಲಾಹನ ಪಾಶವನ್ನು ಬಿಗಿಯಾಗಿ ಒಗ್ಗೂಡಿ ಹಿಡಿದು ಕೊಳ್ಳುವುದರಿಂದ ಲಭಿಸುವ ಲಾಭಗಳು ವಿಶಾಲವೂ ಸೀಮಾತೀತವೂ ಆಗಿದೆ.

ಮೌಲ್ಯಗಳನ್ನು ವಿಶ್ಲೇಷಿಸುವಾಗ ದೇವನೊಂದಿಗೆ ಹೊಂದುವ ಸಂಬಂಧವು ಅಗ್ರಸ್ಥಾನದಲ್ಲಿದೆ. ಇತರ ಮೌಲ್ಯಗಳು ಅದಕ್ಕೆ ಅಧೀನವಾಗಿವೆ. ಈ ಪರಮ ಮೌಲ್ಯಕ್ಕೆ ಅಧೀನವಾಗಿದ್ದರೆ ಮಾತ್ರ ಇತರ ಮೌಲ್ಯಗಳು ಪುರಸ್ಕರಿಸಲ್ಪಡುವುವು. ನಾನು ಸಾತ್ವಿಕತೆಯನ್ನು ಅಪ್ಪಿಕೊಳ್ಳುವುದೇಕೆಂದರೆ ದೇವನು ಸಾತ್ವಿಕತೆಯನ್ನು ಪ್ರೀತಿಸುತ್ತಾನೆ. ಅದು ಅವನ ಸಾಮೀಪ್ಯ ಗಳಿಸಲಿರುವ ಮಾರ್ಗವಾಗಿದೆ. ನಾನು ಕೆಡುಕನ್ನು ತ್ಯಜಿಸುವುದು ದೇವನು ಅದನ್ನು ಇಷ್ಟಪಡದ ಕಾರಣದಿಂದಾಗಿದೆ. ಕೆಡುಕು ನನ್ನನ್ನು ದೇವನಿಂದ ದೂರಸರಿಸುವುದು. ಪವಿತ್ರ ಖುರ್‌ಆನ್ ಈ ಮೂಲಭೂತ ಪ್ರೇರಣೆಯ ಬಗ್ಗೆ ಪದೇ ಪದೇ ಒತ್ತಿ ಹೇಳಿದೆ. ಉದಾಹರಣೆಗೆ, ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ನೋಡಿರಿ:

*ಯಾವೊಬ್ಬನು ತನ್ನ ಕರಾರನ್ನು ಪಾಲಿಸಿ ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳುತ್ತಾನೋ (ಆತನು ಸಾತ್ವಿಕನು). ದಿಟ ವಾಗಿಯೂ ಅಲ್ಲಾಹನು ಭಯಭಕ್ತಿಯುಳ್ಳವರನ್ನು ಪ್ರೀತಿಸುತ್ತಾನೆ. (3:77)*

*ಖಂಡಿತವಾಗಿಯೂ ಅಲ್ಲಾಹನು ಭಯಭಕ್ತಿ ತೋರಿಸುವವರನ್ನು ಪ್ರೀತಿಸುತ್ತಾನೆ. (9:4, 7)*

*ಅಲ್ಲಾಹನು ಸತ್ಕಾರ್ಯ ಮಾಡುವವರನ್ನು ಇಷ್ಟಪಡುತ್ತಾನೆ. (2:196, 3:135)*

*ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ. (3:149)*

*ಖಂಡಿತವಾಗಿಯೂ ಅಲ್ಲಾಹನು ಪಶ್ಚಾತ್ತಾಪಪಡುವವರನ್ನು ಪ್ರೀತಿಸುತ್ತಾನೆ. (ಬಾಹ್ಯವಾಗಿಯೂ ಆಂತರಿಕವಾಗಿಯೂ) ಪರಿಶುದ್ಧರಾಗಿರುವವರನ್ನು ಅವನು ಇಷ್ಟಪಡುತ್ತಾನೆ. (2:223)*

*ಸ್ಥಿರಚಿತ್ತರಾಗಿ ಉಳಿಯುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ. (3:147)*

*ಅಲ್ಲಾಹನು (ತನ್ನ ಮೇಲೆ) ಭರವಸೆಯನ್ನಿಡುವವರನ್ನು ಪ್ರೀತಿಸುತ್ತಾನೆ.*

*ಅಲ್ಲಾಹನು ನಿಮಗೆ ಸಹಾಯ ನೀಡುವ ಪಕ್ಷದಲ್ಲಿ ನಿಮ್ಮನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅವನು ನಿಮ್ಮನ್ನು ಕೈಬಿಟ್ಟರೆ ಅವನ ವಿರುದ್ಧ ನಿಮಗೆ ಸಹಾಯ ಮಾಡುವವನು ಬೇರೆ ಯಾರು? (ಆದುದರಿಂದ) ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆ ಭರವಸೆಯನ್ನಿಡಲಿ. (3:160, 161)*

*ಯಾರು ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ವಿಧೇಯರಾಗಿದ್ದುಕೊಂಡು, ಅಲ್ಲಾಹನ ಭಯವಿರಿಸಿ ಕೆಡುಕು ಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಾರೋ ಅವರೇ ಯಶಸ್ಸು ಗಳಿಸುವವರು. (24:53)*

*ಯಾರಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿ ಕೊಡುವನು.*

*ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು. ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ ಅವನಿಗೆ ಅಲ್ಲಾಹನು ಸಾಕು. ಅಲ್ಲಾಹನು ತಾನು ಉದ್ದೇಶಿಸಿದ ಕಾರ್ಯವನ್ನು ಸಾಧಿಸುವವ ನಾಗಿದ್ದಾನೆ. ಪ್ರತಿಯೊಂದಕ್ಕೂ ಅಲ್ಲಾಹನು ನಿರ್ದಿಷ್ಟ ಪರಿಮಾಣ ವನ್ನು ನಿಶ್ಚಯಿಸಿದ್ದಾನೆ. (65:3, 4)*

*ಯಾವನಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅಲ್ಲಾಹನು ಅವನ ಕಾರ್ಯದಲ್ಲಿ ಸೌಲಭ್ಯ ಉಂಟುಮಾಡಿ ಕೊಡುತ್ತಾನೆ. (65:5)*

*ಯಾವನಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನ ಕೃತ್ಯಗಳ ದುಷ್ಪರಿಣಾಮಗಳನ್ನು ಅವನು (ಅಲ್ಲಾಹನು) ನೀಗಿಸಿ ಅವನಿಗೆ ಸಲ್ಲತಕ್ಕ ಪ್ರತಿಫಲವನ್ನು ವೃದ್ಧಿಗೊಳಿಸುವವನು. (65:6)*

ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ:

*ಅಲ್ಲಾಹನಾದರೋ ಗಲಭೆಯನ್ನು ಇಷ್ಟಪಡುವುದಿಲ್ಲ. (2:206)*

*ಅಲ್ಲಾಹನು ಗಲಭೆಕೋರರನ್ನು ಇಷ್ಟಪಡುವುದಿಲ್ಲ (5:65)*

*ಖಂಡಿತವಾಗಿಯೂ ಅಲ್ಲಾಹನು ಗೊಂದಲಗಾರರನ್ನು ಪ್ರೀತಿಸುವುದಿಲ್ಲ. (28:78)*

*ಅಲ್ಲಾಹನು ಅಧರ್ಮಿಗಳನ್ನು ಇಷ್ಟಪಡುವುದಿಲ್ಲ. (3:141)*

*ಅಲ್ಲಾಹನು ದುಷ್ಕರ್ಮಿಗಳನ್ನು ಇಷ್ಟಪಡುವುದಿಲ್ಲ. (3:58, 42:41)*

*ಅಲ್ಲಾಹನು ಅತಿಕ್ರಮಣ ಮಾಡುವವರನ್ನು ಪ್ರೀತಿಸುವುದಿಲ್ಲ. (2:191)*

*ನಿಶ್ಚಯವಾಗಿಯೂ ಹದ್ದು ಮೀರುವವರನ್ನು ಅವನು ಇಷ್ಟಪಡುವುದಿಲ್ಲ. (7:56)*

*ಕಡು ಅವಿಶ್ವಾಸಿ ಹಾಗೂ ಮಹಾಪಾಪಿಯನ್ನು ಅಲ್ಲಾಹನು ಇಷ್ಟಪಡುವುದಿಲ್ಲ. (2:277)*

*ಖಂಡಿತವಾಗಿಯೂ ಅಹಂಕಾರ ಪಡುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ. (28:77)*

*ಖಂಡಿತವಾಗಿಯೂ ಅವನು ಅಹಂಭಾವಿಗಳನ್ನು ಮೆಚ್ಚುವುದಿಲ್ಲ. (16:24*

*ಅಲ್ಲಾಹನು ದುರಹಂಕಾರಿಯನ್ನೂ ಡಂಭಾಚಾರಿಯನ್ನು ಪ್ರೀತಿಸುವುದಿಲ್ಲ. (31:19; 57:24)*

*ನಿಶ್ಚಯವಾಗಿಯೂ ಅಲ್ಲಾಹನು ವಿಶ್ವಾಸಘಾತಕರನ್ನು ಇಷ್ಟಪಡುವುದಿಲ್ಲ. (8:159)*

ಮೇಲಿನ ವಚನಗಳಲ್ಲಿ ಪವಿತ್ರ ಖುರ್‌ಆನ್ ನಾವು ಪರಿಗಣಿಸ ಬೇಕಾದ ಮೌಲ್ಯಗಳನ್ನೂ ನಾವು ತ್ಯಜಿಸಬೇಕಾದುದನ್ನೂ ವಿವರಿಸಿಕೊಟ್ಟಿದೆ. ಮಾಡಬೇಕೆಂಬ ಆದೇಶಗಳನ್ನಾಗಲೀ ಮಾಡಬಾರದೆಂದು ನಿಷಿದ್ಧ ಗೊಳಿಸಿದವುಗಳನ್ನಾಗಲೀ ಅಡ್ಡಾದಿಡ್ಡಿಯಾಗಿ ಸೂಚಿಸಿಲ್ಲ. ಮಾಡ ಬೇಕೆಂದು ಹೇಳಿದ ಆಜ್ಞೆಗಳಲ್ಲಿ ಒಂದು ರೀತಿಯ ಆರೋಹಣ ಕ್ರಿಯೆ ಇದೆ. ಅದೇ ರೀತಿ ಮಾಡಬಾರದೆಂದು ಹೇಳಿದುದು ಸಹ ವ್ಯವಸ್ಥಿತ ವಾಗಿದೆ. ಅಲ್ಲಾಹನ ಕಡೆಗೆ ಸಾಗುವ ಮಾರ್ಗದಲ್ಲಿ ಉಂಟಾಗುವ

ತಪ್ಪುಗಳನ್ನು ತಿದ್ದಿಕೊಂಡು ಮುಂದುವರಿಯಲು ಇವು ಸಹಾಯಕವಾಗಿವೆ. ಒಂದು ಕ್ರಮಾಗತ ವ್ಯವಸ್ಥೆಯನ್ನು ಸೂಚಿಸಲಾಗಿದ್ದು ಅದು ತರಬೇತಿಗೆ ಸಹಾಯಕವಾಗಿದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ನ್ಯಾಯನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ.* **(16:91)**

ಅತಿರೇಕ ವರ್ತನೆಯು ಅತ್ಯಂತ ನಿಕೃಷ್ಟವಾಗಿದೆ. ವ್ಯಕ್ತಿಯ, ಸ್ವತ್ತಿನ, ಗೌರವದ, ಭದ್ರತೆಯ, ವ್ಯಕ್ತಿಯ ಮನಶ್ಶಾಂತಿಯ ಅಥವಾ ಸಮಾಜ ಮತ್ತು ಮಾನವೀಯತೆಯ ವಿರುದ್ಧ ಮಾಡುವ ಎಲ್ಲಾ ರೀತಿಯ ಅತಿಕ್ರಮ ವರ್ತನೆಗಳು ಇದರಲ್ಲಿ ಸೇರಿವೆ. ಯಾವುದೇ ನಾಗರಿಕ ಸಮಾಜದಲ್ಲಿ ಇವುಗಳಲ್ಲಿ ಬಹುತೇಕ ವರ್ತನೆಗಳು ಶಿಕ್ಷಾರ್ಹ ವಾಗಿವೆ. ಶಿಕ್ಷೆಯು ಅನೇಕ ಸಂದರ್ಭಗಳಲ್ಲಿ ಅಪರಾಧಗಳನ್ನು ತಡೆಗಟ್ಟಲು ಸಮರ್ಥವಾಗುತ್ತದೆ ಎಂದು ಇಂದಿನ ಕಾಲದಲ್ಲಿ ಸ್ಪಷ್ಟವಾಗುತ್ತದೆ. ನ್ಯಾಯ ಬದ್ಧ ಶಿಕ್ಷೆ ನೀಡಲು ಅಪರಾಧ ನಡೆದ ಬಗ್ಗೆ ಸಾಕ್ಷ್ಯಗಳು ಆವಶ್ಯಕವಾಗುತ್ತವೆ. ಅಪರಾಧವು ಅದರ ಬಗ್ಗೆ ನಿಯಮಗಳಲ್ಲಿ ವಿವರಿಸಿದ ರೂಪದಲ್ಲಿರಬೇಕಾಗಿದೆ. ತಪ್ಪಾಗಿ ಶಿಕ್ಷೆ ನೀಡದ ಹಾಗೆ ಮುಂಜಾಗ್ರತೆ ವಹಿಸಬೇಕಾದುದರಿಂದ ಅನೇಕ ವಿಧಿವಿಧಾನಗಳನ್ನು ನ್ಯಾಯಾಲಯಗಳು ಕೈಗೊಳ್ಳುತ್ತವೆ. ಇದು ನಿಯಮದ ತಪ್ಪು ಅಲ್ಲ. ಆದರೆ ನಿಯಮಗಳು ಅಪರಾಧಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಅಸಮರ್ಥವಾಗಿವೆ.

ಇನ್ನೊಂದು ವಿಷಯ ದುರ್ಗುಣಗಳಾಗಿವೆ. ಇತರರಿಗೆ ನೋವನ್ನೂ ಬೇಸರವನ್ನೂ ಉಂಟುಮಾಡಬಲ್ಲ ದುರ್ಗುಣಗಳಿವೆ. ಇವುಗಳಲ್ಲಿ ಬಹುತೇಕ ಸಾಮಾನ್ಯ ನಿಯಮಗಳ ಪರಿಮಿತಿಗೆ ಒಳಗಾಗುವುದಿಲ್ಲ.

ಪವಿತ್ರ ಖುರ್‌ಆನ್ ಎಲ್ಲಾ ರೀತಿಯ ದುರ್ಗುಣಗಳನ್ನು ನಿಷಿದ್ಧ ಗೊಳಿಸಿದೆ. ಕೆಟ್ಟ ಯೋಚನೆ ಮತ್ತು ಕೆಟ್ಟ ನಿರ್ಧಾರಗಳನ್ನು ತಡೆದು ದುರ್ಗುಣಗಳ ಮೂಲಸ್ಥಾನವನ್ನು ಶುದ್ಧೀಕರಿಸಲು ಪ್ರಯತ್ನಿಸಲಾಗಿದೆ.

ನಿಷಿದ್ಧ ಕಾರ್ಯಗಳನ್ನು ತಡೆಗಟ್ಟಲು ಇರುವ ಆಧಿಕಾರಿಕ ಕೇಂದ್ರವು ದೇವನಾಗಿದ್ದಾನೆ. ದೇವನು ಅತೃಪ್ತಿಯನ್ನು ಹೊಂದಬಾರದೆಂಬ ನಿರ್ಧಾರವು ಮನುಷ್ಯರ ನಡವಳಿಕೆಯನ್ನು ನಿಯಂತ್ರಿಸುತ್ತವೆ. ದೇವನನ್ನು ನಿಜವಾಗಿಯೂ ನಂಬುವವರ ಏಕಮಾತ್ರ ಜೀವಿತೋದ್ದೇಶ ದೇವನ ಸಂಪ್ರೀತಿಯನ್ನು ಗಳಿಸುವುದಾಗಿದೆ.

ಕೆಡುಕನ್ನು ತ್ಯಜಿಸುವುದು ಒಬ್ಬ ಸತ್ಯವಿಶ್ವಾಸಿ ಮಾಡಬೇಕಾದ ಏಕಮಾತ್ರ ಕೆಲಸವಲ್ಲ. ಅದು ಅವನು ಮಾಡಬೇಕಾದುದರ ಅರ್ಧಾಂಶದಷ್ಟು ಕೂಡ ಅಲ್ಲ. ಒಬ್ಬನು ಸಂಪೂರ್ಣವಾಗಿ ಕೆಡುಕಿನಿಂದ ತನ್ನನ್ನು ರಕ್ಷಿಸಿಕೊಂಡಿರುವನು ಎಂದು ಭಾವಿಸುವುದಾದರೂ ಅದು ಅವನನ್ನು ದೈವಿಕ ಅತೃಪ್ತಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಮಾತ್ರ ಸಹಾಯಕವಾಗಬಹುದು. ಆದರೆ ಅವನು ದೇವನ ಪ್ರೀತಿಯನ್ನು ಗಳಿಸುವುದರಿಂದ ತುಂಬಾ ದೂರ ಇರುವನು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವನು ತನ್ನ ಜೀವಿತೋದ್ದೇಶವನ್ನು ಗಳಿಸುವುದರಿಂದ ದೂರ ಇರುವನು. ಅವನು ಒಳಿತುಗಳನ್ನು ಮಾಡಲು ಕಠಿಣ ಪರಿಶ್ರಮ ಗಳನ್ನು ಮಾಡಬೇಕು. ಅವನು ಒಳಿತುಗಳಲ್ಲಿ ಪರಿಪೂರ್ಣನಾಗಲು ಯತ್ನಿಸಬೇಕು. ವಾಸ್ತವಿಕವಾಗಿ ಕೆಡುಕನ್ನು ತ್ಯಜಿಸುವುದು ಮತ್ತು ಒಳಿತನ್ನು ಮಾಡುವುದು ಜೊತೆಗೂಡಿ ಸಾಗುತ್ತವೆ. ಒಂದು ಇನ್ನೊಂದಕ್ಕೆ ಸಹಕಾರ ನೀಡುತ್ತದೆ. ಇವುಗಳಲ್ಲಿ ಹಂತ ಹಂತವಾಗಿ ಮೇಲೇರುವಿಕೆ ಇರುತ್ತವೆ.

ಒಳಿತುಗಳಿಗೆ ಮೂರು ಮಟ್ಟಗಳಿವೆ. ಪ್ರಾಥಮಿಕ ಮಟ್ಟ ಸಮವರ್ತನೆಯಾಗಿದೆ. ಒಳಿತಿಗೆ ಪ್ರತಿಯಾಗಿ ಒಳಿತನ್ನು ಮಾಡುವುದು. ಇದನ್ನು ತನ್ನ ನೈತಿಕ ಸಾಲದ ಸಂದಾಯ ಎಂದು ಹೇಳಬಹುದು. ನೈತಿಕ ಕರ್ತವ್ಯದ ನಿರ್ವಹಣೆ. ಒಳಿತಿಗೆ ಬದಲಾಗಿ ಒಳಿತನ್ನು ಮಾಡುವುದು ತಥಾಕಥಿತ ಸುವರ್ಣ ನಿಯಮ.

ಮುಂದಿನ ಉನ್ನತ ಮಟ್ಟ ದಯಾಪರತೆ – ಪ್ರತಿಫಲ ಬಯಸದೆ ಅಥವಾ ಪ್ರತೀಕ್ಷಿಸದೆ ಒಳಿತನ್ನು ಮಾಡುವುದಾಗಿದೆ.

ಅತ್ಯಂತ ಉನ್ನತಮಟ್ಟದ ಒಳಿತು ತಾಯಿ ತನ್ನ ಮಕ್ಕಳಿಗೆ ನೀಡುವಂತಹ ಪ್ರೀತಿಯ ರೂಪದಲ್ಲಿ ಮಾಡುವುದಾಗಿದೆ. ಇದು ಸಹಜವಾಗಿ ನಡೆಯುವ ಕ್ರಿಯೆಯಾಗಿದೆ. ಇಂತಹ ವರ್ತನೆ ಬಗ್ಗೆ ಅಲ್ಲಾಹನು ಹೇಳುತ್ತಾನೆ:

*ಅಲ್ಲಾಹನು ಅವರ ಬಗ್ಗೆ ಸಂತೃಪ್ತನು. ಅವರು ಸಹ ಅವನ ಬಗ್ಗೆ ಸಂತೃಪ್ತರು.* **(ಪವಿತ್ರ ಖುರ್‌ಆನ್ 98:9)**

ಎಲ್ಲಾ ಕೆಲಸಗಳನ್ನು ಮಾಡಲಿಕ್ಕೋಸ್ಕರ ಇರುವ ಪ್ರಬಲ ಪ್ರೇರಣೆ ದೇವನ ಪ್ರೀತಿಯನ್ನು ಗಳಿಸುವುದಾಗಿರಬೇಕು.

ಆಡಳಿತೆಯನ್ನು ನಿರ್ವಹಿಸಲು ಅರ್ಹರನ್ನು ಆಯ್ಕೆ ಮಾಡ ಬೇಕೆಂದು ಪವಿತ್ರ ಖುರ್‌ಆನ್ ಆದೇಶಿಸುತ್ತದೆ. ಆಡಳಿತೆಗೆ ಆಯ್ಕೆ ಗೊಂಡವರು ನ್ಯಾಯನಿಷ್ಠೆಯಿಂದಲೂ ಸರ್ವ ಸಮಭಾವದಿಂದಲೂ ವರ್ತಿಸಬೇಕೆಂದು ಸಹ ಅದು ಆದೇಶಿಸಿದೆ. ಹೀಗೆ ವರ್ತಿಸದಿದ್ದರೆ ಘೋರ ಪರಿಣಾಮಗಳುಂಟಾಗುವುದೆಂದು ಮುನ್ನೆಚ್ಚರಿಕೆ ಸಹ ನೀಡಲಾಗಿದೆ. ಜನರು ಅಧಿಕಾರಿಗಳನ್ನು ಗೌರವಿಸಿ ಅವರ ಆದೇಶಗಳನ್ನು ಪಾಲಿಸಬೇಕೆಂದು ಆಗ್ರಹಪಡಿಸಲಾಗಿದೆ. ಯಾವುದಾದರೂ ಭಿನ್ನಾಭಿಪ್ರಾಯ ತಲೆದೋರಿದರೆ ಪವಿತ್ರ ಖುರ್‌ಆನ್ ಮತ್ತು ಪವಿತ್ರ ಪೈಗಂಬರರು(ಸ) ನಿರ್ದೇಶಿಸಿದ ಮಾರ್ಗದರ್ಶನದ ಪ್ರಕಾರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಬೇಕೆಂದು ಸಹ ಆದೇಶಿಸಲಾಗಿದೆ. ಎಲ್ಲಾ ಅಧಿಕಾರವು ಜನರಿಂದ ನೀಡಲ್ಪಟ್ಟ ಒಂದು ವಿಶ್ವಸ್ತ ನಿಧಿ (ಅಮಾನತ್) ಎಂದು ಪರಿಗಣಿಸಿ ಆ ಮನೋಭಾವದಿಂದ ವರ್ತಿಸಬೇಕೆಂದು ಸಹ ಉಪದೇಶಿಸಲಾಗಿದೆ.

ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಖಂಡಿತವಾಗಿಯೂ ಅಮಾನತ್ತು(ಆಡಳಿತೆ)ಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮವಾದುದು. ನಿಸ್ಸಂದೇಹ ವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. (ಅವನ) ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ. ಯಾವುದಾದರೂ ವಿಚಾರದಲ್ಲಿ ನಿಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೆ, ನೀವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವುಳ್ಳವರಾದರೆ, (ಇತ್ಯರ್ಥಕ್ಕಾಗಿ) ಅದನ್ನು ಅಲ್ಲಾಹನಿಗೂ (ಅವನ) ಸಂದೇಶವಾಹಕನಿಗೂ ಒಪ್ಪಿಸಿರಿ. ಅದು ಅತ್ಯುತ್ತಮ ಮಾರ್ಗವಾಗಿದೆ. ಅದರ ಅಂತ್ಯ ಫಲ ಅತಿ ಹೆಚ್ಚು ಗುಣಕರವಾದುದು.* **(ಪವಿತ್ರ ಖುರ್‌ಆನ್ 4: 59, 60)**

*ಅವರು ಪರಸ್ಪರ ಸಮಾಲೋಚನೆ ಮಾಡಿ ತಮ್ಮ (ಆಡಳಿತೆಯ) ಕಾರ್ಯಗಳನ್ನು ತೀರ್ಮಾನಿಸುತ್ತಾರೆ.*
*(ಪವಿತ್ರ ಖುರ್‌ಆನ್ 42: 39)*

ಎಲ್ಲಾ ಆಡಳಿತೆಯ ಅಂಗಗಳನ್ನು ರೂಪಿಸಲು ಇಲ್ಲಿ ಮೂಲತತ್ವ ವನ್ನು ವಿವರಿಸಲಾಗಿದೆ. ಶಾಸನ ಸಭೆ, ಕಾರ್ಯ ನಿರ್ವಾಹಕ ಮತ್ತು ನ್ಯಾಯಾಲಯ ವ್ಯವಸ್ಥೆಗಳ ಬಗ್ಗೆ ಇಲ್ಲಿ ಸೂಚಿಸಲಾಗಿದೆ. ಶಾಸನ ಸಭೆಯು ಮುಖ್ಯ ಸಮಾಲೋಚಕ ಸಭೆಯೂ ಆಗಬೇಕು. ಇವುಗಳಿಗೆ ನೇಮಿಸಲ್ಪಡುವವರು ಅರ್ಹರಾಗಿರಬೇಕು ಎಂಬ ನಿಬಂಧನೆಯನ್ನು ಮಾತ್ರ ಸೂಚಿಸಲಾಗಿದೆ. ಇದು ಮತದಾರರ ಮೇಲೆ ಭಾರವಾದ ಜವಾಬ್ದಾರಿಯನ್ನು ಹೊರಿಸುತ್ತದೆ. ಮತದಾನವನ್ನು ಒಂದು ಪವಿತ್ರ ಕೆಲಸವಾಗಿ ಪರಿಗಣಿಸಲಾಗಿದೆ. ಈ ಕೆಲಸವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಲು ಮತದಾರರಿಗೆ ಉತ್ತಮ ತರಬೇತಿ ನೀಡಬೇಕಾಗಿದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಅಲ್ಲಾಹನೊಡನಿರುವ ಭಯಭಕ್ತಿ ಮತ್ತು (ಅವನ) ಸಂಪ್ರೀತಿಯ ಮೇಲೆ ತನ್ನ ಕಟ್ಟಡದ ಶಂಕುಸ್ಥಾಪನೆ ಮಾಡಿದವನು ಉತ್ತಮನೋ ಅಥವಾ ಕುಸಿದು ಬೀಳುವ ಮರಳ ದಿಣ್ಣೆಯ ಮೇಲೆ ಅಡಿಪಾಯ ಹಾಕಿ ತಾನೂ ಅದರೊಂದಿಗೆ ನರಕಾಗ್ನಿಯಲ್ಲಿ ಬೀಳುವವನು ಉತ್ತಮನೋ? (9:109)*

ಸರಕಾರದ ಆಡಳಿತೆ ಮತ್ತು ನ್ಯಾಯಾಂಗ ವ್ಯವಸ್ಥೆಯ ಹೊಣೆ ಹೊತ್ತವರು ತಮ್ಮ ಅಧಿಕಾರವನ್ನು ನ್ಯಾಯಯುತವಾಗಿ ಚಲಾಯಿಸಲು ಆದೇಶಿಸಲಾಗಿದೆ. ಆಡಳಿತಾಧಿಕಾರ ಜನರಿಂದ ಲಭಿಸಿದ ಒಂದು ವಿಶ್ವಸ್ತನಿಧಿ ಎಂದು ಪವಿತ್ರ ಖುರ್‌ಆನ್ ಸೂಚಿಸುತ್ತದೆ. ಜನರು ಯೋಗ್ಯರಿಗೆ ಅಧಿಕಾರ ನೀಡಬೇಕೆಂದು ಆದೇಶಿಸಲಾಗಿದೆ. ಹೀಗೆ ಅಧಿಕಾರ ಪಡೆದವರು ತಮ್ಮ ಅಧಿಕಾರವನ್ನು ನ್ಯಾಯಯುತವಾಗಿ ಬಳಸಬೇಕೆಂದು ಸಹ ಆದೇಶಿಸಲಾಗಿದೆ.

ಇಸ್ಲಾಮ್ ಧರ್ಮವು ನ್ಯಾಯದ ಬಗ್ಗೆ ಬಹಳ ಉನ್ನತವಾದ ನಿಲುವನ್ನು ಹೊಂದಿದೆ. ನ್ಯಾಯವು ಸ್ನೇಹಿತರಿಗೂ ಶತ್ರುಗಳಿಗೂ ಸಮಾನವಾಗಿ ಸಲ್ಲಬೇಕಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯ ವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತ ರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯವಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ. (5:9)*

ನ್ಯಾಯಪಾಲನೆ ಮಾಡಲು ಸಾಕ್ಷ್ಯಗಳು ಅತ್ಯಾವಶ್ಯಕವಾಗಿವೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಒತ್ತಿ ಹೇಳಿದೆ:

*ಓ ಸತ್ಯವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ. ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗ ಪಡಿಸದೆ) ನುಣುಚಿಕೊಂಡರೆ (ತಿಳಿದುಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ. (4:136)*

ಈ ವಿಷಯಗಳಲ್ಲಿ ಸಾರ್ವತ್ರಿಕವಾಗಿರುವ ನ್ಯೂನತೆಗಳನ್ನು ಹೋಗಲಾಡಿಸಲು ಇರುವ ಏಕಮಾತ್ರ ಮಾರ್ಗ ಜನರ ನೈತಿಕ ಪ್ರಜ್ಞೆಯನ್ನು ಉತ್ತೇಜಿಸುವುದಾಗಿದೆ. ಇಂತಹ ನ್ಯೂನತೆಯನ್ನು ಹೊಂದಿದವನು ತಾನು ಜನರ ದೃಷ್ಟಿಯಲ್ಲಿ ಗೌರವಚ್ಯುತಿಯನ್ನು ಹೊಂದಿರುವೆನೆಂದು ಮನವರಿಕೆ ಮಾಡಿಕೊಳ್ಳುವಂತೆ ಆಗಬೇಕು. ಅಂತಹ ವ್ಯಕ್ತಿಯ ವರ್ತನೆಯು ಸಾಮಾಜಿಕ ಅತೃಪ್ತಿಯನ್ನು ಉಂಟುಮಾಡುವುದಿಲ್ಲವಾದರೆ ಅವನ ಅಪರಾಧಕ್ಕೆ ಸಿಗಬಹುದಾದ ಶಿಕ್ಷೆಯು ಅಂತಹ ವ್ಯಕ್ತಿಯನ್ನು ಇಂತಹ ಅಪರಾಧ ಮಾಡುವುದಕ್ಕೆ ತಡೆಯಾಗಲಾರದು. ಉತ್ತಮ ನೈತಿಕ ಮಟ್ಟವನ್ನು ಕಾಪಾಡ ಬಯಸುವ ಸಮಾಜ ಇದರ ಬಗ್ಗೆ ಜಾಗರೂಕವಾಗಿರಬೇಕು. ದುರ್ಗುಣಗಳನ್ನು ತಡೆಯಲು ಅಥವಾ ಅದನ್ನು ತಿರಸ್ಕರಿಸಲು ಇರುವ ಉದಾಸೀನತೆಯು ಸಾಮಾಜಿಕ ನೈತಿಕ ಮೌಲ್ಯಗಳ ಅಧಃಪತನಕ್ಕೆ ಹೇತುವಾಗಿದ್ದು ಅದು ಆತಂಕಕರವಾಗಿದೆ. ಪವಿತ್ರ ಖುರ್‌ಆನ್ ಹಿಂದಿನ ಜನಾಂಗದ ಒಂದು ಉದಾಹರಣೆ ನೀಡಿ ಈ ಬಗ್ಗೆ ಆಗ್ರಹಪಡಿಸಿದೆ. ಅದು ಹೀಗೆ ಹೇಳಿದೆ:

*ಅವರು ತಾವು ಮಾಡುತ್ತಿದ್ದ ದುಷ್ಕೃತ್ಯಗಳಿಂದ ಪರಸ್ಪರ ತಡೆಯುತ್ತಿರಲಿಲ್ಲ. ಅವರು ಮಾಡುತ್ತಿದ್ದುದು ಬಹಳ ದುಷ್ಟ ಕೆಲಸವೇ ಆಗಿತ್ತು. (5:80)*

ದೇಶವನ್ನೂ ಸಮಾಜವನ್ನೂ ನಿಷ್ಠೆಯಿಂದಲೂ ಕಾರ್ಯಕ್ಷಮತೆ ಯಿಂದಲೂ ಸೇವೆ ಮಾಡುವ ಕರ್ತವ್ಯ ಹೊಂದಿದವನು ತನ್ನ ಕೆಲಸವನ್ನು ತಕ್ಕುದಾದ ರೀತಿಯಲ್ಲಿ ಮಾಡದೆ ಕರ್ತವ್ಯಚ್ಯುತಿ ಮೂಲಕ ಆಡಳಿತೆಗೆ ಕೆಟ್ಟ ಹೆಸರನ್ನು ಉಂಟುಮಾಡುತ್ತಾನೆ. ಅವನ ಕೆಲಸದ ಕೆಡುಕು ವಿವಿಧ ವಲಯಗಳಲ್ಲಿ ಪ್ರಭಾವಬೀರುತ್ತದೆ.

ಏಕಲೋಕ ಸ್ಥಾಪನೆಗೆ ನಾವು ಮೊತ್ತ ಮೊದಲು "ಎಲ್ಲಾ ಮನುಷ್ಯರು ಸಮಾನರು" ಎಂಬ ಪೀಠಿಕೆಯಿಂದ ಆರಂಭಿಸಬೇಕಾಗಿದೆ. ಯಾರಿಗೂ ಯಾವುದೇ ವಿಶೇಷ ಸವಲತ್ತು ದೊರಕಲಾರದು. ಸಾತ್ವಿಕತೆಯು ಮಾತ್ರ ಗೌರವದ ಹೆಗ್ಗುರುತಾಗಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಓ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತ ವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿರುವನು. (49:14)*

ವೈವಿಧ್ಯತೆಗೆ ಒಂದು ಉದ್ದೇಶವಿದೆ. ಅದು ದೈವಿಕ ಯೋಜನೆ ಯಾಗಿದ್ದು ಅದರ ಪರಿಣಾಮವಾಗಿ ಯಾವುದೇ ವಿಶೇಷ ಸವಲತ್ತು ದೊರಕಲಾರದು. ನಮಗೆ ಹೀಗೆ ನೆನಪಿಸಲಾಗಿದೆ:

*ಆಕಾಶಗಳ ಮತ್ತು ಭೂಮಿಯ ಸೃಷ್ಟಿ ಹಾಗೂ ನಿಮ್ಮ ಭಾಷೆ ಮತ್ತು ವರ್ಣಗಳ ವೈವಿಧ್ಯ – ಇದು ಸಹ ಅಲ್ಲಾಹನ*

**(24ನೇ ಪುಟಕ್ಕೆ.....)**

# ಈಸಾ ಮಸೀಹರ ಮರಣ

★ *ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್*
ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ

ಅಹ್ಮದೀ ಮುಸ್ಲಿಮರಾದ ನಾವು ಹಝ್‌ರತ್ ಈಸಾ ಅಲೈಹಿಸ್ಸಲಾಮರು ಮೃತರಾದರೆಂದು ನಂಬುತ್ತೇವೆ. ಹಾಗೆ ನಂಬುವುದರ ಮೂಲಕ ನಾವು ಅವರಿಗೆ ಅಪಮಾನ ಮಾಡುತ್ತೇವೆಂದೂ ಪವಿತ್ರ ಖುರ್‌ಆನಿನ ಉಪದೇಶವನ್ನು ಅಲ್ಲಗಳೆಯುತ್ತೇವೆಂದೂ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ತೀರ್ಪನ್ನು ತಿರಸ್ಕರಿಸುತ್ತೇವೆಂದೂ ನಮ್ಮ ಮೇಲೆ ನಮ್ಮ ವಿರೋಧಿಗಳು ಆಕ್ಷೇಪಿಸುತ್ತಾರೆ.

ಹಝ್‌ರತ್ ಈಸಾ[ಅ] ಮೃತರಾಗಿರುವವರು ಎಂದು ನಾವು ನಂಬುತ್ತೇವೆ ಎಂಬುದು ಸತ್ಯವಾಗಿದೆ. ಆದರೆ ಆ ಮೂಲಕ ಅವರಿಗೆ ಅಪಮಾನ ಮಾಡುತ್ತೇವೆಂದೂ ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅಲ್ಲಗಳೆಯುತ್ತೇವೆಂದೂ ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ತೀರ್ಪನ್ನು ತಿರಸ್ಕರಿಸುತ್ತೇವೆಂದೂ ಹೇಳುವುದು ಸರಿಯಲ್ಲ. ನಾವು ಈ ಬಗ್ಗೆ ಯೋಚಿಸುವಾಗ ನಮಗೆ ತಿಳಿದು ಬರುವುದೇನೆಂದರೆ, ನಾವು ಹೀಗೆ ನಂಬುವುದರಿಂದ ನಮ್ಮ ಮೇಲೆ ಹಾಗೆ ಆಕ್ಷೇಪಗಳು ಹೊರಿಸಲ್ಪಡಲು ಸಾಧ್ಯವಿಲ್ಲ. ಆದರೆ ನಾವು ಹಝ್‌ರತ್ ಈಸಾ[ಅ] ಮೃತರಾಗದೆ ಈಗಲೂ ಜೀವಿಸಿರುವವರು ಎಂದು ನಂಬುವುದಾದರೆ ಮೇಲಿನ ಆಕ್ಷೇಪಗಳನ್ನು ನಮ್ಮ ಮೇಲೆ ಹೊರಿಸಬಹುದಾಗಿದೆ.

ನಾವು ಮುಸ್ಲಿಮರಾಗಿದ್ದೇವೆ. ಆದುದರಿಂದ ನಮ್ಮ ಯೋಚನೆ ಎಲ್ಲದಕ್ಕಿಂತಲೂ ಮೊದಲು ಅಲ್ಲಾಹನ ಮಹೋನ್ನತ ಸ್ಥಾನ ಮತ್ತು ಅವನ ಸಂದೇಶವಾಹಕರ ಗೌರವದ ಕಡೆಗೆ ಅಭಿಮುಖೀಕರಿಸುತ್ತದೆ. ನಾವು ಎಲ್ಲಾ ಸಂದೇಶವಾಹಕರನ್ನು ಸತ್ಯವಾದಿಗಳೆಂದು ನಂಬುತ್ತೇವೆ. ಆದರೆ ಯಾವ ಸಂದೇಶವಾಹಕ ನಮಗೋಸ್ಕರ ಕಷ್ಟವನ್ನನುಭವಿಸಿ ನಮ್ಮ ಭಾರವನ್ನು ಹಗುರಗೊಳಿಸಲು ತನ್ನ ತಲೆಯ ಮೇಲೆ ಭಾರವನ್ನು ಹೊತ್ತರು ಮತ್ತು ನಾವು ಮೃತರಾಗುತ್ತಾ ಇರುವುದನ್ನು ಕಂಡು ಅವರು ಎಷ್ಟು ದುಃಖ ಅನುಭವಿಸಿದರೆಂದರೆ ಅವರು ತನ್ನ ಮೇಲೆ ಮೃತ್ಯುವನ್ನು ಬರಮಾಡಿಕೊಂಡರು; ನಮಗೆ ಸುಖವನ್ನು ನೀಡಲು ಎಲ್ಲಾ ರೀತಿಗಳ ಸುಖಗಳನ್ನು ತ್ಯಜಿಸಿದರು; ನಮ್ಮನ್ನು ಎತ್ತರಕ್ಕೆ ಏರಿಸಲು ಅವರು ಸ್ವತಃ ಕೆಳಗೆ ಬಾಗಿದರು – ಇಂತಹ ಸಂದೇಶವಾಹಕರಾದ ಹಝ್‌ರತ್

---

*(......... 23ನೇ ಪುಟದಿಂದ)*

*ದೃಷ್ಟಾಂತಗಳಲ್ಲಿ ಸೇರಿದೆ. ಜ್ಞಾನಿಗಳಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ. (ಪವಿತ್ರ ಖುರ್‌ಆನ್ 30:23)*

ವರ್ಣ, ಜನಾಂಗ, ಭಾಷೆ ಅಥವಾ ಕುಲದ ವ್ಯತ್ಯಾಸ ಕಾರಣದಿಂದ ಯಾವುದೇ ಜನರ ಗುಂಪು ಬೇರೆ ಒಂದು ಗುಂಪಿನ ಜನರನ್ನು ನಿಕೃಷ್ಟ ದೃಷ್ಟಿಯಿಂದ ಕಾಣಬಾರದು. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಓ ವಿಶ್ವಾಸಿಗಳೇ, ಒಂದು ಜನಾಂಗ ಇನ್ನೊಂದು ಜನಾಂಗವನ್ನು ಪರಿಹಾಸ ಮಾಡದಿರಲಿ. (ಒಂದು ವೇಳೆ) ಅವರು (ಪರಿಹಾಸಕ್ಕೀಡಾದವರು) ಇವರಿಗಿಂತ (ಪರಿಹಾಸ ಮಾಡುವವರಿಗಿಂತ) ಉತ್ತಮರಾಗಿರಬಹುದು. (49:12)*

ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಕೊನೆಯ ಹಜ್ಜ್ ಯಾತ್ರೆಯ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಹೀಗೆಂದರೆ: ಒಬ್ಬ ಅರಬಿ ಯಾವುದೇ ಅರಬಿಯೇತರನಿಗಿಂತ ಶ್ರೇಷ್ಠನಲ್ಲ. ಒಬ್ಬ ಅರಬಿಯೇತರನು ಯಾವುದೇ ಅರಬಿಗಿಂತ ಶ್ರೇಷ್ಠನಲ್ಲ. ಬಿಳಿವರ್ಣದವನು ಕಪ್ಪುವರ್ಣದವನಿಗಿಂತ ಶ್ರೇಷ್ಠನಲ್ಲ. ಕಪ್ಪುವರ್ಣದವನು ಬಿಳಿವರ್ಣದವನಿಗಿಂತ ಶ್ರೇಷ್ಠನಲ್ಲ. ನೀವೆಲ್ಲರೂ ಪರಸ್ಪರ ಸಹೋದರರಾಗಿರುವಿರಿ.

ಇಸ್ಲಾಮ್ ಧರ್ಮ ಮತ್ತು ಮುಸ್ಲಿಮರು ಬಣ್ಣಗಳ ವ್ಯತ್ಯಾಸ ಗುರುತಿಸಲಾರದ ಅಂಧರೆಂದು ನೀವು ಪರಿಗಣಿಸಬಹುದು.

ನಮ್ಮ ಏಕ ಲೋಕದಲ್ಲಿ ಸಂಪೂರ್ಣ ಸಹಕಾರ ಇರಬೇಕೇ ಹೊರತು ಮೇಲಿನ ಸ್ಥಾನ ಗಳಿಸಲು ಹೋರಾಟವಿರಬಾರದು.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪ ಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ. (5:3)*

ಸಾತ್ವಿಕತೆಯನ್ನು ಹೊಂದಲಿಕ್ಕೆ ಸ್ಪರ್ಧಿಸಲು ಪ್ರೋತ್ಸಾಹಿಸಬೇಕಾಗಿದೆ. ಸ್ಪರ್ಧೆಯು ಮನುಷ್ಯನ ಸಹಜಗುಣವಾಗಿದೆ. ಅದನ್ನು ಒಳಿತಿನ ಕಡೆಗೆ ಚಲಿಸುವಂತೆ ಮಾಡಬೇಕಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*ಪ್ರತಿಯೊಬ್ಬನಿಗೂ ಒಂದೊಂದು ಗುರಿಯಿರುತ್ತದೆ. ಅದು ಅವನ ಮೇಲೆ ಪ್ರಭಾವ ಬೀರುತ್ತದೆ. ನೀವು ಸತ್ಕರ್ಮದಲ್ಲಿ ಮೇಲುಗೈಯಾಗಲು ಸ್ಪರ್ಧಿಸಿರಿ. ನೀವು ಎಲ್ಲಿದ್ದರೂ ಅಲ್ಲಾಹನು ನಿಮ್ಮನ್ನೆಲ್ಲಾ ಒಂದುಗೂಡಿಸುವನು. ತಾನಿಚ್ಛಿಸುವುದನ್ನು ಮಾಡಲು ಅಲ್ಲಾಹನು ಶಕ್ತನಾಗಿದ್ದಾನೆ. (2:149)*

ಏಕಲೋಕ ಸ್ಥಾಪನೆಯು ಮುಂದುವರಿಯುತ್ತಿದೆ. ಅದು ನಮ್ಮನ್ನು ದಾಟಿ ಮುಂದೆ ಸಾಗುವುದು. ನಮ್ಮ ಪ್ರಯತ್ನಗಳು ಮತ್ತು ನಮ್ಮ ಸಿದ್ಧತೆಗಳು ಸರ್ವರಿಗೂ ಒಳಿತನ್ನುಂಟುಮಾಡುವ ಮತ್ತು ಸರ್ವ ಜನಾಂಗಗಳ ಮಧ್ಯೆ ಸಹಕಾರದ ಮುಂಬೆಳಗನ್ನು ಉಂಟುಮಾಡುವುದಕ್ಕಾಗಿರಬೇಕು. ಪರಸ್ಪರ ಜಗಳ ಮತ್ತು ನಾಶದ ಸೂರ್ಯಾಸ್ತಕ್ಕೆ ನಾವು ಮುಂದಾಗಬಾರದು. ಆಯ್ಕೆ ನಮ್ಮದೇ ಆಗಿದೆ. ನಾವು ಪ್ರತೀಕ್ಷಿಸೋಣ ಮತ್ತು ಪ್ರಾರ್ಥಿಸೋಣ. ನಾವು ನಮ್ಮ ಕರ್ತವ್ಯವನ್ನು ಸಂಪೂರ್ಣವಾಗಿ ಮನದಟ್ಟುಮಾಡಿಕೊಂಡು ಸರಿಯಾದ ಕ್ರಮವನ್ನು ಆಯ್ಕೆ ಮಾಡಿ ಕೃತಿಶೀಲರಾಗೋಣ.

★

(ಅನುವಾದಕ : A. ಅಬ್ದುಸ್ಸಲಾಮ್)

ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಬಗ್ಗೆ ನಮ್ಮ ಪ್ರೀತಿ ಮತ್ತು ಅಭಿಮಾನ ಸಹಜವಾಗಿ ಉಕ್ಕಿ ಹರಿಯುತ್ತದೆ. ಅವರ ಹಗಲು ನಮ್ಮ ಪ್ರಗತಿಯ ಬಗ್ಗೆ ಚಿಂತನೆಗಳಲ್ಲಿ ಕಳೆಯಿತು. ಅವರ ರಾತ್ರಿ ನಮಗೋಸ್ಕರ ಎಚ್ಚರದಿಂದಿರುವ ಮೂಲಕ ದಾಟಿ ಹೋಯಿತು. ಅವರು ಪ್ರಾರ್ಥಿಸುತ್ತಾ ನಿಂತುಕೊಂಡಿರುವಾಗ ಅವರ ಪಾದಗಳು ಬೀಗಿ ಹೋಗುತ್ತಿದ್ದುವು. ಅವರು ಸ್ವತಃ ಪಾಪರಹಿತರಾಗಿದ್ದರೂ ನಮ್ಮ ಪಾಪಗಳನ್ನು ದೂರ ಸರಿಸಲು ಮತ್ತು ನಮ್ಮನ್ನು ನರಕ ಶಿಕ್ಷೆಯಿಂದ ರಕ್ಷಿಸಲು ಅವರು ಎಷ್ಟು ಅಳುತ್ತಾ ಪ್ರಾರ್ಥಿಸುತ್ತಾ ಇದ್ದರೆಂದರೆ ಅವರು ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದ ಸ್ಥಳ ಕಣ್ಣೀರಿನಿಂದ ಒದ್ದೆಯಾಗುತ್ತಿತ್ತು. ಅವರ ಅಳಲು ನಮಗೋಸ್ಕರ ಎಷ್ಟು ಹೆಚ್ಚಾಗಿತ್ತೆಂದರೆ ಅವರ ಎದೆಯಿಂದ ಹೊರಟ ಧ್ವನಿ ಕುದಿಯುವ ದೊಡ್ಡ ಪಾತ್ರೆಯು ಹೊರಡಿಸುವ ಶಬ್ದಕ್ಕಿಂತ ಹೆಚ್ಚಾಗಿರುತ್ತಿತ್ತು.

ಅವರು ಅಲ್ಲಾಹನ ಕರುಣೆಯನ್ನು ನಮಗೋಸ್ಕರ ಸೆಳೆದು ಕೊಂಡರು; ಅಲ್ಲಾಹನ ಸಂಪ್ರೀತಿಯನ್ನು ನಮಗೋಸ್ಕರ ಹೀರಿದರು; ಅಲ್ಲಾಹನ ಅನುಗ್ರಹದ ಚಾದರವನ್ನು ನಮ್ಮ ಮೇಲೆ ಹೊದಿಸಿದರು; ಅಲ್ಲಾಹನ ಕಾರುಣ್ಯದ ಶಾಲನ್ನು ನಮ್ಮ ಭುಜದ ಮೇಲೆ ಹಾಕಿದರು; ಅಲ್ಲಾಹನ ಸಾಮೀಪ್ಯದ ಮಾರ್ಗಗಳನ್ನು ನಮಗೋಸ್ಕರ ಹುಡುಕಿದರು; ಅಲ್ಲಾಹನೊಂದಿಗೆ ಐಕ್ಯಹೊಂದುವ ರೀತಿಗಳನ್ನು ನಮಗೋಸ್ಕರ ಗೊತ್ತು ಹಚ್ಚಿದರು. ಅವರು ನಮಗೆ ಎಂತಹ ಅನುಕೂಲತೆಗಳನ್ನು ತಲಪಿಸಿದ ರೆಂದರೆ ಅವರಿಗಿಂತ ಮೊದಲು ಆಗಮಿಸಿದ ಯಾವುದೇ ಪ್ರವಾದಿ ತನ್ನ ಸಮುದಾಯಕ್ಕೆ ಅಂತಹವುಗಳನ್ನು ತಲಪಿಸಿರಲಿಲ್ಲ.

ನಮ್ಮನ್ನು ಸೃಷ್ಟಿಸಿದ, ನಮ್ಮನ್ನು ಪೋಷಿಸುವ, ನಮಗೆ ಜೀವ ನೀಡುವ, ನಮ್ಮನ್ನು ರಕ್ಷಿಸುವ, ನಮಗೆ ಆಹಾರ ನೀಡುವ, ತನ್ನ ಬಗ್ಗೆ ಜ್ಞಾನವನ್ನು ನಮಗೆ ನೀಡುವ, ನಮಗೆ ಮಾರ್ಗದರ್ಶನ ನೀಡುವ ಅಲ್ಲಾಹನಿಗೆ ಸಮಾನವಾದ ಸ್ಥಾನವನ್ನು ನಜರೇತಿನ ಈಸಾರಿಗೆ ಕೊಟ್ಟು, ಅಲ್ಲಾಹನು ಆಕಾಶದಲ್ಲಿ ಆಹಾರ ಪಾನೀಯಗಳ ಆವಶ್ಯಕತೆಯಿಲ್ಲದೆ ಜೀವಂತನಾಗಿರುವ ಹಾಗೆ, ಈಸಾ ಸಹ ಮನುಷ್ಯ ಸಹಜವಾದ ಆವಶ್ಯಕತೆಗಳನ್ನು ಈಡೇರಿಸದೆ ಆಕಾಶದಲ್ಲಿ ಕುಳಿತಿರುವವರೆಂದು ನಂಬುವುದಕ್ಕಿಂತ ನಾವು "ಕುಫ್ರ್" (ಅವಿಶ್ವಾಸದ) ಬಿರುದು ಗಳಿಸುವುದು ಅತ್ಯುತ್ತಮ ಎಂದು ಭಾವಿಸುತ್ತೇವೆ.

ನಾವು ಈಸಾ ಮಸೀಹರನ್ನು(ಅ) ಗೌರವಿಸುವುದು ಅವರು ನಮ್ಮ ಅಲ್ಲಾಹನ ಪ್ರವಾದಿ ಆಗಿರುವುದರಿಂದ ಮಾತ್ರವಾಗಿದೆ. ನಾವು ಅವರನ್ನು ಪ್ರೀತಿಸುವುದು ಅವರಿಗೆ ಅಲ್ಲಾಹನ ಮೇಲೆ ಪ್ರೀತಿ ಇದ್ದ ಕಾರಣದಿಂದ ಮತ್ತು ಅಲ್ಲಾಹನೂ ಅವರನ್ನು ಪ್ರೀತಿಸುತ್ತಿದ್ದ ಕಾರಣದಿಂದ ಮಾತ್ರವಾಗಿದೆ. ಅವರೊಂದಿಗೆ ನಮ್ಮ ಎಲ್ಲಾ ಸಂಬಂಧಗಳು ಪರೋಕ್ಷವಾಗಿವೆ. ಹೀಗಿರುವಾಗ ನಾವು ಅವರಿಗೋಸ್ಕರ ನಮ್ಮ ದೇವನ ಉಪಕಾರಗಳನ್ನು ಮರೆತು, ಅವನಿಗೆ ಅಪಮಾನ ಮಾಡಿ, ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಶತ್ರುಗಳಾದ ಪಾದರಿಗಳಿಗೆ ಸಹಾಯ ಮಾಡುವುದು ಹೇಗೆ ತಾನೆ ಸಾಧ್ಯ? ಅವರು "ನೋಡಿರಿ, ಆಕಾಶದಲ್ಲಿ ಜೀವಂತನಾಗಿ ಕುಳಿತಿರುವವನು ದೇವನಲ್ಲವೇ, ಅವನು ಮನುಷ್ಯನಾಗಿದ್ದರೆ ಇತರ ಮನುಷ್ಯರ ಹಾಗೆ ಏಕೆ ಮೃತನಾಗಲಿಲ್ಲ?" ಎಂದು ಹೇಳಲು ನಾವು ಹೇಗೆ ತಾನೆ ಅವರಿಗೆ ಸಂದರ್ಭವೊದಗಿಸಬಲ್ಲೆವು?

ನಾವು ಸ್ವತಃ ಅಲ್ಲಾಹನ ಏಕತ್ವದ ಮೇಲೆ ಹೇಗೆ ತಾನೆ ಆಕ್ರಮಣ ಮಾಡಬಲ್ಲೆವು? ನಾವು ಅವನ ಧರ್ಮಕ್ಕೆ ಕೊಡಲಿಯೇಟು ಹೇಗೆ ತಾನೆ ನೀಡಬಲ್ಲೆವು? ಈ ಕಾಲಘಟ್ಟದ ಮೌಲವಿಗಳು ಮತ್ತು ಮತ ಪಂಡಿತರು ನಮ್ಮ ವಿರುದ್ಧ ಅವರಿಗಿಷ್ಟವಿರುವ ಹಾಗೆ ಹೇಳಲಿ. ಅವರಿಗೆ ಇಷ್ಟವಿರುವ ಹಾಗೆ ವರ್ತಿಸಲಿ ಮತ್ತು ಇತರರನ್ನು ನಮ್ಮ ವಿರುದ್ಧ ಪ್ರೇರೇಪಿಸಲಿ. ನಮ್ಮನ್ನು ನೇಣಿಗೇರಿಸಲಿ, ನಮ್ಮನ್ನು ಕಲ್ಲೆಸೆದು ಕೊಲ್ಲಲಿ. ನಾವು ಈಸಾ ಮಸೀಹರಿಗೋಸ್ಕರ ಅಲ್ಲಾಹನನ್ನು ಬಿಡಲಾರೆವು. ಅಲ್ಲಾಹನ ಜೊತೆ ಅವರು ಸಹ ಜೀವಂತವಾಗಿ ಕುಳಿತಿದ್ದಾರೆಂದು ಕುಫ್ರ್ (ಅವಿಶ್ವಾಸದ) ಹೇಳಿಕೆ ನಮ್ಮ ನಾಲಗೆ ಉಚ್ಚರಿಸುವುದಕ್ಕಿಂತ ಮೃತ ರಾಗುವುದು ಸಾವಿರಪಟ್ಟು ಉತ್ತಮವೆಂದು ನಾವು ಭಾವಿಸುತ್ತೇವೆ. ಈಸಾ ಮಸೀಹರನ್ನು ದೇವಪುತ್ರನೆಂದು ಹೇಳಿ ಅನಶ್ವರನಾದ ದೇವನನ್ನು ಕ್ರೈಸ್ತ ಧರ್ಮೀಯರು ಅಪಮಾನಿಸುತ್ತಾರೆ. ನಮಗೆ ಜ್ಞಾನವು ಲಭಿಸಿರದಿದ್ದರೆ ನಿಸ್ಸಂಶಯವಾಗಿ ನಾವು ಅಂತಹ ಮಾತುಗಳನ್ನು ಹೇಳಬಹುದಾಗಿತ್ತು. ಆದರೆ ಅಲ್ಲಾಹನು ನೇಮಿಸಿದ ಮಹಾನುಭಾವರು ನಮ್ಮ ಕಣ್ಣುಗಳನ್ನು ತೆರೆದಿರುವರು. ಅಲ್ಲಾಹನ ಏಕತ್ವ, ಅವನ ಪ್ರತಾಪ, ಅವನ ಮಹಿಮೆ, ಅವನ ಶ್ರೇಷ್ಠತೆ, ಅವನ ಶಕ್ತಿ ಸಾಮರ್ಥ್ಯಗಳನ್ನು ನಮಗೆ ಅವರು ತೋರಿಸಿಕೊಟ್ಟಿರುವರು. ನಾವು ಯಾವುದೇ ಪರಿಸ್ಥಿತಿಯಲ್ಲಿ ಅಲ್ಲಾಹನನ್ನು ಬಿಟ್ಟು ಅವನ ಯಾವುದೇ ದಾಸನನ್ನು ಆಶ್ರಯಿಸಲಾರೆವು. ನಾವು ಹಾಗೆ ಮಾಡಿದರೆ ನಮ್ಮ ಸ್ಥಾನ ಏನಾಗುವುದೆಂದು ನಮಗೆ ತಿಳಿಯದು. ಎಲ್ಲಾ ಗೌರವಗಳು, ಎಲ್ಲಾ ಪದವಿಗಳು ಅಲ್ಲಾಹನ ಮೂಲಕವೇ ದೊರಕುತ್ತವೆ. ಈಸಾ ಮಸೀಹ್(ಅ) ಜೀವಂತವಾಗಿ ಇರುವುದಾದರೆ ಅದರಿಂದ ನಮ್ಮ ದೇವನಿಗೆ ಅಪಮಾನ ಉಂಟಾಗುತ್ತದೆ ಎಂದು ಸ್ಪಷ್ಟವಾಗಿ ನಮಗೆ ಕಾಣಿಸುವಾಗ ನಾವು ಆ ನಂಬಿಕೆಯನ್ನು ಸತ್ಯವೆಂದು ಹೇಗೆ ತಾನೆ ಅಂಗೀಕರಿಸಬಲ್ಲೆವು? ಈಸಾ ಮಸೀಹರಿಗಿಂತ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾದುದರಿಂದ ಅವರ ಗೌರವಕ್ಕೆ ಹಾನಿ ಉಂಟಾಗುವುದಿಲ್ಲವಾದರೆ ಈಸಾ ಮಸೀಹ್(ಅ) ಮೃತರಾದರೆಂದು ಹೇಳುವುದರಿಂದ ಅವರ ಗೌರವಕ್ಕೆ ಹೇಗೆ ಹಾನಿಯಾಗುತ್ತವೆ ಎಂದು ನಮಗೆ ಅರ್ಥವಾಗುವುದಿಲ್ಲ.

ನಾವು ಸ್ಪಷ್ಟವಾಗಿ ಹೇಳಬಯಸುತ್ತೇವೆ. ಅಲ್ಲಾಹನ ಗೌರವಕ್ಕೆ ಹಾನಿ ಅಥವಾ ಈಸಾ ಮಸೀಹರ ಗೌರವಕ್ಕೆ ಹಾನಿ ಎಂಬ ಎರಡು ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡುವ ಸಂದರ್ಭ ನಮಗೆ ಎದುರಿಸಬೇಕಾಗಿ ಬಂದರೆ ಅಲ್ಲಾಹನ ಗೌರವಕ್ಕೆ ಹಾನಿ ಉಂಟಾಗುವ ನಂಬಿಕೆಯನ್ನು ನಾವು ಎಂದೂ ಅಂಗೀಕರಿಸಲಾರೆವು. ನಾವು ಹೀಗೆಯೂ ನಂಬುತ್ತೇವೆ. ಈಸಾ ಮಸೀಹ್ ಅಲ್ಲಾಹನನ್ನು ಪ್ರೀತಿಸುವವರಾಗಿದ್ದರು. ಅಲ್ಲಾಹನ ಏಕತ್ವಕ್ಕೆ ಹಾನಿ ಉಂಟುಮಾಡಿ ತಮ್ಮ ಗೌರವವನ್ನು ಕಾಪಾಡಬೇಕೆಂದು ಅವರು ಎಂದೂ ಬಯಸಲಾರರು.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

لَنْ يَّسْتَنْكِفَ الْمَسِيْحُ اَنْ يَّكُوْنَ عَبْدًا لِّلّٰهِ وَلَا الْمَلٰٓئِكَةُ الْمُقَرَّبُوْنَ۔

"ತಾನು ಅಲ್ಲಾಹನ ಒಬ್ಬ ದಾಸನೆಂಬುದನ್ನು ಮಸೀಹ್ ಎಂದಿಗೂ ನಿರ್ಲಕ್ಷ್ಯ ಮಾಡಲಾರರು. ಹಾಗೆಯೇ (ಅಲ್ಲಾಹನ) ಸಾಮೀಪ್ಯ ಪಡೆದ ದೇವದೂತರು ಸಹ." (3:173)

ಅಲ್ಲಾಹನು ಈಸಾ ಮಸೀಹರ ಬಾಯಿಯಿಂದ ಹೀಗೆ ಹೇಳಿಸಿರುವನು:

وَكُنْتُ عَلَيْهِمْ شَهِيْدًا مَّا دُمْتُ فِيْهِمْ فَلَمَّا تَوَفَّيْتَنِيْ كُنْتَ اَنْتَ الرَّقِيْبَ عَلَيْهِمْ وَاَنْتَ عَلٰى كُلِّ شَيْءٍ شَهِيْدٌ۔

"ನಾನು ಅವರೊಂದಿಗೆ ಇದ್ದ ಕಾಲದ ವರೆಗೆ ನಾನು ಅವರಿಗೆ ಸಾಕ್ಷಿ ಆಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರನು ನೀನೇ ಆದೆ. ನೀನು ಸರ್ವ ಸಂಗತಿಗಳಿಗೂ ಸಾಕ್ಷಿಯಾಗಿರುವೆ." (5:118)

ಕ್ರೈಸ್ತ ಧರ್ಮಾವಲಂಬಿಗಳು ಈಸಾ ಮಸೀಹ್ ಮೃತರಾದ ನಂತರ ಬಿಗಡಾಯಿಸಿದರೆಂದು ಈಸಾ ಮಸೀಹ್ ಸ್ವತಃ ಹೇಳಿರುವರು. ಈ ಮಾತಿನ ಪ್ರಕಾರ ಈಸಾ ಮಸೀಹರ ಜೀವಿತ ಕಾಲದಲ್ಲಿ ಅವರ ಅನುಯಾಯಿಗಳು ಸತ್ಯಧರ್ಮದಲ್ಲಿ ನೆಲೆನಿಂತಿದ್ದರು.

ಹಝ್ರತ್ ಈಸಾ ಮಸೀಹ್(ಅ) ಈಗಲೂ ಆಕಾಶದಲ್ಲಿ ಜೀವಂತವಾಗಿ ಕುಳಿತಿರುವರು ಎಂದು ಹೇಳುವವರಿಗೆ ನಾವು ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಉಲ್ಲೇಖಿಸುತ್ತೇವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

يٰعِيسٰىٓ اِنِّيْ مُتَوَفِّيْكَ وَرَافِعُكَ اِلَيَّ وَمُطَهِّرُكَ مِنَ الَّذِيْنَ كَفَرُوْا
وَجَاعِلُ الَّذِيْنَ اتَّبَعُوْكَ فَوْقَ الَّذِيْنَ كَفَرُوْٓا اِلٰى يَوْمِ الْقِيٰمَةِ

**"ಓ ಈಸಾ, ನಾನು ನಿನ್ನನ್ನು ಮೃತಪಡಿಸುವೆನು ಮತ್ತು ನನ್ನೆಡೆಗೆ ಎತ್ತುವೆನು; ಅವಿಶ್ವಾಸಿಗಳ ಆರೋಪಗಳಿಂದ ನಿನ್ನನ್ನು ಪರಿಶುದ್ಧ ಗೊಳಿಸುವೆನು ಮತ್ತು ನಿನ್ನನ್ನು ಅನುಸರಿಸಿದವರಿಗೆ ಪುನರುತ್ಥಾನ ದಿನದವರೆಗೆ (ನಿನ್ನನ್ನು) ನಿರಾಕರಿಸಿದವರಿಗಿಂತ ಉನ್ನತ ಸ್ಥಾನವನ್ನು ನೀಡುವೆನು." (3:56)**

ಪವಿತ್ರ ಖುರ್‌ಆನಿನ ಈ ವಚನವನ್ನು ಕಡೆಗಣಿಸುವುದಾದರೂ ಹೇಗೆ? ಹಝ್ರತ್ ಈಸಾ ಮಸೀಹರ ಮೇಲೆತ್ತುವಿಕೆ (ರಫಅ) ಅವರು ಮೃತರಾದ ನಂತರ ಸಂಭವಿಸಿತು ಎಂದು ಈ ವಚನ ಸಾಕ್ಷ್ಯ ನೀಡುತ್ತದೆ.

ಆದರೆ ಅಲ್ಲಾಹನಿಗಿಂತ ಉತ್ತಮವಾದ ಭಾಷೆ ಬಲ್ಲವರೆಂದು ವಾದಿಸುವವರು ಹೀಗೆ ಹೇಳಬಹುದು: ಈ ವಚನದಲ್ಲಿ ಹಝ್ರತ್ ಈಸಾ ಮಸೀಹರ ಕುರಿತು ಮುತವಫ್ಫೀಕ (ನಿನ್ನನ್ನು ಮೃತಪಡಿಸುವೆನು) ಎಂದು ಮೊದಲು ಹೇಳಿದ್ದರೂ ರಾಫಿಉಕ (ನಿನ್ನನ್ನು ಮೇಲೆತ್ತುವೆನು) ಎಂಬುದನ್ನು ಮೊದಲು ಹೇಳಬೇಕಾಗಿತ್ತು.

ಆದರೆ ನಾವು ಅಲ್ಲಾಹನ ವಚನಗಳನ್ನು ಎಲ್ಲಾ ವಚನಗಳಿಗಿಂತ ಶ್ರೇಷ್ಠವೂ ಸ್ಪಷ್ಟವೂ ಆಗಿವೆ ಎಂದು ನಂಬುತ್ತೇವೆ. ಅವು ಎಲ್ಲಾ ವಿಧಗಳ ತಪ್ಪುಗಳಿಂದ ಮುಕ್ತವಾಗಿವೆ ಎಂದು ನಂಬುತ್ತೇವೆ. ನಾವು ಸೃಷ್ಟಿಗಳಾಗಿದ್ದು ನಮ್ಮ ಸೃಷ್ಟಿಕರ್ತನ ತಪ್ಪುಗಳನ್ನು ಹೇಗೆ ತಾನೆ ಕಂಡುಕೊಳ್ಳುವೆವು? ನಾವು ಅಜ್ಞಾನಿಗಳಾಗಿದ್ದು ಜ್ಞಾನಿಗೆ ಹೇಗೆ ತಾನೆ ಪಾಠ ಕಲಿಸಬಲ್ಲೆವು? "ನೀವು ಹೇಳಿರಿ, ಅಲ್ಲಾಹನ ವಚನದಲ್ಲಿ ತಪ್ಪು ಉಂಟಾಗಿದೆ. ಆದರೆ ಅಲ್ಲಾಹನ ವಚನವನ್ನು ಅರ್ಥಮಾಡಿ ಕೊಳ್ಳುವುದರಲ್ಲಿ ಸ್ವತಃ ನಮಗೆ ತಪ್ಪು ಸಂಭವಿಸಿದೆ ಎಂದು ಹೇಳಬೇಡಿರಿ." ಎಂದು ಅವರು ಹೇಳಿದರೆ ನಾವು ಅವರ ಈ ಉಪದೇಶವನ್ನು ಹೇಗೆ ತಾನೆ ಅಂಗೀಕರಿಸಲು ಸಾಧ್ಯ? ಇದರಲ್ಲಿ ಸ್ಪಷ್ಟವಾದ ನಾಶವು ಕಂಡುಬರುತ್ತದೆ. ನಮಗೆ ಕಣ್ಣು ಕಾಣಿಸುತ್ತಿರುವಾಗ ನಾವು ಹೊಂಡಕ್ಕೆ ಬೀಳುವುದಾದರೂ ಹೇಗೆ? ನಮಗೆ ಕೈಗಳಿರುವಾಗ ವಿಷದ ಪಾತ್ರೆಯನ್ನು ನಮ್ಮ ಬಾಯಿಯಿಂದ ಏಕೆ ದೂರ ಸರಿಸಬಾರದು?

ಅಲ್ಲಾಹನ ನಂತರ ನಾವು ಖಾತಮುನ್ನಬಿಯ್ಯೀನ್ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತೇವೆ. ಅಲ್ಲಾಹನು ಅವರಿಗೆ ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠ ಸ್ಥಾನ ನೀಡಿರುವನು. ನಮಗೆ ದೊರಕಿದವುಗಳೆಲ್ಲವೂ ಅವರ ಮೂಲಕವೇ ದೊರಕಿವೆ. ಅವರು ನಮಗೆ ಮಾಡಿದ ಉಪಕಾರಗಳ ಹತ್ತರಲ್ಲಿ ಒಂದಂಶ ಸಹ ಪ್ರವಾದಿಯಾಗಿದ್ದ ಅಥವಾ ಪ್ರವಾದಿಯಾಗಿಲ್ಲದ ಯಾರೊಬ್ಬ ವ್ಯಕ್ತಿಯೂ ನಮಗೋಸ್ಕರ ಮಾಡಿಲ್ಲ. ನಾವು ಅವರಿಗಿಂತ ಮಿಗಿಲಾಗಿ ಬೇರೆ ಯಾವ ಮನುಷ್ಯನಿಗೂ ಗೌರವವನ್ನು ನೀಡಲಾರೆವು. ಹಝ್ರತ್ ಈಸಾ ಮಸೀಹರನ್ನು(ಅ) ಜೀವಂತವಾಗಿ ಆಕಾಶಕ್ಕೇರಿಸಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಭೂಮಿಯಲ್ಲಿ ದಫನು ಗೊಳಿಸಲಾಯಿತೆಂದು ಹೇಳಿ ಅದರೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರರನ್ನು ಹಝ್ರತ್ ಈಸಾ ಮಸೀಹ್‌ರಿಗಿಂತ ಶ್ರೇಷ್ಠರೂ ಆಗಿದ್ದಾರೆಂದು ದೃಢವಾಗಿ ನಂಬುವುದು ಅರ್ಥ ಮಾಡಿಕೊಳ್ಳಲು ಅಸಾಧ್ಯವಾದ ವಿಷಯವಾಗಿದೆ.

ಅಲ್ಪ ಸ್ವಲ್ಪ ಅಪಾಯದ ಸೂಚನೆ ದೊರೆತಾಗ ಅಲ್ಲಾಹನಿಂದ ಆಕಾಶಕ್ಕೇರಿಸಲ್ಪಟ್ಟ ವ್ಯಕ್ತಿ ಕೆಳಮಟ್ಟದವನು ಮತ್ತು ಶತ್ರುಗಳಿಂದ ದೂರ ದೂರದ ತನಕ ಬೆನ್ನಟ್ಟಲ್ಪಟ್ಟ ವ್ಯಕ್ತಿ ಆಕಾಶದ ಮಾತು ಬಿಡಿ, ನಕ್ಷತ್ರಗಳ ತನಕ ಸಹ ಎತ್ತಲ್ಪಡಲಿಲ್ಲವಾದರೆ ಅಂತಹ ವ್ಯಕ್ತಿ ಶ್ರೇಷ್ಠನೂ ಆಗುವುದು ಹೇಗೆ?

ವಾಸ್ತವಿಕವಾಗಿ ಹಝ್ರತ್ ಈಸಾ ಮಸೀಹ್(ಅ) ಆಕಾಶದಲ್ಲಿದ್ದು ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಭೂಮಿಯಲ್ಲಿ ದಫನುಗೊಳಿಸಲ್ಪಟ್ಟಿದ್ದರೆ ನಮಗೆ ಅದಕ್ಕಿಂತ ದೊಡ್ಡ ಮೃತ್ಯು ಬೇರೆ ಇಲ್ಲ. ನಾವು ಕ್ರೈಸ್ತರಿಗೆ ಮುಖ ತೋರಿಸಲು ಸಮರ್ಥ ರಾಗಲಾರೆವು.

ಆದರೆ ವಾಸ್ತವಿಕ ವಿಷಯ ಹಾಗೆ ಅಲ್ಲ. ಅಲ್ಲಾಹನು ತನ್ನ ಪರಿಶುದ್ಧ ಸಂದೇಶವಾಹಕರೊಂದಿಗೆ ಹಾಗೆ ವರ್ತಿಸಲಾರನು. ಅವನು ಎಲ್ಲಾ ಅಧಿಕಾರಿಗಳಿಗಿಂತ ಅತ್ಯಂತ ಶ್ರೇಷ್ಠ ಅಧಿಕಾರಿಯಾಗಿದ್ದಾನೆ. ಅವನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಆದಮ್ ಸಂತತಿಗಳ ನಾಯಕನನ್ನಾಗಿ ಮಾಡಿರುತ್ತಾನೆ. ಅವನು ಅವರನ್ನು ಹಝ್ರತ್ ಈಸಾ ಮಸೀಹ್‌ಗಿಂತ ಹೆಚ್ಚು ಪ್ರೀತಿಸುತ್ತಿದ್ದನು. ಅವರ ಕಷ್ಟಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದನು. ಅವನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಗೌರವವನ್ನು ಸ್ಥಾಪಿಸಲು ಒಂದು ಲೋಕವನ್ನೇ ಅಡಿಮೇಲು ಮಾಡಿದನು. ಅವರನ್ನು ಸ್ವಲ್ಪ ಮಾತ್ರ ಅಪಮಾನಿಸಲು ನೋಡಿದವನನ್ನು ಹೀನಾಯಗೊಳಿಸಿದನು. ಹೀಗಿರುವಾಗ ಇಂತಹ ಅಲ್ಲಾಹನು ತನ್ನ ಕೈಗಳಿಂದಲೇ ಅವರ ವೈಭವವನ್ನು ಹಾನಿಗೊಳಿಸಿ ಶತ್ರುಗಳಿಗೆ ಆಕ್ಷೇಪಮಾಡಲು ಸಂದರ್ಭವನ್ನು ಹೇಗೆ ತಾನೆ ನೀಡುವನು?

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಭೂಮಿಯಲ್ಲಿ ದಫನುಗೊಂಡಿದ್ದಾರೆ; ಆದರೆ ಈಸಾ ಮಸೀಹ್(ಅ) ಆಕಾಶದಲ್ಲಿ ಜೀವಂತ ವಾಗಿ ಕುಳಿತುಕೊಂಡಿದ್ದಾರೆ ಎಂದು ನಾನು ಯೋಚಿಸುವಾಗಲೆಲ್ಲಾ ನನ್ನ ದೇಹದಲ್ಲಿ ರೋಮಾಂಚನವಾಗುತ್ತದೆ. ನನ್ನ ಜೀವವು ಕುಗ್ಗಲು ತೊಡಗುತ್ತದೆ. ಆಗ ನನ್ನ ಹೃದಯ ಬೊಬ್ಬಿಟ್ಟು ಹೇಳುತ್ತದೆ: ಅಲ್ಲಾಹನು ಖಂಡಿತ ಹೀಗೆ ಮಾಡಲಾರನು. ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಎಲ್ಲರಿಗಿಂತಲೂ ಹೆಚ್ಚಾಗಿ ಪ್ರೀತಿಸುವವ ನಾಗಿದ್ದಾನೆ. ಅವರು ಮೃತರಾಗಿ ಭೂಮಿಯಲ್ಲಿ ದಫನು ಗೊಳ್ಳಲಿ ಎಂದೂ ಹಝ್ರತ್ ಈಸಾ ಮಸೀಹ್(ಅ) ಆಕಾಶದಲ್ಲಿ ಜೀವಂತವಾಗಿ ಕುಳಿತಿರಲಿ ಎಂದೂ ಅವನು ಖಂಡಿತವಾಗಿಯೂ ಇಷ್ಟಪಡಲಾರನು. ಜೀವಂತವಾಗಿ ಆಕಾಶದಲ್ಲಿ ಕುಳಿತಿರುವ ಅರ್ಹತೆ ಯಾರಿಗಾದರೂ ಇರುವುದಾದರೆ ಅದು ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾರಿಗೆ(ಸ) ಮಾತ್ರವಿದೆ. ಅವರು ಮೃತರಾಗಿದ್ದರೆ ಎಲ್ಲಾ ಪ್ರವಾದಿಗಳೂ ಮೃತರಾಗಿರುವರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉನ್ನತ ವೈಭವ ಮತ್ತು ಅವರ ಶ್ರೇಷ್ಠ ಪದವಿಯನ್ನು ನೋಡುತ್ತಾ ಅವರ ಸ್ಥಾನವನ್ನು ಗುರುತಿಸುತ್ತಾ ನಾವು ಹೇಗೆ ತಾನೆ ಈ ಮಾತನ್ನು ಅಂಗೀಕರಿಸಬಲ್ಲೆವು? ಹಿಜ್‌ರತ್ ಸಂದರ್ಭದಲ್ಲಿ ಸೌರ್ ಪರ್ವತದ ಎತ್ತರವಾದ ಬಂಡೆಕಲ್ಲುಗಳನ್ನು ಹತ್ತಿಹೋಗಲು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಭುಜಕ್ಕೆ ಕಾಲೂರ ಬೇಕಾಯಿತು. ಆಗ ಅಲ್ಲಾಹನು ಯಾವ ದೇವದೂತನನ್ನೂ ಅವರ ಸಹಾಯಕ್ಕೆ

ಇಳಿಸಲಿಲ್ಲ. ಆದರೆ ಹಝ್‌ರತ್ ಈಸಾ ಮಸೀಹರನ್ನು(ಅ) ಯಹೂದಿಯರು ಸೆರೆ ಹಿಡಿಯಲು ಬಂದಾಗ ಅಲ್ಲಾಹನು ಕೂಡಲೆ ಅವರನ್ನು ಆಕಾಶಕ್ಕೆ ಎತ್ತಿ ನಾಲ್ಕನೆಯ ಆಕಾಶದಲ್ಲಿ ಅವರಿಗೆ ಸ್ಥಳಾವಕಾಶ ನೀಡಿದನು ಎಂದು ನಾವು ಹೇಗೆ ತಾನೆ ನಂಬಬಹುದು? ಇದೇ ರೀತಿ ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು(ಸ) ಕೆಲವು ಸಂಗಡಿಗರು ಮಾತ್ರ ಸುತ್ತುವರಿದುದನ್ನು ಶತ್ರುಗಳು ಕಂಡಾಗ ಅಲ್ಲಾಹನು ಅವರನ್ನು ಸ್ವಲ್ಪ ಕಾಲಕ್ಕೆ ಆಕಾಶಕ್ಕೆ ಅವರ ಯಾವುದಾದರೂ ಶತ್ರುವಿಗೆ ಅವರ ರೂಪವನ್ನು ನೀಡಿ ಶತ್ರುಗಳಿಂದ ಅವನ ಹಲ್ಲು ಮುರಿಯುವಂತೆ ಮಾಡಲಿಲ್ಲ. ಆದರೆ ಶತ್ರುಗಳು ಹಝ್‌ರತ್ ಮುಹಮ್ಮದ್ ಪೈಗಂಬರರನ್ನು(ಸ) ಆಕ್ರಮಿಸುವಂತೆ ಮಾಡಿ ಅವರು ಮೃತರಾಗಿರುವರೋ ಎಂಬಂತೆ ಪ್ರಜ್ಞಾಶೂನ್ಯರಾಗಿ ನೆಲಕ್ಕೆ ಬೀಳುವಂತೆ ಮಾಡಿದನು. ಶತ್ರುಗಳು ಸಂತೋಷದಿಂದ "ನಾವು ಮುಹಮ್ಮದರನ್ನು ಕೊಂದೆವು" ಎಂದು ಘೋಷಣೆ ಮಾಡಿದರು. ಆದರೆ ಈಸಾ ಮಸೀಹರಿಗೆ ಸಂಬಂಧಿಸಿ ಹೇಳುವುದಾದರೆ, ಅವರಿಗೆ ಯಾವುದೇ ಕಷ್ಟ ಉಂಟಾಗುವುದು ಅಲ್ಲಾಹನಿಗೆ ಇಷ್ಟವಾಗಲಿಲ್ಲ. ಯಹೂದಿಯರು ಅವರನ್ನು ಸೆರೆಹಿಡಿಯಲು ನಿರ್ಧರಿಸಿದಾಗ ಅವರನ್ನು ಆಕಾಶಕ್ಕೆ ಎತ್ತಿಕೊಂಡು ಹೋದನು. ಅವರ ರೂಪವನ್ನು ಒಬ್ಬ ಶತ್ರುವಿಗೆ ನೀಡಿ ಅವನು ಶಿಲುಬೆಗೇರುವಂತೆ ಮಾಡಿದನು.

ನಾವು ಆಶ್ಚರ್ಯಚಕಿತರಾಗುತ್ತೇವೆ. ಜನರಿಗೇನಾಗಿದೆ? ಒಂದು ಕಡೆ ಅವರು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರನ್ನು ಪ್ರೀತಿಸುವುದಾಗಿ ವಾದಿಸುತ್ತಾರೆ. ಇನ್ನೊಂದು ಕಡೆ, ಈ ಜನರು ಅವರ ಗೌರವಕ್ಕೆ ಕುಂದುಂಟುಮಾಡುತ್ತಾರೆ. ಹಝ್‌ರತ್ ಪೈಗಂಬರರ(ಸ) ಪ್ರೀತಿಯಲ್ಲಿ ತಲ್ಲೀನರಾಗಿ ಅವರಿಗಿಂತ ಬೇರೆ ಯಾರಿಗೂ ಶ್ರೇಷ್ಠತೆ ಇಲ್ಲವೆಂದು ವಾದಿಸುವ ಸತ್ಯವಿಶ್ವಾಸಿಗಳಿಗೆ ಈ ಜನರು ಕಷ್ಟ ಕೊಡುತ್ತಾರೆ. ಅವರ ಈ ವಿಶ್ವಾಸವನ್ನು ಕುಫ್ರ್(ಅವಿಶ್ವಾಸ) ಎಂದು ನಿಂದಿಸುತ್ತಾರೆ. ಏನು, ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಗೌರವವನ್ನು ಕಾಪಾಡಿದುದರ ಹೆಸರನ್ನು ಕುಫ್ರ್ ಎಂದೆನ್ನಬಹುದೇ? ಅವರ ನಿಜವಾದ ಸ್ಥಾನವನ್ನು ಘೋಷಿಸುವುದರ ಹೆಸರು ಧರ್ಮರಾಹಿತ್ಯವೆಂದೇ? ಅವರನ್ನು ಪ್ರೀತಿಸುವುದು ಧರ್ಮತ್ಯಾಗವೇ?

ಇದೇ ಕುಫ್ರ್ (ಅವಿಶ್ವಾಸ) ಆಗಿದ್ದರೆ, ಇದೇ ಧರ್ಮರಾಹಿತ್ಯವಾಗಿದ್ದರೆ, ಇದೇ ಧರ್ಮತ್ಯಾಗವಾಗಿದ್ದರೆ, ಅಲ್ಲಾಹನಾಣೆ ನಾವು ಈ ಕುಫ್ರನ್ನು ಬೇರೆ ಜನರ ವಿಶ್ವಾಸಕ್ಕಿಂತ, ಈ ಧರ್ಮರಾಹಿತ್ಯವನ್ನು ಬೇರೆ ಜನರ ಧರ್ಮನಿಷ್ಠೆಗಿಂತ, ಈ ಧರ್ಮತ್ಯಾಗವನ್ನು ಬೇರೆ ಜನರ ಧರ್ಮಸ್ಥಿರತೆಗಿಂತ ಸಾವಿರ ಪಟ್ಟು ಉತ್ತಮವೆಂದು ಭಾವಿಸುತ್ತೇವೆ. ನಮ್ಮ ನಾಯಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್, ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರೊಂದಿಗೆ ಸೇರಿಕೊಂಡು ಯಾವುದೇ ನಿಂದನೆಯ ಭಯವಿಲ್ಲದೆ ಹೀಗೆ ಪ್ರಕಟಿಸುತ್ತೇವೆ.

**ಬಅದ್ ಅಝ್ ಖುದಾ ಬಇಶ್‌ಖೆ ಮುಹಮ್ಮದ್ ಮುಕಮ್ಮರಮ್**
**ಗರ್ ಕುಫ್ರ್ ಏಂ ಬೂದ್ ಬಖುದಾ ಸಖ್ತ್ ಕಾಫಿರಮ್**

**ಅಲ್ಲಾಹನ ನಂತರ ಮುಹಮ್ಮದರ ಪ್ರೀತಿಯಲ್ಲಿ ನಾನು ಮತ್ತನಾಗಿದ್ದೇನೆ. ಇದೇ ಕುಫ್ರ್ ಆಗಿದ್ದರೆ ಅಲ್ಲಾಹನಾಣೆ ನಾನು ತೀವ್ರ ಕಾಫಿರ್ ಆಗಿದ್ದೇನೆ.**

ಎಲ್ಲರೂ ಒಂದು ದಿನ ಸಾಯಬೇಕಾಗಿದೆ. ಅನಂತರ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿಕ್ಕಿದೆ. ಅವನೊಂದಿಗೆ ಮಾತ್ರ ನಮ್ಮ ಸಂಬಂಧವಿರುವುದು. ಹೀಗಿರುವಾಗ ನಾವು ಜನರ ಬಗ್ಗೆ ಹೆದರುವುದೇಕೆ? ಜನರು ನಮಗೆ ಯಾವ ಹಾನಿಯನ್ನು ಉಂಟುಮಾಡಬಲ್ಲರು? ನಾವು ಅಲ್ಲಾಹನಿಗೆ ಮಾತ್ರ ಹೆದರುತ್ತೇವೆ. ಅವನನ್ನೇ ನಾವು ಪ್ರೀತಿಸುತ್ತೇವೆ. ಅವನ ನಂತರ ಎಲ್ಲರಿಗಿಂತಲೂ ಹೆಚ್ಚು ಪ್ರೀತಿ ಮತ್ತು ಆದರ ನಮ್ಮ ಹೃದಯ ಗಳಲ್ಲಿರುವುದು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹರ(ಸ) ಮೇಲೆ. ಲೋಕದ ಎಲ್ಲಾ ಗೌರವ, ಲೋಕದ ಎಲ್ಲಾ ಸಂಬಂಧಗಳು, ಲೋಕದ ಎಲ್ಲಾ ಸುಖ ಸಂತೋಷಗಳು ಅವರಿಗೋಸ್ಕರ ನಾವು ತ್ಯಜಿಸಬೇಕಾಗಿ ಬಂದರೆ ಅದು ನಮಗೆ ಸುಲಭದ ಕೆಲಸವಾಗಿದೆ. ಆದರೆ ಹಝ್‌ರತ್ ಪೈಗಂಬರರನ್ನು(ಸ) ಅಪಮಾನಿಸುವುದನ್ನು ನಾವು ಸಹಿಸಲು ಸಾಧ್ಯವೇ ಇಲ್ಲ. ನಾವು ಬೇರೆ ಪ್ರವಾದಿಗಳನ್ನು ಅಪಮಾನಿಸುವುದಿಲ್ಲ. ಆದರೆ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಶಕ್ತಿ, ಅವರ ಜ್ಞಾನ, ಅವರ ಸೂಕ್ಷ್ಮ ಗ್ರಹಣಶಕ್ತಿ, ಅವರಿಗೆ ಅಲ್ಲಾಹನೊಂದಿಗಿದ್ದ ಅತ್ಯಂತ ನಿಕಟ ಸಂಬಂಧ ಇವುಗಳನ್ನು ನೋಡುವುದಾದರೆ ಅವರಿಗಿಂತ ಬೇರೆ ಯಾವುದಾದರೂ ಪ್ರವಾದಿಯೊಂದಿಗೆ ಅಲ್ಲಾಹನಿಗೆ ಹೆಚ್ಚು ಪ್ರೀತಿ ಇತ್ತೆಂದು ನಾವು ಎಂದಿಗೂ ನಂಬಲಾರೆವು. ಹಾಗೆ ನಾವು ನಂಬುವು ದಾದರೆ ನಮಗಿಂತ ಹೆಚ್ಚು ಶಿಕ್ಷಾರ್ಹರು ಬೇರೆ ಯಾರೂ ಇಲ್ಲ. ನಾವು ಕಣ್ಣುಗಳನ್ನು ಹೊಂದಿರುವಾಗ ಹೇಗೆ ತಾನೆ ಹಾಗೆ ನಂಬುವೆವು?

ಅರಬಿಗಳು ಹಝ್‌ರತ್ ಮುಹಮ್ಮದ್ ಪೈಗಂಬರರೊಂದಿಗೆ ಹೇಳಿದರು:

اَوْ تَرْقٰى فِى السَّمَآءِ وَلَنْ نُّؤْمِنَ لِرُقِيِّكَ حَتّٰى تُنَزِّلَ عَلَيْنَا كِتٰبًا نَّقْرَؤُهٗ ـ

**"ಅಥವಾ ನೀನು ಆಕಾಶಕ್ಕೇರಿ ಹೋಗಬೇಕು. (ಹಾಗೆ ಆಕಾಶದಿಂದ) ನಾವು ಓದುವಂತಹ ಒಂದು ಗ್ರಂಥವನ್ನು ನೀನು ಇಳಿಸಿಕೊಡದಿದ್ದರೆ ನಾವು ನಿನ್ನ ಆಕಾಶರೋಹಣವನ್ನು ನಂಬಲಾರೆವು." (ಪವಿತ್ರ ಖುರ್‌ಆನ್ 17:94)**

ಆಗ ಅಲ್ಲಾಹನು ಹಝ್‌ರತ್ ಮುಹಮ್ಮದ್ ಪೈಗಂಬರರೊಂದಿಗೆ, ಅವಿಶ್ವಾಸಿಗಳಿಗೆ ಹೀಗೆನ್ನಬೇಕೆಂದು ಹೇಳಿದನು:

**"ಖುಲ್ ಸುಬ್‌ಹಾನ ರಬ್ಬೀ. ಹಲ್ ಕುನ್‌ತು ಇಲ್ಲಾ ಬಶರನ್ ರ‍್ರಸೂಲ."**

**"ನೀನು ಹೇಳು: ನನ್ನ ಪ್ರಭು ಪರಿಶುದ್ಧನು. ನಾನೊಬ್ಬ ಸಂದೇಶ ವಾಹಕನಾದ ಮನುಷ್ಯನು ಮಾತ್ರ ಆಗಿದ್ದೇನೆ."**
**(ಪವಿತ್ರ ಖುರ್‌ಆನ್ 17:94 ಇದರ ಮುಂದುವರಿದ ಭಾಗ)**

ಆದರೆ ಈ ಮಸೀಹರನ್ನು ಆಕಾಶಕ್ಕೆ ಎತ್ತಿಕೊಂಡು ಹೋಗುವುದು ಮತ್ತು ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ ಸಂಬಂಧಿಸಿ ಪ್ರಶ್ನೆ ಉದಿಸುವಾಗ ಮನುಷ್ಯರು ಆಕಾಶಕ್ಕೇರಿ ಹೋಗುವುದಕ್ಕೆ ವಿರೋಧ ಸೂಚಿಸುವುದು; ಈಸಾ ಮಸೀಹರನ್ನು, ಆವಶ್ಯಕತೆ ಇಲ್ಲದಿದ್ದರೂ ಆಕಾಶಕ್ಕೆ ಎತ್ತಿಕೊಂಡು ಹೋಗುವುದು – ಹೀಗೆ ನಂಬುವುದಾದರೆ ಈಸಾ ಮಸೀಹ್ ಮನುಷ್ಯನಾಗಿರಲಿಲ್ಲ, ದೇವನಾಗಿದ್ದರೆಂದಾಗುವುದಿಲ್ಲವೆ? ನವೂಧುಬಿಲ್ಲಾಹ್ – ಅಲ್ಲಾಹನು ಇಂತಹ ನಂಬಿಕೆಯ ಘೋರ ಪಾಪದಿಂದ ನಮ್ಮನ್ನು ರಕ್ಷಿಸಲಿ. ಅಥವಾ ಹೀಗೆ ಭಾವಿಸಬೇಕಾಗುತ್ತದೆ: ಈಸಾ ಮಸೀಹ್ ಹಝ್‌ರತ್ ಮುಹಮ್ಮದ್ ಪೈಗಂಬರರಿಗಿಂತ ಶ್ರೇಷ್ಠರು ಮತ್ತು ಅಲ್ಲಾಹನ ಹೆಚ್ಚು ಪ್ರೀತಿಗೆ ಪಾತ್ರರಾಗಿದ್ದರು.

ಆದರೆ, ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಎಲ್ಲಾ ಪ್ರವಾದಿಗಳಿಗಿಂತ ಶೇಷ್ಠರು ಆಗಿರುವರೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟ. ಹೀಗಿರುವಾಗ ಹಝ್‌ರತ್ ಪೈಗಂಬರ್(ಸ) ಆಕಾಶಕ್ಕೆ ಹೋಗದೆ ಈ ಭೂಮಿಯಲ್ಲಿಯೇ ದಫನುಗೊಂಡಿದ್ದಾರೆಂದೂ ಆದರೆ ಈಸಾ ಮಸೀಹ್(ಅ) ಆಕಾಶಕ್ಕೇರಿ ಹೋಗಿ ಸಾವಿರಾರು ವರ್ಷ ಜೀವಂತವಾಗಿರುವರೆಂದೂ ನಮ್ಮ ವಿವೇಕ ಹೇಗೆ ತಾನೆ ಅಂಗೀಕರಿಸಲು ಸಾಧ್ಯ?

ಇಲ್ಲಿ ಕೇವಲ ಅಭಿಮಾನದ ಪ್ರಶ್ನೆಯಲ್ಲ, ಹಝ್ರತ್ ಪೈಗಂಬರರ ಸತ್ಯತೆಯ ಪ್ರಶ್ನೆ ಸಹ ಇದೆ. ಅವರು ಹೀಗೆ ಹೇಳಿದ್ದರು:

**ಲೌಕಾನ ಮೂಸಾ ವ ಈಸಾ ಹಯ್ಯಯ್‌ನಿ**
**ಲಮಾ ವಸಿಅಹುಮಾ ಇಲ್ಲತ್ತಬಾಈ**

**"ಮೂಸಾ ಪ್ರವಾದಿ ಮತ್ತು ಈಸಾ ಪ್ರವಾದಿ ಇವರಿಬ್ಬರೂ ಜೀವಂತ ರಾಗಿರುತ್ತಿದ್ದರೆ ನನ್ನನ್ನು ಅನುಸರಿಸದೆ ಇರಲು ಸಾಧ್ಯವಿರಲಿಲ್ಲ."**

ಹಝ್ರತ್ ಈಸಾ ಮಸೀಹ್[ಅ] ಜೀವಂತರಾಗಿದ್ದರೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಈ ನುಡಿ ಅವಾಸ್ತವಿಕವಾಗುತ್ತದೆ. (ನವೂಝುಬಿಲ್ಲಾಹ್). ಅವರು ಮೂಸಾ ಪ್ರವಾದಿ ಜೊತೆಗೆ ಈಸಾ ಪ್ರವಾದಿಯನ್ನು ಸೇರಿಸಿ ಅವರಿಬ್ಬರೂ ಮೃತರಾಗಿರುವರೆಂದು ಹೇಳಿರುವರು. ಹಝ್ರತ್ ಪೈಗಂಬರ್[ಸ] ಸಾಕ್ಷ್ಯ ನೀಡಿರುವಾಗ ಅವರ ಸಮುದಾಯಕ್ಕೆ ಸೇರಿದವರೆಂದು ಹೇಳಿಕೊಳ್ಳುವವರು ಹೇಗೆ ತಾನೆ ಈಸಾ ಮಸೀಹ್[ಅ] ಜೀವಂತವಾಗಿ ಇರುವರೆಂದು ಹೇಳಲಿಕ್ಕೆ ಸಾಧ್ಯ? ಈಸಾ ಮಸೀಹ್[ಅ] ಜೀವಂತರಾಗಿದ್ದರೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸತ್ಯತೆ ಮತ್ತು ಅವರ ಜ್ಞಾನಕ್ಕೆ ಸಂಬಂಧಿಸಿ ಸಂದೇಹ ತಲೆದೋರುತ್ತದೆ. ಏಕೆಂದರೆ, ಅವರು ಹಝ್ರತ್ ಈಸಾ ಮಸೀಹ್[ಅ] ಮೃತಪಟ್ಟಿರುವರೆಂದು ಮನಗಂಡಿದ್ದರು.

ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಮೃತರಾಗುವುದಕ್ಕೆ ಮೊದಲು ಅಸ್ವಸ್ಥರಾಗಿದ್ದಾಗ ತನ್ನ ಮಗಳು ಹಝ್ರತ್ ಫಾತಿಮ ರೊಂದಿಗೆ[ರ] ಹೀಗೆ ಹೇಳಿದರು:

إِنَّ جِبْرِيْلَ كَانَ يُعَارِضُنِي الْقُرْاٰنَ فِيْ كُلِّ عَامٍ مَرَّةً فَإِنَّهُ عَارَضَنِيْ
بِالْقُرْاٰنِ الْعَامَ مَرَّتَيْنِ وَاَخْبَرَنِيْ اَنَّهُ لَمْ يَكُنْ نَبِيٌّ اِلَّا عَاشَ
نِصْفَ الَّذِيْ قَبْلَهُ وَاَخْبَرَنِيْ اَنَّ عِيْسَى ابْنَ مَرْيَمَ عَاشَ عِشْرِيْنَ
وَمِائَةَ سَنَةٍ وَلَا اَرَانِيْ اِلَّا ذَاهِبًا عَلَى رَأْسِ السِّتِّيْنَ۔

**(ಮವಾಹಿಬೆ ಲದ್ದುನ್‌ಯಾ - ಖಸ್‌ತಲಾನಿ. ಸಂಪುಟ 1 ಪುಟ 42)**

**"ಜಿಬ್ರೀಲ್ ನನಗೆ ಪ್ರತಿ ವರ್ಷ ಒಂದು ಸಾರಿ ಪವಿತ್ರ ಖುರ್‌ಆನ್ ಓದಿ ಹೇಳುತ್ತಿದ್ದರು. ಆದರೆ ಈ ವರ್ಷ ಎರಡು ಸಾರಿ ಓದಿ ಹೇಳಿದರು. ಅವರು ನನಗೆ ಹೀಗೆ ತಿಳಿಸಿದರು: ಯಾವುದೇ ಪ್ರವಾದಿ ಅವರ ಮೊದಲು ಆಗಮಿಸಿದ ಪ್ರವಾದಿಗಿಂತ ಕನಿಷ್ಠ ಅರ್ಧಾಂಶ ಪ್ರಾಯದಷ್ಟು ಜೀವಿಸದೆ ಇರಲಿಲ್ಲ. ಅವರು ನನಗೆ ಹೀಗೆ ಸಹ ತಿಳಿಸಿದರು: ಈಸಬ್ನು ಮರ್‌ಯಮ್ ನೂರ ಇಪ್ಪತ್ತು ವರ್ಷ ಜೀವಿಸಿದ್ದರು. ನನ್ನ ಆಯುಸ್ಸು ಅರುವತ್ತು ವರ್ಷಕ್ಕೆ ಸಮೀಪವಾಗಿರುವುದೆಂದು ನಾನು ಮನವರಿಕೆ ಮಾಡಿಕೊಂಡೆನು."**

ಈ ಹದೀಸಿನಲ್ಲಿರುವ ವಿಷಯ ದೇವ ಸಂದೇಶವಾಣಿಯ ರೂಪ ದಲ್ಲಿದೆ. ಇದರಲ್ಲಿ ಹಝ್ರತ್ ಪೈಗಂಬರ್[ಸ] ಸ್ವತಃ ಏನನ್ನೂ ಹೇಳಲಿಲ್ಲ; ಹಝ್ರತ್ ಜಿಬ್ರೀಲ್[ಅ] ತಿಳಿಸಿದ ವಿಷಯಗಳನ್ನು ಮಾತ್ರ ಹೇಳಿದ್ದಾರೆ. ಅವರು ಹಝ್ರತ್ ಈಸಾ ಮಸೀಹ್[ಅ] ನೂರ ಇಪ್ಪತ್ತು ವರ್ಷ ಜೀವಿಸಿದ್ದರೆಂದು ತನಗೆ ಜಿಬ್ರೀಲ್[ಅ] ತಿಳಿಸಿರುವುದನ್ನು ಪ್ರಸ್ತಾಪಿಸಿದ್ದಾರೆ. ಆದುದರಿಂದ ಈಸಾ ಮಸೀಹ್[ಅ] 32-33 ವರ್ಷಗಳ ಪ್ರಾಯದಲ್ಲಿ ಆಕಾಶಕ್ಕೆ ಎತ್ತಲ್ಪಟ್ಟರು ಎಂಬ ಜನರ ವಿಶ್ವಾಸ ತಪ್ಪೆಂದು ಸಾಬೀತಾಗುತ್ತದೆ. ಈಸಾ ಮಸೀಹ್ ಆಕಾಶಕ್ಕೆ ಎತ್ತಲ್ಪಟ್ಟಿದ್ದರೆ ಹಝ್ರತ್ ಪೈಗಂಬರರ ಕಾಲದಲ್ಲಿ ಅವರ ಪ್ರಾಯ ಅಂದಾಜು ಆರುನೂರು ವರ್ಷಗಳಾಗುತ್ತವೆ. ಹೀಗಿರುವಾಗ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಕನಿಷ್ಠ ಮುನ್ನೂರು ವರ್ಷಗಳ ಆಯುಸ್ಸನ್ನು ಹೊಂದಬೇಕಾಗುತ್ತಿತ್ತು.

ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್[ಸ] 63ನೇ ವರ್ಷ ಪ್ರಾಯದಲ್ಲಿ ಮೃತರಾದುದು ಮತ್ತು ಈಸಾ ಮಸೀಹ್[ಅ] 120 ವರ್ಷ ಕಾಲ ಜೀವಿಸಿದ್ದರೆಂದು ಅವರಿಗೆ ಜಿಬ್ರೀಲ್[ಅ] ಸಂದೇಶವಾಣಿ ಮೂಲಕ ತಿಳಿಸಿದುದರಿಂದ ಈಸಾ ಮಸೀಹ್[ಅ] ಆಕಾಶದಲ್ಲಿ ಜೀವಿಸಿರುವರೆಂಬ ನಂಬಿಕೆ ಹಝ್ರತ್ ಮುಹಮ್ಮದ್ ಪೈಗಂಬರರ ಉಪದೇಶಗಳಿಗೆ ಸಂಪೂರ್ಣ ವಿರುದ್ಧವಾಗಿದೆ ಎಂದು ಸಾಬೀತಾಗುತ್ತದೆ. ಅವರಿಗೆ ದೊರೆತ ದೇವಸಂದೇಶವಾಣಿಗಳು ಈ ವಿಶ್ವಾಸವನ್ನು ತಿರಸ್ಕರಿಸುತ್ತವೆ. ವಾಸ್ತವಿಕಾಂಶ ಹೀಗಿರುವಾಗ ಈಸಾ ಮಸೀಹರನ್ನು ಜೀವಂತರಾಗಿರುವರೆಂದು ನಂಬಿ ಹಝ್ರತ್ ಮುಹಮ್ಮದ್ ಪೈಗಂಬರರ ಮಾತನ್ನು ಬಿಟ್ಟುಬಿಡು ವುದಾದರೂ ಹೇಗೆ?

ಕಳೆದ ಹದಿಮೂರು ನೂರು ವರ್ಷಗಳ ಕಾಲಾವಧಿಯಲ್ಲಿ ಈ ವಿಷಯ ನಮಗೆ ಮಾತ್ರ ತಿಳಿದುದು ಹೇಗೆ? ನಮಗಿಂತ ಮೊದಲಿನ ಹಿರಿಯರಿಗೆ ಇದರ ಬಗ್ಗೆ ಏಕೆ ತಿಳಿದಿರಲಿಲ್ಲ ಎಂದು ನಮ್ಮ ವಿರುದ್ಧ ಆಕ್ಷೇಪಿಸಲಾಗುತ್ತದೆ. ಆದರೆ ಖೇದಕರವಾದ ವಿಷಯವೇನೆಂದರೆ, ಆಕ್ಷೇಪಿಸುವವರು ತಮ್ಮ ದೃಷ್ಟಿಯನ್ನು ಒಂದು ನಿರ್ದಿಷ್ಟ ನಿಲುವನ್ನು ಹೊಂದಿದ ಜನರಿಗೆ ಸೀಮಿತಗೊಳಿಸಿ ಅದನ್ನು ಇಜ್ಮಾ (ಒಮ್ಮತಾ ಭಿಪ್ರಾಯ) ಎಂದು ಕರೆಯುತ್ತಾರೆ. ಇಸ್ಲಾಮಿನ ಪ್ರಥಮ ವಿದ್ವಾಂಸರು ಹಝ್ರತ್ ಪೈಗಂಬರರ ಸಹಾಬ(ಶಿಷ್ಯರು) ಆಗಿದ್ದರೆಂಬುದನ್ನು ಆಕ್ಷೇಪಣೆಗಾರರು ನೋಡುವುದಿಲ್ಲ. ಆ ಸಹಾಬರ ನಂತರ ವಿದ್ವಾಂಸರ ಸರಪಳಿ ಅತ್ಯಂತ ವಿಸ್ತಾರಗೊಂಡು ಲೋಕದಲ್ಲೆಲ್ಲಾ ಹಬ್ಬಿತು.

ನಾವು ಸಹಾಬರನ್ನು ನೋಡುವುದಾದರೆ, ಅವರು ಎಲ್ಲರೂ ಒಮ್ಮತದಿಂದ ನಮ್ಮ ನಿಲುವನ್ನು ಅಂಗೀಕರಿಸುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರನ್ನು ಪ್ರೀತಿಸುತ್ತಿದ್ದ ಅವರು ತಮ್ಮ ಪ್ರಿಯ ಪ್ರವಾದಿಯ ಮಹಿಮೆಗೆ ಕುಂದುಂಟಾಗುವ ವಿಶ್ವಾಸವನ್ನು ಒಂದು ಕ್ಷಣಕಾಲಕ್ಕಾದರೂ ಹೇಗೆ ತಾನೆ ಅಂಗೀಕರಿಸಬಲ್ಲರು? ಅವರು ನಮ್ಮೊಂದಿಗೆ ಒಮ್ಮತವನ್ನು ಹೊಂದಿರುವರು. ಮಾತ್ರವಲ್ಲ, ಹಝ್ರತ್ ಪೈಗಂಬರ್[ಸ] ನಿಧನ ಹೊಂದಿದ ನಂತರ ಅವರು ಮಾಡಿದ ಪ್ರಥಮ ಒಮ್ಮತದ ನಿರ್ಧಾರ ಇದೇ ವಿಷಯಕ್ಕೆ ಸಂಬಂಧಿಸಿಯಾಗಿತ್ತು. ಹಝ್ರತ್ ಈಸಾ ಮಸೀಹ್[ಅ] ನಿಧನ ಹೊಂದಿರುವರೆಂದು ಅವರು ಪ್ರಕಟಿಸಿದರು. ಹದೀಸುಗಳ ಗ್ರಂಥಗಳಲ್ಲಿ ಮತ್ತು ಚರಿತ್ರೆಯ ಗ್ರಂಥಗಳಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಪೈಗಂಬರ್[ಸ] ನಿಧನ ಹೊಂದಿದಾಗ ಅವರ ಸಹಾಬ (ಶಿಷ್ಯರು) ಎಷ್ಟು ಪ್ರಭಾವಿತರಾದರೆಂದರೆ ಅವರು ಗಾಬರಿಗೊಂಡರು. ಕೆಲವರಿಗೆ ಮಾತನಾಡಲು ಆಗುತ್ತಿರಲಿಲ್ಲ. ಕೆಲವರು ತಮ್ಮ ಭಾವನೆಗಳನ್ನೂ ವಿವೇಕವನ್ನೂ ಹತೋಟಿಯಲ್ಲಿಡಲು ಅಸಮರ್ಥರಾದರು. ಕೆಲವರು ಸಂತಾಪಾತಿರೇಕದಿಂದ ಕೊರಗಿ ಮೃತರೂ ಆದರು. ಹಝ್ರತ್ ಉಮರ್‌ರವರ[ರ] ಮೇಲೆ ಈ ದುಃಖದ ಪ್ರಭಾವ ಹೇಗಾಯಿತೆಂದರೆ, ಅವರು ಹಝ್ರತ್ ಪೈಗಂಬರ್[ಸ] ಮೃತರಾದರೆಂದು ಒಪ್ಪಿಕೊಳ್ಳಲೇ ಇಲ್ಲ. ಅವರು ಖಡ್ಗ ಹಿರಿದು ನಿಂತುಕೊಂಡು ಹೇಳಿದರು: "ಯಾರಾದರೂ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಮೃತರಾದರೆಂದು ಹೇಳುವುದಾದರೆ ನಾನು ಹಾಗೆ ಹೇಳುವವನನ್ನು ಕೊಲ್ಲುವೆನು. ಹಝ್ರತ್ ಮೂಸಾರ[ಅ] ಹಾಗೆ ಅವರನ್ನು ಕರೆಯಲಾಗಿದೆ. ನಲ್ವತ್ತು ದಿವಸಗಳ ನಂತರ ಅವರು ಮರಳಿ ಬಂದ ಹಾಗೆ ಹಝ್ರತ್ ಪೈಗಂಬರ್[ಸ] ಕೆಲ ಕಾಲದ ನಂತರ ಮರಳಿ ಬರುವರು. ಅವರ ಮೇಲೆ ಮೃತರೆಂದು ಆರೋಪ ಹೊರಿಸುವವರು ಕಪಟವಿಶ್ವಾಸಿ ಗಳಾಗಿರುವರು. ನಾನು ಅವರನ್ನು ಕೊಲ್ಲುವೆನು."

ಹಝ್ರತ್ ಉಮರ್[ರ] ತನ್ನ ವಾದವನ್ನು ಎಷ್ಟು ಉತ್ಸಾಹದಿಂದ ಪುನರಾವರ್ತಿಸುತ್ತಿದ್ದರೆಂದರೆ ಅವರ ಮಾತನ್ನು ಅಲ್ಲಗಳೆಯಲು ಯಾರಿಗೂ ಧೈರ್ಯವಾಗಲಿಲ್ಲ. ಅವರ ಈ ಉತ್ಸಾಹ ನೋಡಿ ಕೆಲವರು

ಅವರ ಮಾತೇ ಸತ್ಯವೆಂದು ಭಾವಿಸಿದರು. ಹಝ್ರತ್ ಪೈಗಂಬರ್(ಸ) ಮೃತರಾಗಲಿಲ್ಲ ಎಂದು ಯೋಚಿಸಿದ ಅವರ ಮುಖಗಳಲ್ಲಿ ಸಂತೋಷದ ಚಿಹ್ನೆಗಳು ಗೋಚರಿಸಿದುವು. ತಲೆ ತಗ್ಗಿಸಿ ಕುಳಿತಿದ್ದ ಅವರು ಸಂತೋಷ ಭರಿತರಾಗಿ ತಲೆ ಎತ್ತಿದರು. ಈ ಪರಿಸ್ಥಿತಿಯನ್ನು ನೋಡಿ ಕೆಲವು ದೂರದೃಷ್ಟಿಯುಳ್ಳ ಶಿಷ್ಯರು ಅವರಲ್ಲೊಬ್ಬರನ್ನು ಹಝ್ರತ್ ಅಬೂಬಕರ್‌ರವರ(ರ) ಬಳಿಗೆ ಓಡಿಹೋಗಿ ವಿಷಯ ತಿಳಿಸಿ ಕರೆತರಲು ಹೇಳಿದರು. ಹಝ್ರತ್ ಪೈಗಂಬರರ ಆರೋಗ್ಯದಲ್ಲಿ ಸುಧಾರಣೆ ಕಂಡಿದ್ದಾಗ ಅವರು ಮದೀನದ ಸಮೀಪದ ಒಂದು ಗ್ರಾಮಕ್ಕೆ ಅನುಮತಿ ಪಡೆದು ಹೋಗಿದ್ದರು. ಅವರನ್ನು ಕರೆದುಕೊಂಡು ಬರಲು ಹೊರಟವರಿಗೆ ಹಝ್ರತ್ ಅಬೂಬಕರ್(ರ) ಮರಳಿ ಬರುವುದು ಕಾಣಿಸಿತು. ಆಗ ದುಃಖಾತಿರೇಕದಿಂದ ಅಶ್ರುಧಾರೆ ಜಾರಿಗೊಂಡಿತು ಮತ್ತು ಅವರಿಗೆ ದುಃಖವನ್ನು ಅದುಮಿಡಲು ಸಾಧ್ಯವಾಗಲಿಲ್ಲ. ಹಝ್ರತ್ ಅಬೂಬಕರ್(ರ) ವಿಷಯವನ್ನು ಮನವರಿಕೆ ಮಾಡಿಕೊಂಡರು. ಅವರು ಆಗಮಿಸಿದ ಶಿಷ್ಯರೊಂದಿಗೆ ಕೇಳಿದರು: "ಏನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ನಿಧನ ಹೊಂದಿರುವರೋ?" ಅವರು ಉತ್ತರಿಸಿದರು: "ಹಝ್ರತ್ ಉಮರ್ ಹೇಳುತ್ತಾರೆ – ಯಾರು ಹಝ್ರತ್ ರಸೂಲುಲ್ಲಾಹ್(ಸ) ನಿಧನ ಹೊಂದಿದರು ಎಂದು ಹೇಳುತ್ತಾರೋ ನಾನು ಅವರ ಕತ್ತನ್ನು ಕಡಿದುಹಾಕುವೆನು."

ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರ ಮನೆಗೆ ಹೋದರು. ಅವರ ಮೇಲೆ ಹೊದಿಸಲಾದ ಚಾದರವನ್ನು ಎತ್ತಿ ನೋಡಿ ಅವರು ಮೃತರಾದರೆಂಬುದನ್ನು ದೃಢಪಡಿಸಿಕೊಂಡರು. ತಮ್ಮ ಪ್ರಿಯ ಸ್ನೇಹಿತ ನಿಧನ ಹೊಂದಿರುವ ಕಾರಣದಿಂದ ಅವರ ಕಣ್ಣುಗಳಿಂದ ಅಶ್ರುಧಾರೆ ಸುರಿಯಿತು. ಅವರು ಬಾಗಿ ಹಝ್ರತ್ ಪೈಗಂಬರರ ಹಣೆಗೆ ಮುತ್ತು ಕೊಟ್ಟು ಹೇಳಿದರು: "ಅಲ್ಲಾಹನಾಣೆ, ತಮಗೆ ಎರಡು ಮರಣಗಳನ್ನು ಅಲ್ಲಾಹನು ಕೊಡಲಾರನು. ನಿಮ್ಮ ಮರಣದಿಂದ ಲೋಕಕ್ಕೆ ಎಂತಹ ನಷ್ಟ ಉಂಟಾಗಿದೆ ಎಂದರೆ ಯಾವುದೇ ಪ್ರವಾದಿಯ ಮರಣದಿಂದ ಅಂತಹ ನಷ್ಟ ಎಂದೂ ಸಂಭವಿಸಿರಲಿಲ್ಲ. ನೀವು ನಿಮ್ಮ ಗುಣಗಳಿಂದ ಗುರುತಿಸಲ್ಪಟ್ಟಿರುವಿರಿ. ನಿಮ್ಮ ಮಹಿಮೆ ಎಂತಹದ್ದೆಂದರೆ ಯಾವುದೇ ದುಃಖ ಪ್ರಕಟಣೆ ನಿಮ್ಮ ಅಗಲಿಕೆಯ ದುಃಖವನ್ನು ಕಡಿಮೆಗೊಳಿಸಲಾರದು. ನೀವು ಮೃತರಾಗುವುದನ್ನು ತಡೆಯುವುದು ನಮ್ಮ ಶಕ್ತಿ ಸಾಮರ್ಥ್ಯಗಳಿಗೆ ಸಾಧ್ಯವಿರುತ್ತಿದ್ದರೆ ನಾವು ಎಲ್ಲರೂ ಜೀವಾರ್ಪಣೆ ಮಾಡಿ ನಿಮ್ಮ ಮರಣವನ್ನು ತಡೆಗಟ್ಟುತ್ತಿದ್ದೆವು."

ಅವರು ಹೀಗೆ ಹೇಳಿ ಬಟ್ಟೆಯನ್ನು ಮೃತಶರೀರದ ಮೇಲೆ ಹೊದಿಸಿ ಹಝ್ರತ್ ಉಮರ್(ರ) ತನ್ನ ಸಂಗಡಿಗರ ಜೊತೆಗೂಡಿ ಕುಳಿತಿದ್ದ ಸ್ಥಳಕ್ಕೆ ಬಂದು ಹಝ್ರತ್ ಉಮರ್‌ರೊಂದಿಗೆ ಹೇಳಿದರು: "ನೀವು ಸ್ವಲ್ಪ ಹೊತ್ತು ಮೌನವನ್ನವಲಂಬಿಸಿರಿ." ಆದರೆ ಹಝ್ರತ್ ಉಮರ್(ರ) ಅವರ ಮಾತಿಗೆ ಕಿವಿಗೊಡದೆ ತನ್ನ ಹೇಳಿಕೆಗಳನ್ನು ಮುಂದುವರಿಸುತ್ತಿದ್ದರು. ಆಗ ಹಝ್ರತ್ ಅಬೂಬಕರ್(ರ) ಜನರೊಂದಿಗೆ ಹೀಗೆ ಹೇಳ ತೊಡಗಿದರು: "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ವಾಸ್ತವಿಕವಾಗಿಯೂ ನಿಧನ ಹೊಂದಿರುವರು." ಆಗ ಜನರು ಹಝ್ರತ್ ಉಮರ್‌ರವರ ಸಮೀಪದಿಂದ ಬಂದು ಹಝ್ರತ್ ಅಬೂಬಕರ್‌ರವರ ಸುತ್ತುಮುತ್ತು ಜಮಾಯಿಸಿದರು. ಕೊನೆಗೆ ಹಝ್ರತ್ ಉಮರ್(ರ) ಸಹ ಅವರ ಮಾತನ್ನು ಆಲಿಸಬೇಕಾಯಿತು.

ಹಝ್ರತ್ ಅಬೂಬಕರರ್(ರ) ಹೇಳಿದರು:

وَمَا مُحَمَّدٌ إِلَّا رَسُولٌ قَدْ خَلَتْ مِنْ قَبْلِهِ الرُّسُلُ أَفَإِنْ مَاتَ أَوْ قُتِلَ انْقَلَبْتُمْ عَلَىٰ أَعْقَابِكُمْ -

**"ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲಾ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು (ಮುಹಮ್ಮದ್) ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ?" (ಪವಿತ್ರ ಖುರ್‌ಆನ್ 3:145)**

إِنَّكَ مَيِّتٌ وَّإِنَّهُمْ مَّيِّتُونَ -

**"ನೀನು ಖಂಡಿತವಾಗಿಯೂ ಮೃತಪಡುವೆ. ಅವರು ಸಹ ಖಂಡಿತವಾಗಿಯೂ ಮೃತಪಡುವರು." (ಪವಿತ್ರ ಖುರ್‌ಆನ್ 39:31)**

يَا أَيُّهَا النَّاسُ مَنْ كَانَ يَعْبُدُ مُحَمَّدًا فَإِنَّ مُحَمَّدًا قَدْ مَاتَ وَمَنْ كَانَ يَعْبُدُ اللهَ فَإِنَّ اللهَ حَيٌّ لَا يَمُوتُ -

**"ಓ ಜನರೇ, ಯಾರು ಮುಹಮ್ಮದರನ್ನು ಆರಾಧಿಸುತ್ತಿರುವರೋ, ಅವರು ತಿಳಿದುಕೊಳ್ಳಲಿ – ನಿಶ್ಚಯವಾಗಿಯೂ ಅವರು ಮೃತರಾಗಿರುವರು. ಯಾರು ಅಲ್ಲಾಹನನ್ನು ಆರಾಧಿಸುತ್ತಾರೋ ಅವರು ತಿಳಿದುಕೊಳ್ಳಲಿ– ನಿಶ್ಚಯವಾಗಿಯೂ ಅಲ್ಲಾಹನು ಜೀವಂತವಾಗಿರುವನು. ಅವನು ಎಂದೂ ಮೃತನಾಗಲಾರನು." (ಬುಖಾರಿ ಜಿಲ್ದ್ 2, ಬಾಬ್ ಮುನಾಖಿಬ್ ಅಬೂಬಕರ್)**

ಹಝ್ರತ್ ಅಬೂಬಕರ್(ರ) ಪವಿತ್ರ ಖುರ್‌ಆನಿನ ಮೇಲಿನ ಎರಡು ವಚನಗಳನ್ನು ಓದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಮೃತರಾಗಿರುವರು ಎಂದು ಘೋಷಿಸಿದಾಗ ಜನರಿಗೆ ಸತ್ಯವು ಮನವರಿಕೆ ಆಯಿತು. ಅವರು ರೋದಿಸಲು ಪ್ರಾರಂಭಿಸಿದರು. ಹಝ್ರತ್ ಉಮರ್(ರ) ಹೀಗೆ ಹೇಳಿದರು: "ಹಝ್ರತ್ ಅಬೂಬಕರ್ ಪವಿತ್ರ ಖುರ್‌ಆನಿನ ವಚನಗಳನ್ನು ಉಲ್ಲೇಖಿಸಿ ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದರೆಂದು ಸಾಬೀತುಗೊಳಿಸಿದಾಗ ಪವಿತ್ರ ಖುರ್‌ಆನಿನ ಆ ಎರಡು ವಚನಗಳು ಇಂದು ಅವತೀರ್ಣಗೊಂಡ ಹಾಗೆ ನನಗೆ ಭಾಸವಾಯಿತು. ನನ್ನ ತಲೆ ಎತ್ತಿ ಹಿಡಿಯಲು ನನಗೆ ಶಕ್ತಿ ಸಾಲದಾಯಿತು. ನನ್ನ ಹೆಜ್ಜೆಗಳು ತಪ್ಪಿದುವು. ಶೋಕಾತೀರೇಖದಿಂದ ನಾನು ನೆಲಕ್ಕೆ ಬಿದ್ದು ಬಿಟ್ಟೆನು."

ಈ ಹದೀಸಿನಿಂದ ಮೂರು ವಿಷಯಗಳು ಸಾಬೀತಾಗುತ್ತವೆ. ಮೊದಲನೆಯದಾಗಿ, ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ನಿಧನಹೊಂದಿದ ನಂತರ ಶಿಷ್ಯರು ಕೈಗೊಂಡ ಪ್ರಥಮ ನಿರ್ಧಾರವೇನೆಂದರೆ, ಹಝ್ರತ್ ಪೈಗಂಬರರಿಗೆ ಮೊದಲು ಆಗಮಿಸಿದ ಎಲ್ಲಾ ಪ್ರವಾದಿಗಳು ಮೃತರಾಗಿರುವರು. ಶಿಷ್ಯರಲ್ಲಿ ಯಾರಿಗಾದರೂ ಕೆಲವು ಪ್ರವಾದಿಗಳು ನಿಧನಹೊಂದಿಲ್ಲ ಎಂಬ ಶಂಕೆ ಇರುತ್ತಿದ್ದರೆ ಅವರು ಕೂಡಲೆ ಎದ್ದು ನಿಂತು ಹೇಳುತ್ತಿದ್ದರು: "ನೀವು ಹೇಳುವುದು ಸರಿಯಲ್ಲ. ಹಝ್ರತ್ ಈಸಾ ಮಸೀಹ್(ಅ) ಆರುನೂರು ವರ್ಷಗಳಿಂದ ಆಕಾಶದಲ್ಲಿ ಜೀವಂತವಾಗಿ ಕುಳಿತಿರುವರು. ಆದುದರಿಂದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರಿಗಿಂತ ಮೊದಲು ಆಗಮಿಸಿದ ಎಲ್ಲ ಪ್ರವಾದಿಗಳು ಮೃತರಾಗಿರುವರೆಂದು ಹೇಳುವುದು ಸರಿಯಲ್ಲ. ಏಕೆಂದರೆ ಅವರಲ್ಲಿ ಕೆಲವರು ಜೀವಂತವಾಗಿರುವಾಗ ಹಝ್ರತ್ ಪೈಗಂಬರ್(ಸ) ಜೀವಂತವಾಗಿ ಏಕೆ ಇರಬಾರದು?"

ಎರಡನೆಯದಾಗಿ, ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರಿಗಿಂತ ಮುಂಚೆ ಆಗಮಿಸಿದ ಪ್ರವಾದಿಗಳು ಮೃತರಾಗಿರುವರು ಎಂಬುದರ ಬಗ್ಗೆ ಅವರ ದೃಢ ವಿಶ್ವಾಸ ಅವರ ಸ್ವಂತ ಯೋಚನೆಯ ಫಲವಾಗಿ ಉಂಟಾದುದಲ್ಲ. ಅವರು ಅದಕ್ಕೆ ಆಧಾರವಾಗಿ ಪವಿತ್ರ ಖುರ್‌ಆನ್ ವಚನಗಳನ್ನು ಮುಂದಿರಿಸುತ್ತಿದ್ದರು. ವಾಸ್ತವಿಕಾಂಶ ಹೀಗೆ ಆಗಿರಲಿಲ್ಲವಾದರೆ ಯಾರಾದರೊಬ್ಬ ಶಿಷ್ಯ ಹೇಳುತ್ತಿದ್ದರು: "ಎಲ್ಲಾ ಮೊದಲಿನ ಪ್ರವಾದಿಗಳು ಮೃತರಾಗಿರುವುದು ಸತ್ಯವಾಗಿದೆ. ಆದರೆ ಪವಿತ್ರ ಖುರ್‌ಆನ್ ವಚನಗಳಿಂದ ಹಾಗೆ ಸಾಬೀತಾಗುವುದಿಲ್ಲ."

ಹಝ್ರತ್ ಅಬೂಬಕರ್[ರ] **"ಖದ್ ಖಲತ್ ಮಿನ್ ಖಬ್ಲಿಹಿರ್ರುಸುಲ್"** ಎಂಬ ಪವಿತ್ರ ಖುರ್‌ಆನಿನ ವಚನದಿಂದ, ಮೊದಲು ಆಗಮಿಸಿದ ಎಲ್ಲ ಪ್ರವಾದಿಗಳು ಮೃತರಾದರೆಂದು ಸಾಕ್ಷ್ಯಧಾರ ನೀಡಿದುದು ಮತ್ತು ಶಿಷ್ಯರೆಲ್ಲರೂ ಆ ಸಾಕ್ಷ್ಯಾಧಾರವನ್ನು ಅಂಗೀಕರಿಸಿದುದು ಮತ್ತು ಪವಿತ್ರ ಖುರ್‌ಆನಿನ ಆ ವಚನವನ್ನು ಮಾರ್ಗಗಳಲ್ಲೂ ಗಲ್ಲಿಗಳಲ್ಲೂ ಉಚ್ಚರಿಸುತ್ತಾ ತಿರುಗಾಡಿದುದು ಅವರೆಲ್ಲರೂ ಈ ಸಾಕ್ಷ್ಯಧಾರದ ಬಗ್ಗೆ ಒಮ್ಮತ ಹೊಂದಿದ್ದರೆಂದು ಸ್ಪಷ್ಟವಾಗುತ್ತದೆ.

ಮೂರನೆಯ ವಿಷಯವೇನೆಂದರೆ, ಬೇರೆ ಯಾವ ಪ್ರವಾದಿ ಮೃತರಾಗಿರುವರು ಅಥವಾ ಮೃತರಾಗಿಲ್ಲ ಎಂಬ ಬಗ್ಗೆ ಅವರಿಗೆ ದೃಢವಿಶ್ವಾಸ ಇತ್ತೋ ಇಲ್ಲವೋ ಎಂಬುದು ನಮಗೆ ತಿಳಿಯದು. ಆದರೆ ಹಝ್ರತ್ ಈಸಾ ಮಸೀಹ್[ಅ] ಜೀವಂತರಾಗಿರುವರು ಎನ್ನುವುದರ ಬಗ್ಗೆ ಅವರಿಗೆ ನಿಶ್ಚಯವಾಗಿಯೂ ಏನೂ ತಿಳಿದಿರಲಿಲ್ಲ. ಏಕೆಂದರೆ ಎಲ್ಲಾ ವಿಶ್ವಾಸಾರ್ಹ ಹದೀಸು ಮತ್ತು ವಿಶ್ವಾಸಾರ್ಹ ವರದಿಗಳಿಂದ ಹೀಗೆ ಸಾಬೀತಾಗುತ್ತದೆ: ಹಝ್ರತ್ ಉಮರ್[ರ] ತೀವ್ರವಾಗಿ ಭಾವೋದ್ವೇಗಪೀಡಿತರಾಗಿ ಅಲ್ಲಿದ್ದ ಶಿಷ್ಯರೊಂದಿಗೆ (ಸಹಾಬರೊಂದಿಗೆ) ಹೇಳುತ್ತಿದ್ದರು: "ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಮೃತರಾದರೆಂದು ಯಾರಾದರೂ ಹೇಳುವುದಾದರೆ ನಾನು ಅವನ ತಲೆಯನ್ನು ಕಡಿಯುವೆನು." ಆಗ ಅವರು ತನ್ನ ಮಾತಿಗೆ ಸಾಕ್ಷ್ಯಾಧಾರವಾಗಿ ಹಝ್ರತ್ ಮೂಸಾ[ಅ] ನಲ್ವತ್ತು ದಿವಸಗಳ ಕಾಲ ಪರ್ವತದ ಕಡೆಗೆ ಹೋದ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ಆದರೆ ಹಝ್ರತ್ ಈಸಾ ಮಸೀಹ್[ಅ] ಆಕಾಶಕ್ಕೆ ಏರಿಹೋದ ಬಗ್ಗೆ ಒಮ್ಮೆಯೂ ಅವರು ಹೇಳಲಿಲ್ಲ. ಹಝ್ರತ್ ಪೈಗಂಬರರ ಶಿಷ್ಯರು ಹಝ್ರತ್ ಈಸಾ ಮಸೀಹ್[ಅ] ಆಕಾಶದಲ್ಲಿ ಜೀವಂತವಾಗಿ ಕುಳಿತಿದ್ದಾರೆ ಎಂದು ನಂಬಿರುತ್ತಿದ್ದರೆ ಹಝ್ರತ್ ಉಮರ್[ರ] ಮತ್ತು ಅವರೊಂದಿಗೆ ಸಹಮತ ಹೊಂದಿದ ಇತರ ಶಿಷ್ಯರು ಈ ವಿಷಯವನ್ನು ತಮ್ಮ ಯೋಚನೆಗೆ ಸಹಾಯಕವಾಗಿ ಉಲ್ಲೇಖಿಸುತ್ತಿರಲಿಲ್ಲವೇ? ಅವರು ಹಝ್ರತ್ ಮೂಸಾರಿಗೆ ಸಂಬಂಧಿಸಿದ ಘಟನೆಯಿಂದ ಸಾಕ್ಷ್ಯಾಧಾರ ನೀಡಿದುದು ಮತ್ತು ಹಝ್ರತ್ ಈಸಾ ಮಸೀಹರಿಗೆ ಸಂಬಂಧಿಸಿದ ತಥಾಕಥಿತ ಸಂಭವದ ಉಲ್ಲೇಖ ಮಾಡದುದು ಸೂಚಿಸುವುದೇನೆಂದರೆ ಅವರೆಲ್ಲರೂ ಹಝ್ರತ್ ಈಸಾ ಮಸೀಹ್‌ರಿಗೆ ಸಂಬಂಧಿಸಿ ಅಂತಹ ಸಂಭವದ ಬಗ್ಗೆ ಅಜ್ಞಾತರಾಗಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರರ ಶಿಷ್ಯರು ಮಾತ್ರವಲ್ಲ ಅವರ ಅಹ್ಲೆ ಬೈತ್ (ಕುಟುಂಬದ ಸದಸ್ಯರು) ಸಹ ಹಝ್ರತ್ ಈಸಾ ಮಸೀಹರು ಮೃತರಾಗಿರುವರೆಂಬ ಬಗ್ಗೆ ಒಮ್ಮತ ಸೂಚಿಸಿರುವರು.

ತಬಖಾತೆ ಇಬ್ನು ಸಅದ್ ಎಂಬ ಗ್ರಂಥದ ಮೂರನೆಯ ಸಂಪುಟದಲ್ಲಿ ಹಝ್ರತ್ ಅಲಿ[ರ] ನಿಧನಹೊಂದಿದಾಗ ಹಝ್ರತ್ ಇಮಾಮ್ ಹಸನ್[ರ] ಹೀಗೆ ಹೇಳಿದರೆಂದು ಉಲ್ಲೇಖಿಸಲಾಗಿದೆ:

أَيُّهَا النَّاسُ قَدْ قُبِضَ اللَّيْلَةَ رَجُلٌ لَمْ يَسْبِقْهُ الْأَوَّلُوْنَ وَلَا يُدْرِكُهُ
الْآخِرُوْنَ - قَدْ كَانَ رَسُوْلُ اللّٰهِ يَبْعَثُ الْمَبْعَثَ فَيَكْتَنِفُهُ جِبْرَائِيْلُ
مِنْ يَمِيْنِهٖ، وَمِيْكَائِيْلُ مِنْ شِمَالِهٖ، فَلَا يَنْثَنِيْ حَتّٰى يَفْتَحَ اللّٰهُ لَهٗ،
وَمَا تَرَكَ إِلَّا سَبْعَ مِائَةِ دِرْهَمٍ، أَرَادَ أَنْ يَّشْتَرِيَ بِهَا خَادِمًا،
وَلَقَدْ قُبِضَ فِي اللَّيْلَةِ الَّتِيْ عُرِجَ فِيْهَا بِرُوْحِ عِيْسَى ابْنِ مَرْيَمَ لَيْلَةَ
سَبْعٍ وَّعِشْرِيْنَ مِنْ رَمَضَانَ -

**"ಓ ಜನರೇ, ಈ ದಿನ ರಾತ್ರಿ ಎಂತಹ ಮಹಾನುಭಾವರು ಮೃತರಾಗಿರುವರು ಎಂದರೆ ಅವರಿಗೆ ಸಂಬಂಧಿಸಿದ ಕೆಲವು ವಿಷಯಗಳಿಗೆ ಹಿಂದಿನವರು ತಲಪಲಿಲ್ಲ. ಮುಂದೆ ಬರುವವರು ಕೂಡ ತಲಪಲಾರರು. ಹಝ್ರತ್ ರಸೂಲುಲ್ಲಾಹ್[ಸ] ಅವರನ್ನು ಯುದ್ಧಕ್ಕೆ ಕಳುಹಿಸುವಾಗ ಜಿಬ್ರೀಲ್ ಅವರ ಬಲಭಾಗದಲ್ಲೂ ಮೀಕಾಯೀಲ್ ಅವರ ಎಡಭಾಗದಲ್ಲೂ ಇರುತ್ತಿದ್ದರು. ಅವರು ಯುದ್ಧದಲ್ಲಿ ಜಯಗಳಿಸದೆ ಮರಳಿ ಬರುತ್ತಿರಲಿಲ್ಲ. ಅವರು ಕೇವಲ ಏಳುನೂರು ದಿರ್‌ಹಮ್ ತನ್ನ ಸ್ವತ್ತಾಗಿ ಬಿಟ್ಟುಹೋಗಿರುವರು. ಅದನ್ನು ಕೊಟ್ಟು ಒಬ್ಬ ಸೇವಕನನ್ನು ಖರೀದಿಸಲು ಅವರು ಉದ್ದೇಶಿಸಿದ್ದರು. ಯಾವ ರಾತ್ರಿ ಈಸಬ್ನು ಮರ್‌ಯಮ್‌ರವರ ಆತ್ಮ ಆಕಾಶದ ಕಡೆಗೆ ಎತ್ತಲ್ಪಟ್ಟಿತೋ, ಎಂದರೆ ರಮಝಾನ್ ತಿಂಗಳ ದಿನಾಂಕ 27ರ ರಾತ್ರಿ ಅವರು ಸಹ ಮೃತರಾದರು."**

ಹಝ್ರತ್ ಈಸಾ ಮಸೀಹ್[ಅ] ನಿಧನಹೊಂದಿರುವರು ಎನ್ನುವುದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಅಹ್ಲೆ ಬೈತ್ (ಕುಟುಂಬದವರು) ನಂಬಿಕೆ ಹೊಂದಿದ್ದರು ಎಂದು ಮೇಲೆ ಬರೆದ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. ಅವರು ಆ ರೀತಿ ನಂಬಿಕೆ ಹೊಂದಿರಲಿಲ್ಲವಾದರೆ ಇಮಾಮ್ ಹಸನ್[ರ] ಮೇಲಿನಂತೆ ಹೇಳುತ್ತಿರಲಿಲ್ಲ. ಹಝ್ರತ್ ಈಸಾ ಮಸೀಹರ ಆತ್ಮ ಆಕಾಶಕ್ಕೆ ಎತ್ತಲ್ಪಟ್ಟ ದಿನಾಂಕದ ರಾತ್ರಿ ಹಝ್ರತ್ ಅಲಿ[ರ] ಸಹ ಮೃತರಾದರೆಂದು ಅವರು ಹೇಳುತ್ತಾರೆ.

ಹಝ್ರತ್ ರಸೂಲುಲ್ಲಾಹ್‌ರ[ಸ] ಶಿಷ್ಯರು ಮತ್ತು ಅವರ ಕುಟುಂಬಕ್ಕೆ ಸೇರಿದವರು (ಅಹ್ಲೆ ಬೈತ್) ಮಾತ್ರವಲ್ಲ, ಅನಂತರ ಅನೇಕ ಹಿರಿಯ ವಿದ್ವಾಂಸರು ಸಹ ಹಝ್ರತ್ ಈಸಾ ಮಸೀಹ್[ಅ] ಮೃತರಾಗಿರುವರು ಎಂದು ನಿಶ್ಚಯವಾಗಿಯೂ ನಂಬಿದ್ದರು. ಏಕೆಂದರೆ ಅವರು ಪವಿತ್ರ ಖುರ್‌ಆನ್, ಹಝ್ರತ್ ಮುಹಮ್ಮದ್ ಪೈಗಂಬರರ ಹೇಳಿಕೆ, ಅವರ ಶಿಷ್ಯರ ಅಭಿಪ್ರಾಯ ಮತ್ತು ಅವರ ಕುಟುಂಬದವರ ಅಭಿಪ್ರಾಯಗಳನ್ನು ಗೌರವಿಸುವವರಾಗಿದ್ದರು. ಅವರು ಈ ವಿಷಯವನ್ನು ಸಾಮಾನ್ಯವೆಂದು ಪರಿಗಣಿಸಿದುದರಿಂದ ಅವರ ಹೇಳಿಕೆಗಳು ದಾಖಲಿಸಲ್ಪಟ್ಟಿಲ್ಲ. ಆದರೆ ನಮಗೆ ದೊರೆತ ದಾಖಲೆಗಳ ಪ್ರಕಾರ ಅವರು ಹಝ್ರತ್ ಈಸಾ ಮಸೀಹ್[ಅ] ಮೃತರಾಗಿರುವರೆಂದೇ ನಂಬುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ, ಮಜ್‌ಮಉಲ್ ಬಹಾರ್ ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ:

**ಖಾಲ ಮಾಲಿಕುನ್ ಮಾತ**

**ಹಝ್ರತ್ ಈಸಾ ಮಸೀಹ್[ಅ] ಮೃತರಾಗಿರುವರು ಎಂದು ಇಮಾಂ ಮಾಲಿಕ್[ರಹ್] ಹೇಳಿರುತ್ತಾರೆ.**

ಒಟ್ಟಾರೆ ಹೇಳುವುದಾದರೆ, ಪವಿತ್ರ ಖುರ್‌ಆನ್, ಹದೀಸ್ ಮತ್ತು ಹಝ್ರತ್ ಪೈಗಂಬರರ ಶಿಷ್ಯರ ಒಮ್ಮತಾಭಿಪ್ರಾಯ (ಇಜ್‌ಮಾಅ್) ಮತ್ತು ಪೈಗಂಬರರ ಕುಟುಂಬದವರ ಹೇಳಿಕೆಗಳು ನಮ್ಮ ನಂಬಿಕೆಯನ್ನು ದೃಢೀಕರಿಸುತ್ತವೆ. ಅಂದರೆ, ಹಝ್ರತ್ ಈಸಾ ಮಸೀಹ್[ಅ] ನಿಧನ ಹೊಂದಿರುವರು ಎಂದು ತಿಳಿದು ಬರುತ್ತದೆ.

ಆದುದರಿಂದ ಹಝ್ರತ್ ಈಸಾ ಮಸೀಹ್[ಅ] ನಿಧನ ಹೊಂದಿದರೆಂಬ ನಂಬಿಕೆ ಹೊಂದಿದ ನಾವು ಅವರನ್ನು ಅವಮಾರ್ಯಾದೆಗೊಳಿಸುತ್ತೇವೆ ಹಾಗೂ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ನು ನಿರಾಕರಿಸುತ್ತೇವೆ ಎಂದು ನಮ್ಮ ಮೇಲೆ ದೋಷಾರೋಪಮಾಡುವುದು ಸರಿಯಲ್ಲ. ನಾವು ಹಝ್ರತ್ ಈಸಾ ಮಸೀಹರನ್ನು[ಅ] ಅಪಮಾನಿಸುವುದಿಲ್ಲ. ನಾವು ಈ ನಂಬಿಕೆ ಮೂಲಕ ಅಲ್ಲಾಹನ ಏಕತ್ವವನ್ನು ಸ್ಥಾಪಿಸುತ್ತೇವೆ.

*(31ನೇ ಪುಟಕ್ಕೆ.....)*

# ಮುಹಮ್ಮದ್ ಪೈಗಂಬರ್(ಸ) ಮತ್ತು ಧರ್ಮ ಸೌಹಾರ್ದ

☆ ಮೌಲವಿ ಎಸ್. ನಾಸಿರ್ ಅಹ್ಮದ್

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ:

**"ಎಲೈ ವಿಶ್ವಾಸಿಗಳೇ, ಒಂದು ಜನಾಂಗ ಇನ್ನೊಂದು ಜನಾಂಗವನ್ನು ಪರಿಹಾಸ ಮಾಡದಿರಲಿ. (ಒಂದು ವೇಳೆ) ಅವರು (ಪರಿಹಾಸಕ್ಕೀಡಾದವರು) ಇವರಿಗಿಂತ (ಪರಿಹಾಸ ಮಾಡುವವರಿಗಿಂತ) ಉತ್ತಮರಾಗಿರಬಹುದು." (49:12)**

**"ಎಲೈ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (49:14)**

ಜಾತಿ. ಮತ ವ್ಯತ್ಯಾಸವಿಲ್ಲದೆ, ಅಂದರೆ ಮನುಷ್ಯರು ಪರಸ್ಪರ ಸಾಹೋದರ್ಯ, ಸಮಭಾವನೆ ಮತ್ತು ಸಮತ್ವದ ಶಾಂತಿ ಮಾರ್ಗವನ್ನು ಇಸ್ಲಾಂ ಸಿದ್ಧಾಂತಿಸುತ್ತದೆ. ಹೃದಯ ಪರಿವರ್ತನೆ ಮೂಲಕ ಲೋಕವನ್ನು ಜಯಿಸಲು ಇಸ್ಲಾಂ ಕಲಿಸುತ್ತದೆ. ಉಗ್ರವಾದ, ಭೀಕರ ಕೃತ್ಯ ಇಸ್ಲಾಮಿನ ಮಾರ್ಗವಲ್ಲ. ಇಸ್ಲಾಮಿನ ಈ ಮಹತ್ತರ ಅಧ್ಯಾಪನೆಗಳನ್ನು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಜೀವನದಲ್ಲಿ ತೋರಿಸಿಕೊಟ್ಟರು. ಹಝ್ರತ್ ಪೈಗಂಬರ್(ಸ) ಹೇಳಿದರು: "ಜನರೇ, ಅಲ್ಲಾಹನು ನಿಮ್ಮ ಮೇಲೆ ಕರುಣೆ ತೋರಿಸಬೇಕಾದರೆ ನೀವು ಇತರರೊಡನೆ ಕರುಣೆ ತೋರಿಸಬೇಕು." ಅಂದರೆ, ಜಾತಿ, ಮತ, ವರ್ಗ, ವರ್ಣ ವ್ಯತ್ಯಾಸವಿಲ್ಲದೆ ಎಲ್ಲರೂ ಅಲ್ಲಾಹನ ಸೃಷ್ಟಿ ಎಂದು ತಿಳಿದುಕೊಂಡು ನಾವು ಇತರರೊಡನೆ ದಯೆ, ಅನುಕಂಪ ತೋರಿಸಿದರೆ ನಮ್ಮ ಮೇಲೆ ಅಲ್ಲಾಹನು ಕರುಣೆ ತೋರಿಸುವನು.

ಯಾವುದೇ ಜನರ ಮೇಲಿರುವ ಶತ್ರುತ್ವ ಕಾರಣ ಅವರೊಡನೆ ಅನ್ಯಾಯವಾಗಿ ವರ್ತಿಸಬಾರದೆಂದೂ ಅನ್ಯ ಸಮುದಾಯದವರು ಆರಾಧಿಸುವ ದೈವಗಳನ್ನು ಅವಹೇಳಿಸಬಾರದೆಂದೂ ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ಹಝ್ರತ್ ಪೈಗಂಬರ್(ಸ) ನಮಗೆ ಕಲಿಸಿಕೊಟ್ಟರು.

ತನಗೆ ಅಲ್ಲಾಹನು ತಿಳಿಸಿದ ಪ್ರಕಾರ ಜಗತ್ತಿನಲ್ಲಿ 1 ಲಕ್ಷದ 24 ಸಾವಿರ ದೇವ ಸಂದೇಶವಾಹಕರು ಆಗಮಿಸಿದ್ದಾರೆಂದು ಹಝ್ರತ್ ಪೈಗಂಬರ್(ಸ) ನುಡಿದು, ಅವರ ಮಧ್ಯೆ ಏನೂ ತಾರತಮ್ಯ ಮಾಡದೆ ಎಲ್ಲರನ್ನೂ ಅಂಗೀಕರಿಸಿ ಗೌರವಿಸಬೇಕೆಂದು ಬೋಧಿಸಿದರು. ಇದು ಧರ್ಮ ಸೌಹಾರ್ದಕ್ಕೆ ಮಹತ್ತರವಾದ ಒಂದು ಕೊಡುಗೆಯಾಗಿದೆ.

ಹಝ್ರತ್ ಪೈಗಂಬರ್(ಸ) ತನ್ನ ಮಸೀದಿಯಲಿ ಅನ್ಯ ಮತದವರಿಗೂ ಏಕದೇವಾರಾಧನೆಯ ಅವಕಾಶವನ್ನು ನೀಡಿದ್ದರು. ಒಮ್ಮೆ ಪೈಗಂಬರರೊಡನೆ ವಾದ-ವಿವಾದ ಮಾಡಲು ನಜರಾನಿನಿಂದ ಬಂದ ಕ್ರೈಸ್ತ ಧರ್ಮ ಪಂಡಿತರಿಗೆ, ಮಸ್‌ಜಿದ್ ನಬವಿಯಲ್ಲಿ ಆರಾಧನೆ ಮಾಡಲು ಹಝ್ರತ್ ಪೈಗಂಬರ್(ಸ) ಅನುಮತಿ ನೀಡಿದ್ದರು.

ಜಾತಿ ವ್ಯತ್ಯಾಸವಿಲ್ಲದೆ ಇತರರನ್ನು ಗೌರವಿಸಲು ತನ್ನ ಆದರ್ಶ ಜೀವನ ಮಾದರಿ ಮೂಲಕ ಹಝ್ರತ್ ಪೈಗಂಬರ್(ಸ) ನಮಗೆ ಕಲಿಸಿದರು. ಒಮ್ಮೆ ಮದೀನದ ಬೀದಿಯಲ್ಲಿ ಒಂದು ಶವ ಸಂಸ್ಕಾರದ ಮೆರವಣಿಗೆ ಹೋಗುತ್ತಿತ್ತು. ಅದನ್ನು ಕಂಡು ಹಝ್ರತ್ ಪೈಗಂಬರ್(ಸ) ಆದರದಿಂದ ಎದ್ದು ನಿಂತರು. ಅದನ್ನು ಕಂಡ ಒಬ್ಬ ಶಿಷ್ಯ ಹೇಳಿದರು: ಪೈಗಂಬರರೇ, ಅದು ಒಬ್ಬ ಯಹೂದಿಯ ಶವ ಸಂಸ್ಕಾರ ಮೆರವಣಿಗೆಯಾಗಿದೆ" ಆಗ ಪೈಗಂಬರ್(ಸ) "ಆತನು ಸಹ ಮನುಷ್ಯನಲ್ಲವೇ?" ಎಂದು ಕೇಳಿದರು.

ಅಂದರೆ, ಧರ್ಮ ಬೇರೆ ಆಗಿದ್ದರೂ ಮನುಷ್ಯರೆಂಬ ನೆಲೆಯಲ್ಲಿ ನಾವು ಎಲ್ಲರನ್ನೂ ಒಬ್ಬನೇ ದೇವನ ಸೃಷ್ಟಿಗಳೆಂದು ಗೌರವಿಸಬೇಕು.

ಹಜ್ಜತುಲ್ ವಿದಾ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ನೀಡಿದ ಪ್ರವಚನ ಅವಿಸ್ಮರಣೀಯವಾಗಿದೆ. ಪೈಗಂಬರ್(ಸ) ಹೇಳಿದರು:

"ಓ ಜನರೇ, ನಿಮ್ಮ ಪ್ರಭು ಒಬ್ಬನೇ ಆಗಿದ್ದಾನೆ. ನಿಮ್ಮ ಪಿತ (ಆದಂ) ಒಬ್ಬರೇ ಆಗಿದ್ದಾರೆ. ಆಲಿಸಿರಿ, ಒಬ್ಬ ಅರಬಿಗೆ ಅರಬಿಯೇತರನ ಮೇಲೆ, ಒಬ್ಬ ಅರಬಿಯೇತರನಿಗೆ ಅರಬಿಯನ ಮೇಲೆ ಅಥವಾ ಒಬ್ಬ ಬಿಳಿಯನಿಗೆ ಕರಿಯನ ಮೇಲೆ, ಒಬ್ಬ ಕರಿಯನಿಗೆ ಬಿಳಿಯನ ಮೇಲೆ ಯಾವುದೇ ಶ್ರೇಷ್ಠತೆ ಇಲ್ಲ. ನೀವು ಯಾವುದೇ ಗೋತ್ರ, ವರ್ಗ, ವರ್ಣದವರಾದರೂ ಮನುಷ್ಯರೆಂಬ ನೆಲೆಯಲ್ಲಿ ನೀವು ಸಮಾನರು." ಹೀಗೆ ಹೇಳುತ್ತಾ ಅವರು ತನ್ನ ಎರಡು ಕೈಗಳ ಬೆರಳುಗಳನ್ನು ಪರಸ್ಪರ ಸೇರಿಸಿಕೊಂಡು ನುಡಿದರು - "ಯಾವ ರೀತಿ ಈ ಎರಡು ಕೈಗಳ ಬೆರಳುಗಳು ಪರಸ್ಪರ ಸಮಾನವಾಗಿವೆಯೋ ಅದೇ ರೀತಿ ಮನುಷ್ಯ ವಂಶವೆಂಬ ನೆಲೆಯಲ್ಲಿ ನೀವೆಲ್ಲರೂ ಪರಸ್ಪರ ಸಮಾನರು. ನಿಮ್ಮಲ್ಲಿ ಯಾರಿಗೂ ಇತರರಿಗಿಂತ ಶ್ರೇಷ್ಠತೆ ಇಲ್ಲ."

ನೋಡಿರಿ, ಹಝ್ರತ್ ಪೈಗಂಬರರ ಈ ಅಧ್ಯಾಪನೆಗಳಿಂದೆಲ್ಲ, ಅವರು ಧರ್ಮ ಸಹೋದರ್ಯ, ಮನುಷ್ಯ ಸಮತ್ವ ಮತ್ತು ಸಮ ಭಾವನೆಯ ಆದರ್ಶ ಮಾದರಿ ಪುರುಷರಾಗಿದ್ದರೆಂದು ಮನಗಾಣ ಬಹುದಾಗಿದೆ. ■

*(......... 30ನೇ ಪುಟದಿಂದ)*

ನಾವು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರ(ಸ) ಗೌರವವನ್ನು ಸಾಬೀತುಗೊಳಿಸುತ್ತೇವೆ. ಅದಲ್ಲದೆ ನಾವು ಹಝ್‌ರತ್ ಈಸಾ ಮಸೀಹರ(ಅ) ಸೇವೆ ಸಹ ಮಾಡುತ್ತೇವೆ. ಏಕೆಂದರೆ ಅವರಿಗೆ ಉನ್ನತ ಸ್ಥಾನ ನೀಡಿ ಅಲ್ಲಾಹನ ಏಕತ್ವಕ್ಕೆ ಭಂಗ ಉಂಟುಮಾಡುವುದನ್ನೂ ಬಹು ದೇವಾರಾಧನೆಗೆ ಪ್ರೋತ್ಸಾಹ ನೀಡಿ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹರ(ಸ) ಗೌರವಕ್ಕೆ ಹಾನಿ ಉಂಟಾಗುವುದನ್ನೂ ಅವರು ಖಂಡಿತವಾಗಿಯೂ ಇಷ್ಟಪಡಲಾರರು.

ನಮ್ಮ ವಿರೋಧಿಗಳು ಮಾಡುವ ಆಕ್ಷೇಪದಲ್ಲಿ ಹುರುಳಿದೆಯೇ ಇಲ್ಲವೋ ಎಂದು ನೀವು ಸ್ವತಃ ಯೋಚಿಸಿರಿ.

ನಮ್ಮ ವಿರುದ್ಧ ಕೋಪ ಹೊಂದಲು ಅವರಿಗೆ ಅಧಿಕಾರವಿದೆಯೋ ಅಥವಾ ಅವರ ವಿರುದ್ಧ ಕೋಪಹೊಂದಲು ನಮಗೆ ಅಧಿಕಾರವಿದೆಯೋ ಎಂಬುದನ್ನು ಪರಿಶೀಲಿಸಿರಿ.

ಅವರು ನಮ್ಮ ದೇವನಿಗೆ ಸಹಭಾಗಿಗಳನ್ನು ಸೃಜಿಸಿರುವರು. ಅವರು ನಮ್ಮ ಪ್ರವಾದಿ ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಅಪಮಾನ ಮಾಡಿರುವರು. ಆ ವಿರೋಧಿಗಳು ನಮ್ಮ ಧರ್ಮಕ್ಕೆ ಸೇರಿದವರಾದರೂ ಶತ್ರುಗಳ ಹಾಗೆ ನಮ್ಮ ಮೇಲೆ ಆಕ್ರಮಣ ಮಾಡಿರುವರು. ●

# ಮುಸ್ಲಿಂ ಬಹುಜನರೇ, ಗಮನಿಸಿರಿ.......

ಅರೇಬಿಯಾದ ಆಕಾಶದಡಿಯಲ್ಲಿ ಅಸಾಮಾನ್ಯವಾದೊಂದು ಪ್ರಭಾವಲಯ ಪ್ರತ್ಯಕ್ಷಗೊಂಡಿತು! ಲೋಕಕ್ಕೆಲ್ಲ ಕಾರುಣ್ಯವಾದ ಪ್ರವಾದಿ ಶ್ರೇಷ್ಠ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನವಾಗಿತ್ತು ಅದು! ಆ ಮಹಾತ್ಮರ ಮೂಲಕ ಅಲ್ಲಾಹು ಲೋಕಕ್ಕೆ ನೀಡಿದ ವರದಾನವಾಗಿತ್ತು ಇಸ್ಲಾಂ ಧರ್ಮ. ಕತ್ತಲೆಯ ಯುಗವೆಂದು ಚರಿತ್ರೆಯಲ್ಲಿ ಬಣ್ಣಿಸಲಾದ ಧಾರ್ಮಿಕ ಅಧಃಪತನದ ಆ ಕಲುಷಿತ ಕಾಲ ಘಟ್ಟದಲ್ಲಿ ತಾಂಡವವಾಡುತ್ತಿದ್ದ ಸಾಮೂಹಿಕ ಕೆಡುಕುಗಳ ವಿರುದ್ಧವಾಗಿ ಪ್ರತಿಕ್ರಯಿಸಿದ ಇಸ್ಲಾಂ ಧರ್ಮ ಸಿದ್ಧಾಂತಗಳನ್ನು ಸ್ವಾಗತಿಸಿದ್ದು ಅಗ್ನಿಪರೀಕೆಗಳ ಬೆಂಕಿ ಜ್ವಾಲೆಯಾಗಿತ್ತು! ಸಂಪೂರ್ಣ ಪ್ರತಿಕೂಲ ಪರಿಸ್ಥಿತಿಯಲ್ಲಿ ಆದಿ ಕಾಲದ ಮುಸ್ಲಿಮರು ಅನುಭವಿಸಬೇಕಾದ ತ್ಯಾಗ ಮತ್ತು ಸಹನೆಯ ಶೈಶವಾಸ್ಥೆಯಲ್ಲಿ ಆಶ್ವಾಸನೆ ದೊರೆತದ್ದು "ನಾನು ಮತ್ತು ನನ್ನ ಸಂದೇಶವಾಹಕರು ಜಯಿಸುವೆವು" ಎಂಬ ಅಲ್ಲಾಹನ ವಾಗ್ದಾನವಾಗಿತ್ತು.

ಕಾಲಾಂತರದಲ್ಲಿ ಇಸ್ಲಾಮಿಕ ಸಂದೇಶಗಳು ಕ್ರಮಾನುಗತವಾಗಿ ಅರೇಬಿಯಾದ ಗಡಿದಾಟಿ ಜಗತ್ತಿನಲ್ಲೆಲ್ಲೂ ವ್ಯಾಪಿಸಿತು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದ ನಂತರ ಪ್ರಥಮದ ನಾಲ್ವರು ಖಲೀಫರು (ಖುಲಫಾಉರ್ರಾಶಿದೀನ್) ಇಸ್ಲಾಮಿನ ಪ್ರತಿನಿಧಿಗಳಾಗಿ ಆಯ್ಕೆಗೊಂಡು, ಅವರ ದಿವ್ಯದೌತ್ಯ ನಿಮಿತ್ತವಾಗಿ ಇಸ್ಲಾಂ ಜಾಗತಿಕವಾಗಿ ಪ್ರತಿಷ್ಠಿಸಲ್ಪಟ್ಟಿತು. ಪ್ರಗತಿಯ ಅನುಗ್ರಹೀತ ಪಥದಲ್ಲಿ ಮುನ್ನೇರುತ್ತಿದ್ದ ಮುಸ್ಲಿಮರಿಗೆ ಅಲ್ಲಾಹು ನೀಡಿದ ಉಪದೇಶ: "ನೀವು ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿಯಿರಿ. ನೀವು ಛಿನ್ನಭಿನ್ನರಾಗಬೇಡಿರಿ" ಎಂದಾಗಿತ್ತು.

ಆದರೆ ಈ ಆಜ್ಞೆ ಉಲ್ಲಂಘಿಸಲ್ಪಟ್ಟಾಗ, ಅವಗಣಿಸಲ್ಪಟ್ಟಾಗ ಮುಸ್ಲಿಂ ಸಮುದಾಯ ಅನೇಕ ಪಂಗಡಗಳಾಗಿ ಚದುರಿ ಹೋಯಿತು. ಅಧಃಪತನದ ಆಳಕ್ಕೆ ತಳ್ಳಲ್ಪಟ್ಟ ಮುಸ್ಲಿಂ ಸಮುದಾಯವನ್ನು ರಕ್ಷಿಸಲಿಕ್ಕೆ ಅನೇಕ ಇಸ್ಲಾಮಿಕ ಸಂಘಟನೆಗಳು ತೀವ್ರಯತ್ನ ಮಾಡಿದರೂ ಅವೆಲ್ಲ ಪರಾಜಯದ ಪಾತಾಳವನ್ನು ದರ್ಶಿಸಿದವು. ಕಾರಣವೇನೆಂದರೆ, ಇಸ್ಲಾಮನ್ನು ರಕ್ಷಿಸುವ ಹೊಣೆಗಾರಿಕೆ ಯಾವುದೇ ಸಂಘಟನೆಗಳಿಗಾಗಲಿ ಧರ್ಮಪಂಡಿತರಿಗಾಗಲಿ ಅಲ್ಲಾಹು ನೀಡಿರಲಿಲ್ಲ. ಇಸ್ಲಾಮನ್ನು ಅಧಃಪತನದಿಂದ ಪಾರುಮಾಡುವ ದೌತ್ಯವನ್ನು ಅಲ್ಲಾಹು ತಮಗೆ ಒಪ್ಪಿಸಿರುವನೆಂಬ ವಾದ ಕೂಡ ಅವರಿಗಿಲ್ಲ. ಎಲ್ಲ ಸಂಘಟನೆಗಳು ತಂತಮ್ಮ ಹೆಸರುಗಳನ್ನು ತಾವೇ ಇಟ್ಟುಕೊಂಡವು. ಹೀಗೆ ಹುಟ್ಟಿದ ಸಂಘಟನೆಗಳು ಇಸ್ಲಾಮನ್ನು ರಕ್ಷಿಸುವುದೆಂಬ ಭವಿಷ್ಯೋಕ್ತಿಯಾಗಲಿ, ಖುರ್‌ಆನಿನ ಶುಭವಾರ್ತೆಯಾಗಲಿ, ಹದೀಸಿನ ನುಡಿಯಾಗಲಿ ಕಂಡುಬರುವುದಿಲ್ಲ!

ಧರ್ಮದ ಪುನರುದ್ಧಾರ ಅಲ್ಲಾಹು ನಿಯೋಗಿಸುವವರ ಮೂಲಕ ಉಂಟಾಗುತ್ತದೆ. ಮನುಷ್ಯ ಮಸ್ತಿಷ್ಕ ರೂಪಕೊಟ್ಟ ಸಂಘಟನೆಗಳಿಂದ ಅದು ಸಾಧ್ಯವಿಲ್ಲ. ಅಂತ್ಯಕಾಲದಲ್ಲಿ ಇಸ್ಲಾಮನ್ನು ಪುನರುದ್ಧಾರಗೊಳಿಸಲು ಮಹ್‌ದಿ ಮಸೀಹ್ ಆಗಮಿಸುವರೆಂದೂ ಅವರ ಮೂಲಕ ಇಸ್ಲಾಮಿಗೆ ವಿಜಯ ಸಿದ್ಧಿಸುವುದೆಂದೂ 1400 ವರ್ಷಗಳಿಗೆ ಮುಂಚೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದಾರೆ. ಅದರೊಂದಿಗೆ, ಇಮಾಂ ಮಹ್‌ದಿ ಆಗಮಿಸುವಾಗ ಪ್ರಕಟಗೊಳ್ಳುವ ಕುರುಹುಗಳ ಕುರಿತು ಸಹ ಭವಿಷ್ಯ ನುಡಿದಿದ್ದಾರೆ ಕೆಲವು ಚಿಹ್ನೆಗಳು ಈ ರೀತಿಯಾಗಿವೆ:

☆ ಇಮಾಂ ಮಹ್‌ದಿ ಮುಹಮ್ಮದೀ ಶರೀಅತನ್ನು ಪುನಃಸ್ಥಾಪಿಸುವರು. (ಬಿಹಾರುಲ್ ಅನ್ವಾರ್ ಸಂಪುಟ 3, ಪುಟ 1117)

☆ ಇಮಾಂ ಮಹ್‌ದಿ ಪರ್ಶಿಯನ್ ವಂಶಕ್ಕೆ ಸೇರಿದವರಾಗಿರುವರು. (ಬುಖಾರಿ -- ಕಿತಾಬುತ್ತಫ್‌ಸೀರ್ ಸೂರಃ ಜುಮುಅ)

☆ "ಕದ್‌ಅ" ಎಂಬ ಹೆಸರಿನಿಂದ ಕರೆಯಲ್ಪಡುವ ಸ್ಥಳದಲ್ಲಿ ಇಮಾಂ ಮಹ್‌ದಿ ಆಗಮಿಸುವರು.
(ಜವಾಹಿರುಲ್ ಅಸ್ರಾರ್ – ಪುಟ 56)

☆ ಅಹ್ಮದ್ ಎಂಬ ಹೆಸರಿನ ಮಹ್‌ದಿಯ ಜೊತೆಗೆ ಇಂಡಿಯಾದಲ್ಲಿ ಒಂದು ಜಮಾಅತ್ ಕಾರ್ಯನಿರತವಾಗುವುದು.
(ಅನ್ನಜ್ಮುಸ್ಸಾಖಿಬ್ – ಭಾಗ 2 ಪುಟ 134)

☆ ಇಮಾಂ ಮಹ್‌ದಿಯ ಆಗಮನ ಕಾಲದಲ್ಲಿ ಜಮಾಅತೆ ಮುಹಮ್ಮದಿಯ್ಯಾದ ಹೆಸರು ಜಮಾಅತೆ ಅಹ್ಮದಿಯ್ಯಾ ಎಂದಾಗಿರುವುದು.
(ರಿಸಾಲ ಮಬ್‌ದಅ್ ಮಆದ್ – ಪುಟ 48 – ಇಮಾಂ ಮುಜದ್ದಿದ್ ಅಲ್‌ಫಸಾನಿ)

☆ ಆ ಕಾಲದ ಧರ್ಮಪಂಡಿತರು ಇಮಾಂ ಮಹ್‌ದಿಯ ಮೇಲೆ ಕುಫ್ರ್ ಫತ್ವ ಹೊರಡಿಸುವರು. (ಹುಜ್ಜುಲ್ ಕಿರಾಮ – ಪುಟ 363)

☆ ತನ್ನ ಸಂದೇಶವನ್ನು ಲೋಕದೆಲ್ಲೆಡೆ ತಲಪಿಸುವ ಒಂದು ದೈವಿಕ ಜಮಾಅತ್ ಮಹ್‌ದಿಗೆ ಲಭಿಸುವುದು.
(ಯನಾಬೀಉಲ್ ಮವದ್ದ – ಪುಟ 132, 133)

☆ ಹಿಜ್‌ರ 1240 ಕಳೆದರೆ ಅಲ್ಲಾಹು ಮಹ್‌ದಿಯನ್ನು ಕಳುಹಿಸುವನು. (ಅನ್ನಜ್ಮುಸ್ಸಾಖಿಬ್ – ಸಂಪುಟ 2)

☆ ನಮ್ಮ ಮಹ್‌ದಿಗೆ ಎರಡು ಕುರುಹುಗಳಿವೆ. ಆಕಾಶಗಳು ಮತ್ತು ಭೂಮಿ ಉಂಟಾದ ಮೊದಲ್ಗೊಂಡು ಯಾರಿಗೋಸ್ಕರವೂ ಇಂತಹ ಒಂದು ಚಿಹ್ನೆ ಗೋಚರಿಸಲಿಲ್ಲ. ಚಂದ್ರನಿಗೆ ರಮಝಾನ್ ಮಾಸದಲ್ಲಿ ಅದರ ಪ್ರಥಮ ರಾತ್ರಿಯಲ್ಲಿ (ಅಂದರೆ 13, 14, 15 ರಾತ್ರಿಗಳಲ್ಲಿ 13ನೇ ರಾತ್ರಿಯಲ್ಲಿ) ಮತ್ತು ಸೂರ್ಯನಿಗೆ ಅದರ ಮಧ್ಯದ ದಿನದಲ್ಲಿ (ಅಂದರೆ 27, 28, 29 ದಿನಗಳಲ್ಲಿ 28ನೇ ದಿನದಲ್ಲಿ) ಗ್ರಹಣವಾಗುವುದು.

☆ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಮುಸ್ಲಿಮರನ್ನು ಸಂಬೋಧಿಸಿ ನುಡಿದರು: "ಎಲೈ ಮುಸ್ಲಿಮರೇ ಮಹ್‌ದಿ ಮಸೀಹ್ ಪ್ರತ್ಯಕ್ಷಗೊಂಡರೆ ನೀವು ಅವರನ್ನು ಸಮೀಪಿಸಿ ಅವರ ಅನುಯಾಯಿಗಳಾಗಿರಿ. ನಿಮಗೆ ಮಂಜುಗಡ್ಡೆಯ ಪರ್ವತದ ಮೇಲೆ ಮಂಡಿಯೂರಿ ಹೋಗಬೇಕಾಗಿ ಬಂದರೂ ಅವರನ್ನು ಭೇಟಿಯಾಗಬೇಕು. ಕಾರಣವೇನೆಂದರೆ, ಅವರು ಅಲ್ಲಾಹನ ಖಲೀಫ ಮತ್ತು ಅವನಿಂದ ಸನ್ಮಾರ್ಗ ಸಿದ್ಧಿಸಿದ ವ್ಯಕ್ತಿಯಾಗಿದ್ದಾರೆ." (ಮುಸ್ನದ್ ಅಹ್ಮದ್‌ಬಿನ್ ಹಂಬಲ್ – ಸಂಪುಟ 6 ಪುಟ 30)

ಇಮಾಂ ಮಹ್‌ದಿಯ ಆಗಮನಕ್ಕೆ ಸಂಬಂಧಿಸಿದ ಕೆಲವು ಕುರುಹುಗಳನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ.

ಹಿಜ್‌ರ 1252ರಲ್ಲಿ (ಕ್ರಿ.ಶ. 1835) ಡಮಾಸ್ಕಸ್‌ಗೆ ಪೂರ್ವಕ್ಕೆ ಒಂದೇ ಅಕ್ಷಾಂಶದಲ್ಲಿರುವ ಪಂಜಾಬಿನ ಗುರುದಾಸಪುರ ಜಿಲ್ಲೆಯಲ್ಲಿ ಖಾದಿಯಾನ್ (ಕದ್‌ಅ) ಎಂಬ ಕುಗ್ರಾಮದಲ್ಲಿ ಆ ಮಹಾತ್ಮ ಹುಟ್ಟಿದರು. ಪರ್ಶಿಯನ್ ಚಕ್ರವರ್ತಿಯಾಗಿದ್ದ ತೈಮೂರ್ ಪಿತೃ ಹಾಜಿ ಬರ್ಲಾಸ್‌ರವರ ಪೀಳಿಗೆಯಲ್ಲಿ ಅವರು ಜನ್ಮತಾಳಿದರು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಂ ಇಸ್ಲಾಮಿನಲ್ಲಿ ವಾಗ್ದಾನ ಮಾಡಲ್ಪಟ್ಟ ಮಹ್‌ದಿ ಮತ್ತು ಮಸೀಹ್ ತಾನೆಂದು ಅಲ್ಲಾಹನ ಆಜ್ಞಾನುಸಾರ ವಾದಿಸಿದರು.

ಮಹ್‌ದಿಯ ಕುರುಹಾಗಿ ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದ ರಮಝಾನಿನ ಚಂದ್ರ-ಸೂರ್ಯ ಗ್ರಹಣಗಳು ನಿಶ್ಚಿತ ಸಮಯದಲ್ಲೇ ಘಟಿಸಿದವು. ಫುಖಹಾಗಳು (ಧರ್ಮಪಂಡಿತರು) ಅವರ ವಿರುದ್ಧ ಕುಫ್ರ್ ಫತ್ವ ಹೊರಡಿಸಿದರು. ಪವಿತ್ರ ಖುರ್‌ಆನಿನಲ್ಲಿ ಮನ್‌ಸೂಖ್ (ಅಸಿಂಧು) ವಚನಗಳಿವೆಯೆಂದು ನಂಬಿ ವಾದಿಸುವವರಾಗಿದ್ದರು ಆ ಕಾಲದ ಧರ್ಮಪಂಡಿತರು. ಆದರೆ ಪವಿತ್ರ ಖುರ್‌ಆನಿನಲ್ಲಿ ಯಾವುದೇ ವಚನವಾಗಲಿ, ಮಾತಾಗಲಿ ಅಸಿಂಧುವಾಗಲಿಲ್ಲವೆಂದೂ ಕಾಗುಣಿತ ವ್ಯತ್ಯಾಸವಾಗಲಿ ಆಗಲಿಲ್ಲವೆಂದೂ ಲೋಕಾಂತ್ಯದವರೆಗೆ ಹಾಗೆ ಆಗಲಿಕ್ಕಿಲ್ಲವೆಂದೂ ಹಝ್ರತ್ ಅಹ್ಮದ್(ಅ) ಘಂಟಾಘೋಷ ಮಾಡಿದರು.

ಮುಹಮ್ಮದ್ ಪೈಗಂಬರರ(ಸ) ಕಾಲದ ನಂತರ ಖುರ್‌ಆನಿನ ಮಹಾತ್ಮೆ ಮತ್ತು ವೈಶಿಷ್ಟ್ಯ ಬಗ್ಗೆ ಲೋಕದ ಮುಂದೆ ಇರಿಸಿದ ಒಂದು ಘೋಷಣೆಯಾಗಿತ್ತು ಹಝ್ರತ್ ಅಹ್ಮದ್(ಅ) ಮಾಡಿದ್ದು. ಖುರ್‌ಆನಿನಲ್ಲಿ ಮನ್‌ಸೂಖ್ ಆದ ವಚನಗಳಿವೆ ಎಂದು ಸಾಬೀತುಗೊಳಿಸಲು ಅವರು ಧರ್ಮಪಂಡಿತರಿಗೆ ಸವಾಲೊಡ್ಡಿದರು.

1899ರಲ್ಲಿ ಅವರು ಅಲ್ಲಾಹನ ನಿರ್ದೇಶಾನುಸಾರ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಸ್ವೀಕರಿಸಿ "ಮುಸಲ್ಮಾನ್ ಫಿರ್ಖ ಅಹ್ಮದಿಯಾ" ಎಂಬ ಹೆಸರಿನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ರೂಪಕೊಟ್ಟರು. ಇಸ್ಲಾಮಿಕ ಶರೀಅತ್‌ನಲ್ಲಿ ಅವರು ಏನಾದರೂ ಹೊಸತಾಗಿ ಸೇರಿಸಲಿಲ್ಲ. ಕಡಿಮೆಯೂ ಮಾಡಲಿಲ್ಲ. ಯಥಾರ್ಥ ಇಸ್ಲಾಮಿಕ ಶರೀಅತನ್ನು ಲೋಕದಲ್ಲಿ ಪುನಃಸ್ಥಾಪಿಸಲಿಕ್ಕೋಸ್ಕರ ಅವರು ನಿಯುಕ್ತರಾಗಿದ್ದರು. ಅದಕ್ಕಾಗಿ ಅವರು ತೀವ್ರವಾಗಿ ಪ್ರಯತ್ನಿಸಿದರು. "ಬರಾಹೀನೆ ಅಹ್ಮದಿಯಾ" ಮೊದಲ್ಗೊಂಡು "ಪೈಗಾಮೆ ಸುಲ್ಹ್" ತನಕ 80ಕ್ಕೂ ಮಿಕ್ಕಿದ ಅವರ ಗ್ರಂಥಗಳು ಅದಕ್ಕೆ ಜೀವಂತ ಸಾಕ್ಷ್ಯಗಳಾಗಿವೆ.

"ಲೋಕದೆಲ್ಲೆಡೆ ನಾನು ನಿನ್ನ ಸಂದೇಶವನ್ನು ತಲಪಿಸುವೆನು" ಎಂಬ ದೈವಿಕ ವಾಗ್ದಾನದ ಸಾಕ್ಷಾತ್ಕಾರವಾಗಿ ಅಹ್ಮದಿಯಾ ಮುಸ್ಲಿಂ ಜಮಾಅತ್ 198 ರಾಷ್ಟ್ರಗಳಲ್ಲಿ ಖಿಲಾಫತಿನ ನೇತೃತ್ವದಲ್ಲಿ ಏಕ ಇಸ್ಲಾಮಿಕ ಜಮಾಅತಾಗಿ ಕಾರ್ಯಶೀಲವಾಗಿದೆ.

ಇಮಾಂ ಮಹ್‌ದಿಯ ಆಗಮನದೊಂದಿಗೆ ಮುಸ್ಲಿಮರಿಗೆ ನಷ್ಟವಾಗಿದ್ದ ಜಾಗತಿಕ ಇಸ್ಲಾಮಿಕ ಖಿಲಾಫತ್ ಪುನಃ ಲಭಿಸಿತು. ತುರ್ಕಿಯ ಉಸ್ಮಾನಿಯಾ ಖಿಲಾಫತಿನ ಪತನದೊಂದಿಗೆ ಮುಸ್ಲಿಂ ಲೋಕದಲ್ಲಿ ಖಿಲಾಫತ್ ಪುನಃಸ್ಥಾಪಿಸಲಿಕ್ಕೋಸ್ಕರ ತೀವ್ರ ಪ್ರಯತ್ನಗಳು ನಡೆದವು. ರಾಜರುಗಳು, ಆಡಳಿತಾಧಿಕಾರಿಗಳು, ಧರ್ಮಪಂಡಿತರು, ಮುಸ್ಲಿಂ ಸಂಘಟನೆಗಳು, ಖಿಲಾಫತ್ ಚಳುವಳಿ ಸಂಘಟನೆಗಳು ಒಂದು ಜಾಗತಿಕ ನಾಯಕತ್ವಕ್ಕಾಗಿ ಅಹೋರಾತ್ರಿ ಅತ್ಯಧಿಕ ಯತ್ನಿಸಿದರೂ ಅವೆಲ್ಲ ಪರಾಜಯಗೊಂಡವು. ಮುಸ್ಲಿಂ ಲೋಕಕ್ಕೆ ಉಂಟಾದ ಈ ಸೋಲಿನ ಕಾರಣವೇನು? ಅಂತ್ಯಕಾಲದಲ್ಲಿ ನುಬುವ್ವತಿನ ಮಾರ್ಗದಲ್ಲಿರುವ ಖಿಲಾಫತ್ ಪುನಃ ಸ್ಥಾಪಿಸಲ್ಪಡುವುದೆಂಬ ಪೈಗಂಬರರ(ಸ) ಭವಿಷ್ಯೋಕ್ತಿ ಇಲ್ಲಿ ಈಡೇರಬೇಕಾಗಿತ್ತು. ಇಮಾಂ ಮಹ್‌ದಿ ಹಝ್ರತ್ ಅಹ್ಮದ್(ಅ) ಮೂಲಕ, ಅಹ್ಮದಿಯಾ ಖಿಲಾಫತ್ ಮೂಲಕ ಅದು ಸಾಕ್ಷಾತ್ಕರಿಸಲ್ಪಟ್ಟಿದೆ. ಜಾಗತಿಕ ಮಟ್ಟದಲ್ಲಿ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರ ನಾಯಕತ್ವದಲ್ಲಿ ಅಹ್ಮದಿಯಾ ಜಮಾಅತ್ ಇಸ್ಲಾಮಿಕ ಶಿಕ್ಷಣ ಬೋಧನೆ ಚಟುವಟಿಕೆಗಳೊಂದಿಗೆ ಜೈತ್ರಯಾತ್ರೆ ನಡೆಸುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯ ನುಡಿ ಪ್ರಕಾರ ಆಗಮಿಸಿದ ಇಮಾಂ ಮಹ್‌ದಿಯನ್ನು ನಂಬಿ ಅವರ ಜಮಾಅತಿನಲ್ಲಿ ಸೇರುವುದರೊಂದಿಗೆ ಮಾತ್ರ ದುರಂತಮಯ ಅಧಃಪತನದ ಅಕ್ಟೋಪಸ್ ಹಿಡಿತದಿಂದ ಮುಸ್ಲಿಂ ಉಮ್ಮತಿಗೆ ಮುಕ್ತಿ ಲಭಿಸುವುದು.

★

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಖಝಾ ನಮಾಝ್

ನ್ಯಾಯವಾದ ಕಾರಣದಿಂದ ಯಾವುದಾದರೂ ನಮಾಝ್ ಅದರ ನಿಗದಿತ ಸಮಯದಲ್ಲಿ ಮಾಡಲು ಸಾಧ್ಯವಾಗದಿದ್ದರೆ ಆ ನಮಾಝನ್ನು ಅದಕ್ಕೆ ತಡೆಯಾಗಿರುವ ಅಡ್ಡಿ ಆತಂಕ ನಿವಾರಣೆ ಆದ ಕೂಡಲೇ ಮಾಡತಕ್ಕದ್ದು. ನಿದ್ರಿಸಿದ ಕಾರಣದಿಂದ ಅಥವಾ ಮರೆತು ಹೋದ ಕಾರಣದಿಂದ ನಮಾಝ್ ಮಾಡದಿದ್ದರೆ ನಿದ್ರೆಯಿಂದ ಎಚ್ಚೆತ್ತ ಕೂಡಲೇ ಅಥವಾ ನೆನಪು ಬಂದ ಕೂಡಲೇ ನಮಾಝ್ ಮಾಡ ಬೇಕು. ನಮಾಝಿನ ಸಮಯ ದಾಟಿ ಹೋಯಿತು ಎಂದು ಭಾವಿಸಿ ನಮಾಝ್ ಮಾಡದೆ ಇರಬಾರದು. ಈ ರೀತಿ ಮಾಡುವ ನಮಾಝನ್ನು ಖಝಾ ನಮಾಝ್ ಎಂದು ಹೇಳುತ್ತಾರೆ. ಒಂದಕ್ಕಿಂತ ಹೆಚ್ಚು ನಮಾಝ್ ಖಝಾ ಆದರೆ ಅವುಗಳನ್ನು ಅನುಕ್ರಮವಾಗಿ ಮಾಡಬೇಕು.

## ತಹಜ್ಜುದ್ ನಮಾಝ್

ಇಶಾ ನಮಾಝಿನ ನಂತರ ನಿದ್ರಿಸಿ ಪ್ರಭಾತ ಕಾಲಕ್ಕೆ ಮುಂಚೆ ನಿದ್ರೆಯಿಂದ ಎಚ್ಚೆದ್ದು ಮಾಡುವ ಪ್ರಾರ್ಥನೆಗೆ ತಹಜ್ಜುದ್ ನಮಾಝ್ ಎಂದು ಹೆಸರು. ತಹಜ್ಜುದ್ ನಮಾಝ್ ಬಹಳ ಶ್ರೇಷ್ಠವಾದ ಆರಾಧನೆ ಎಂದು ಪವಿತ್ರ ಖುರ್‌ಆನ್‌ನಿಂದಲೂ ಹದೀಸುಗಳಿಂದಲೂ ಸ್ಪಷ್ಟವಾಗುತ್ತದೆ. ತಹಜ್ಜುದ್ ನಮಾಝುಗಳಲ್ಲಿ ಮಾಡಲ್ಪಡುವ ಹೆಚ್ಚಿನ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ.

ಶ್ರದ್ಧೆ ಇಲ್ಲದೆ ಜನರು ನಿದ್ರಿಸುತ್ತಿರುವಾಗ ಸಾತ್ವಿಕರೂ ಸಜ್ಜನರೂ ಆಗಿರುವ ಅಲ್ಲಾಹನ ದಾಸರು ಅಲ್ಲಾಹನನ್ನು ಸ್ಮರಿಸಿ ಅವನಿಂದ ಪಾಪವಿಮೋಚನೆ ಕೋರುತ್ತಾರೆ. ಇದು ಅಲ್ಲಾಹನಿಗೆ ಪ್ರಿಯವಾದ ಸಂಗತಿಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯಾವಾಗಲೂ ತಹಜ್ಜುದ್ ನಮಾಝ್ ಮಾಡುತ್ತಾ ಇದ್ದರು. ತನ್ನ ಮನೆಯವರನ್ನು ತಹಜ್ಜುದ್ ನಮಾಝ್‌ಗಾಗಿ ಎಬ್ಬಿಸುತ್ತಿದ್ದರು.

ಈ ನಮಾಝ್ ಎಂಟು ರಕ್‌ಅತ್‌ನದ್ದಾಗಿದೆ. ಹಝ್ರತ್ ಪೈಗಂಬರರು ಎರಡೆರಡು ರಕ್‌ಅತ್ ಪ್ರಕಾರ ಎಂಟು ರಕ್‌ಅತ್ ಪ್ರಾರ್ಥಿಸುತ್ತಿದ್ದರು. ಅನಂತರ ಮೂರು ರಕ್‌ಅತ್ ವಿತ್‌ರ್ ನಮಾಝ್ ಮಾಡುತ್ತಿದ್ದರು. ಈ ನಮಾಝ್ ಜಮಾಅತಾಗಿಯೂ ಮಾಡಬಹುದು.

## ತರಾವೀಹ್ ನಮಾಝ್

ಇದು ತಹಜ್ಜುದ್ ನಮಾಝ್‌ಗೆ ಬದಲಾಗಿ ಇಶಾ ಪ್ರಾರ್ಥನೆಯ ನಂತರ ರಮಝಾನ್ ತಿಂಗಳಲ್ಲಿ ಅನುಷ್ಠಿಸಲ್ಪಡುತ್ತದೆ.

## ಇಶ್‌ರಾಖ್ ಮತ್ತು ಝುಹಾ ನಮಾಝ್

ಸೂರ್ಯನು ಉದಿಸಿ ಅಂದಾಜು ಏಳು ಮೊಳ ದಿಗಂತದಿಂದ ಮೇಲೆದ್ದರೆ ಆಗ ಮಾಡುವ ಪ್ರಾರ್ಥನೆ ಇಶ್‌ರಾಖ್ ನಮಾಝ್ ಆಗಿದೆ. ಇದು ಎರಡರಿಂದ ಹನ್ನೆರಡು ರಕ್‌ಅತ್ ತನಕ ಮಾಡಬಹುದು. ಈ ನಮಾಝ್ ಸಹ ಬಹಳ ಪುಣ್ಯದಾಯಕವಾಗಿದೆ. ಬೆಳಗ್ಗೆ ಅಂದಾಜು 9 ಗಂಟೆಯಿಂದ ಸೂರ್ಯನು ನಡುನೆತ್ತಿಗೆ ತಲಪುವುದಕ್ಕೆ ಮುಂಚೆ ಮಾಡುವ ಪ್ರಾರ್ಥನೆ ಸಲಾತುಝ್ಝುಹಾ ಆಗಿದೆ. ಇದರ ಅರ್ಥ ಪೂರ್ವಾಹ್ನದ ನಮಾಝ್ ಎಂದು. ಇದು ಎರಡರಿಂದ ಎಂಟು ರಕ್‌ಅತ್ ವರೆಗಿದೆ.

## ಖಸ್‌ರ್ ನಮಾಝ್

ಇಸ್ಲಾಮ್ ಅನೇಕ ಅನುಕೂಲತೆಗಳನ್ನು ನೀಡಿದೆ. ಅದರಲ್ಲಿ ಒಂದು, ಪ್ರಯಾಣಿಕರು ನಮಾಝ್ ಕಡಿಮೆ ಮಾಡಬಹುದೆಂದಾಗಿದೆ. ನಾಲ್ಕು ರಕ್‌ಅತ್‌ಗಳ ಫರ್ಝ್ ನಮಾಝ್ ಕಡಿತಗೊಳಿಸಿ ಎರಡು ರಕ್‌ಅತ್ ನಮಾಝ್ ಮಾಡಿದರೆ ಸಾಕು. ಹೀಗೆ ಕಡಿತಕ್ಕೊಳಪಡಿಸಿ ಮಾಡುವ ನಮಾಝ್ ಖಸ್‌ರ್ ನಮಾಝ್ ಆಗಿದೆ.

ಝುಹ್‌ರ್, ಅಸ್‌ರ್ ಮತ್ತು ಇಶಾ ಈ ಮೂರು ನಮಾಝ್‌ಗಳನ್ನು ಮಾತ್ರ ಖಸ್‌ರ್ ಮಾಡಬಹುದು. ಮಗ್‌ರಿಬ್, ಫಜ್‌ರ್ ನಮಾಝ್ ಗಳನ್ನು ಖಸ್‌ರ್ ಮಾಡಬಾರದು. ಖಸ್‌ರ್ ಮಾಡುವ ನಮಾಝಿನ ಮುಂದೆ ಮತ್ತು ಹಿಂದೆ ಇರುವ ಸುನ್ನತ್ ನಮಾಝ್‌ಗಳನ್ನು ನಿರ್ವಹಿಸ ಬೇಕೆಂದಿಲ್ಲ. ಪ್ರಯಾಣಿಕರೂ ಫಜ್‌ರ್ ನಮಾಝಿನ ಸುನ್ನತ್ ನಮಾಝ್ ಮಾಡಬೇಕು. ಅಲ್ಲದೆ ವಿತ್‌ರ್ ನಮಾಝ್ ಸಹ ಮಾಡಬೇಕು.

ಖಸ್‌ರ್ ಅಲ್ಲಾಹನು ನೀಡಿದ ಸೌಕರ್ಯವಾಗಿದೆ. ಅದರ ಸದುಪಯೋಗ ಮಾಡುವುದು ಪ್ರಯಾಣಿಕರ ಕರ್ತವ್ಯವಾಗಿದೆ. ಆದರೆ ಒಬ್ಬ ಪ್ರಯಾಣಿಕ ಒಂದು ಸ್ಥಳದಲ್ಲಿ 19 ದಿವಸಗಳಿಗಿಂತ ಹೆಚ್ಚು ಕಾಲ ತಂಗುವುದಾಗಿ ಉದ್ದೇಶಿಸುವುದಾದರೆ ಅಂತಹ ವ್ಯಕ್ತಿ ಖಸ್‌ರ್ ಮಾಡಬಾರದು. ಅದೇ ರೀತಿ ನಿತ್ಯ ಪ್ರಯಾಣ ಮಾಡುವವರೂ ಖಸ್‌ರ್ ಮಾಡಬಾರದು. ಊರಿನಿಂದ ಹೊರಗೆ ಹೋದನಂತರ ಖಸ್‌ರ್ ಪ್ರಾರಂಭವಾಗುತ್ತದೆ. ಊರಿಗೆ ಹಿಂದಿರುಗಿದ ಕೂಡಲೇ ಖಸ್‌ರ್ ಕೊನೆಗೊಳ್ಳುತ್ತದೆ.

## ನಮಾಝ್‌ಗಳನ್ನು ಜಮ್‌ಅ್ ಮಾಡುವುದು

ಕೆಲವು ಸಂದರ್ಭಗಳಲ್ಲಿ ನಮಾಝ್‌ಗಳನ್ನು ಒಟ್ಟಿಗೆ ಸೇರಿಸಬಹುದು. ಝುಹ್‌ರ್ ಮತ್ತು ಅಸ್‌ರ್, ಮಗ್‌ರಿಬ್ ಮತ್ತು ಇಶಾಅ್ ಒಟ್ಟಿಗೆ ಸೇರಿಸಿ ನಮಾಝ್ ಮಾಡಬಹುದು. ಸುಬ್‌ಹ್(ಫಜ್‌ರ್) ನಮಾಝನ್ನು ಬೇರೆ ನಮಾಝ್‌ಗಳೊಂದಿಗೆ ಸೇರಿಸಲಾಗುವುದಿಲ್ಲ. ಪ್ರಯಾಣದಲ್ಲಿರುವಾಗಲೂ ಸಾಮೂಹಿಕವಾದ ಅಥವಾ ಪ್ರಾದೇಶಿಕವಾದ ಬೇರೆ ಆವಶ್ಯಕತೆಗಳು ಇರುವಾಗಲೂ ಭಯಂಕರ ಮಳೆ ಇರುವಾಗಲೂ ನಮಾಝ್‌ಗಳನ್ನು ಜಮ್‌ಅ್ ಮಾಡಬಹುದು. ಜಮ್‌ಅ್ ಮಾಡುವಾಗ ಸುನ್ನತ್ ನಮಾಝ್‌ಗಳನ್ನು ಮಾಡಬೇಕಾಗಿಲ್ಲ. ಆದರೆ ವಿತ್‌ರ್ ನಮಾಝ್ ಬಿಡಬಾರದು.

ಜಮ್‌ಅ್ ಮಾಡುವಾಗ ಮೊದಲನೆಯ ನಮಾಝ್ ಮೊದಲು ಮಾಡಬೇಕು. ಅನಂತರ ಎರಡನೆಯ ನಮಾಝ್ ಮಾಡಬೇಕು. ಪ್ರತಿ ನಮಾಝಿನ ಮೊದಲು ಇಖಾಮತ್ ಹೇಳಬೇಕು. ಜಮ್‌ಅ್ ಮಾಡುವಾಗ ಹೊರತು ಇನ್ನಿತರ ಸಂದರ್ಭಗಳಲ್ಲಿ ನಮಾಝ್‌ಗಳನ್ನು ಅದರ ನಿಗದಿತ ಸಮಯಕ್ಕಿಂತ ಮೊದಲು ಮಾಡಬಾರದು. ★

ಪ್ರತಿಕ್ರಿಯೆ

# 'ಸನ್ಮಾರ್ಗ'ದ ಕುಬುದ್ಧಿ!

'ಸನ್ಮಾರ್ಗ' ವಾರ ಪತ್ರಿಕೆ 2010 ಜನವರಿ 31–ಫೆಬ್ರವರಿ 6 ಸಂಚಿಕೆ ಕೇಳಿದಿರಾ? ಕೇಳಿ ಪುಟದಲ್ಲಿ ವಾಚಕರೊಬ್ಬರು ಶಿಯಾ – ಸುನ್ನಿಗಳ ನಡುವೆ ಇರುವ ವ್ಯತ್ಯಾಸವೇನು? ಎಂದು ಕೇಳಿದ್ದರು.

ಇದಕ್ಕೆ ಉತ್ತರ ಕೊಡುವಾಗ ಮುಜೀಬ್ ಉದ್ದೇಶಪೂರ್ವಕವಾಗಿ ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಎಳೆದು ತಂದಿದ್ದಾರೆ. ತಾವು ಶಾಂತಿಯನ್ನೂ ಸಮಾಧಾನವನ್ನೂ ಹರಡುವವರೆಂದು ಪ್ರಚಾರ ಮಾಡುತ್ತಾ ಇರುವ ಮೌದೂದಿ ಅನುಯಾಯಿಗಳು ಇದಕ್ಕೆಲ್ಲಾ ತದ್ವಿರುದ್ಧವಾಗಿ ವರ್ತಿಸುತ್ತಾರೆ.

ಅಹ್ಮದಿಯಾ ಮುಸ್ಲಿಮರು ಹ। ಮುಹಮ್ಮದ್ ಪೈಗಂಬರರನ್ನು(ಸ) ಖಾತಮುನ್ನಬಿಯ್ಯೀನ್ ಎಂದು ದೃಢವಾಗಿ ನಂಬುತ್ತಾರೆ. ಅವರ ನಂತರ ಯಾವುದೇ ಶರೀಅತಿನ ನಬಿ ಬರಲಾರರೆಂದು ನಂಬುತ್ತಾರೆ. ಆದರೆ ಜಮಾತೆ ಇಸ್ಲಾಮಿ ಹಾಗಲ್ಲ. ಹ। ಪೈಗಂಬರರನ್ನು ಅಂತ್ಯ ಪ್ರವಾದಿಯೆಂದೂ ಅವರ ನಂತರ ಯಾವುದೇ ಪ್ರವಾದಿ ಬರಲಾರರೆಂದೂ ನಂಬುತ್ತಾರೆ. ಆದರೆ ಅದರೊಂದಿಗೆ ಇಸ್ರಾಯೀಲ್ಯರಿಗೆ ಎರಡು ಸಾವಿರ ವರ್ಷಗಳ ಹಿಂದೆ ಆಗಮಿಸಿ ಮರಣ ಹೊಂದಿದ ಹ। ಈಸಾ ಮಸೀಹರು ಆಕಾಶದಲ್ಲಿ ಈಗಲೂ ಜೀವಿಸಿರುವರೆಂದೂ ಮುಂದೆ ಅವರೇ ಆಕಾಶ ದಿಂದ ಇಳಿದು ಬರುವರೆಂದೂ ನಂಬಿ ಅವರನ್ನು ಕಾಯುತ್ತಲೂ ಇದ್ದಾರೆ. ಹೀಗಿರುವಾಗ ಹ। ಮುಹಮ್ಮದ್ ಪೈಗಂಬರ್(ಸ) ಅಂತ್ಯ ಪ್ರವಾದಿ ಆಗುವುದಾದರೂ ಹೇಗೆ?

ಇಸ್ಲಾಂ ಧರ್ಮದ ಉನ್ನತ ವಿದ್ವಾಂಸರುಗಳ ಹಾಗೂ ಹಲವು ಮುಜದ್ದಿದ್‌ಗಳ ನಂಬಿಕೆಯೇ ಆಗಿದೆ ಅಹ್ಮದಿಯಾ ಮಸ್ಲಿಂ ಜಮಾಅತಿನ ನಂಬಿಕೆ. ಹೀಗಿರುವಾಗ ಅಹ್ಮದಿಯಾ ಮುಸ್ಲಿಮರು ಮುಸ್ಲಿಮೇತರರಾಗಿರುವುದು ಹೇಗೆ? ಅಹ್ಮದಿಯಾ ಮುಸ್ಲಿಮರನ್ನು ಮುಸ್ಲಿಮೇತರರೆಂದು ಘೋಷಿಸಲು ಸೌದಿ ಅರೇಬಿಯಾಕ್ಕಾಗಲೀ ಪಾಕಿಸ್ತಾನಕ್ಕಾಗಲೀ ಏನು ಹಕ್ಕಿದೆ? ಹಾಗಾದರೆ ಇವರು ಪ್ರಥಮವಾಗಿ ಇದೇ ನಂಬಿಕೆಯವರಾದ ಪೂರ್ವಿಕ ಮಹನೀಯರನ್ನು ಮುಸ್ಲಿಮೇತರರೆಂದು ಘೋಷಿಸಲಿ ಅವರು:

1. ಪೈಗಂಬರರ(ಸ) ಪತ್ನಿ ಉಮ್ಮುಲ್ ಮುಅ್‌ಮಿನೀನ್ ಹ। ಆಯಿಶಾ ಸಿದ್ದಿಖ (ರ)
2. ಶೈಖುಲ್ ಅಕ್ಬರ್ ಹ। ಮುಹ್ಯುದ್ದೀನುಬ್ನು ಅರಬಿ (ರಹ್)
3. ಹ। ಮೌಲಾನಾ ಜಲಾಲುದ್ದೀನ್ ರೂಮಿ (ರಹ್)
4. ಹ। ಸಯ್ಯಿದ್ ಅಬ್ದುಲ್ ಕರೀಂ ಜೀಲಾನೀ (ರಹ್)
5. ಹ। ಇಮಾಂ ಅಬ್ದುಲ್ ವಹಾಬುಶ್ಶಅ್‌ರಾನೀ (ರಹ್)
6. ಹ। ಇಮಾಂ ಮುಹಮ್ಮದ್ ತಾಹಿರ್ (ರಹ್)
7. ಹ। ಮುಲ್ಲಾ ಅಲಿಯ್ಯುಲ್ ಖಾರೀ (ರಹ್)
8. ಹ। ಶಾಹ್ ವಲಿಯ್ಯುಲ್ಲಾ ಮುಹದ್ದಿಸ್ ದೆಹ್ಲವಿ (ರಹ್)
9. ಹ। ಮುಜದ್ದಿದ್ ಅಲ್‌ಫಸಾನೀ ಶೈಖ್ ಅಹ್ಮದ್ ಸರ್ಹಿಂದೀ (ರಹ್)
10. ಹ। ಮೌಲಾನಾ ಮುಹಮ್ಮದ್ ಕಾಸಿಂ ನಾನೂತ್ವೀ (ರಹ್)
11. ಹ। ನವಾಬ್ ಸಿದ್ದೀಖ್ ಹಸನ್ ಖಾನ್ ಭೋಪಾಲವೀ (ರಹ್)
12. ಹ। ಮೌಲಾನಾ ಅಬ್ದುಲ್ ಹಯ್ಯ್ ಲಕ್ನವೀ (ರಹ್)

ಮೇಲೆ ವಿವರಿಸಿದ ಮಹಾತ್ಮರುಗಳ ನಂಬಿಕೆ ಖತಮುನ್ನುಬುವ್ವತ್ ವಿಷಯದಲ್ಲಿ ಹೇಗಿತ್ತೋ ಅದೇ ನಂಬಿಕೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ನಂಬಿಕೆಯಾಗಿದೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಈಗಲ್ಲವೇ ಹ। ಮುಹಮ್ಮದ್ ಮುಸ್ತಫಾರ(ಸ) ಶಿಷ್ಯರಲ್ಲಿ ಶರೀಅತಿಲ್ಲದ ನಬಿ ಬರುವುದರಿಂದ ಪೈಗಂಬರರ ಖಾತಮುನ್ನಬಿಯ್ಯೀನ್ ಪದವಿಗೆ ಕಳಂಕ ಬರುವುದಿಲ್ಲ ಎಂದು ವಾದಿಸಿರುವುದು. ಆದರೆ ನಾನು ಮೇಲೆ ವಿವರಿಸಿದ ಮಹಾತ್ಮರುಗಳು ಅವರವರ ಕಾಲದಲ್ಲಿಯೇ ಪೈಗಂಬರರ ಶಿಷ್ಯರಲ್ಲಿ ಶರೀಅತ್‌ಯಿಲ್ಲದ ನಬಿ ಬರಬಹುದೆಂದು ಸಾಬೀತು ಪಡಿಸಿರುವರು. ಆದ್ದರಿಂದ ಇದು ಹೊಸ ನಂಬಿಕೆ ಏನೂ ಅಲ್ಲ.

ಖಾದಿಯಾನಿಗಳು ಹಜ್ಜ್ ಮತ್ತು ಉಮ್ರಾ ಮಾಡುವುದಿಲ್ಲವೆಂದು ಮುಜೀಬ್ ಹೇಳಲಿಲ್ಲ. ಕಾರಣ ಅವರಿಗೆ ಚೆನ್ನಾಗಿ ಗೊತ್ತಿದೆ. ಅಹ್ಮದಿಯಾ ಮುಸ್ಲಿಮರು ಈಮಾನ್ ಹಾಗೂ ಇಸ್ಲಾಂ ಕಾರ್ಯಗಳಲ್ಲಿ ದೃಢವಾಗಿ ನಂಬಿಕೆಯುಳ್ಳವರು ಎಂದು. ಇನ್ನು ಇಸ್ಲಾಂ ಕಾರ್ಯದಲ್ಲಿ ಐದನೇ ಕರ್ಮವಾದ ಹಜ್ಜ್ ನಿರ್ವಹಿಸಲು ಅಹ್ಮದಿಯರಿಗೆ ಸೌದಿ ಅರೇಬಿಯಾದಲ್ಲಿ ಅನುಮತಿ ನೀಡದಿದ್ದರೆ ಅದರಲ್ಲಿ ಅಹ್ಮದಿಯಾ ಮುಸ್ಲಿಮರದ್ದೇನು ತಪ್ಪಿದೆ? ಹಿಂದೆ ಹ। ಮುಹಮ್ಮದ್ ಮುಸ್ತಫಾ(ಸ) ತನ್ನ ಅನುಯಾಯಿಗಳೊಂದಿಗೆ ಮದೀನಾದಿಂದ ಮಕ್ಕಾಕ್ಕೆ ಹಜ್ಜ್ ನಿರ್ವಹಿಸಲು ಹೊರಟಾಗ ಹುದೈಬಿಯಾ ಎಂಬಲ್ಲಿ ಶತ್ರುಗಳು ತಡೆದರು. ಪೈಗಂಬರರು ಹಜ್ಜ್ ನಿರ್ವಹಿಸದೆ ಹಿಂದಿರುಗಿದರು. ಇದರಲ್ಲಿ ಹ। ಮುಹಮ್ಮದ್ ಪೈಗಂಬರರ ತಪ್ಪೇನಿದೆ? ಹ। ಪೈಗಂಬರರ ವಿರೋಧಿಗಳು ಮಾಡಿದ ಅದೇ ಕೆಲಸವನ್ನು ಇಂದು ಇಸ್ಲಾಮೀ ವಿದ್ವಾಂಸರೆಂದು ವಾದಿಸುವವರು ಮಾಡುತ್ತಿದ್ದಾರೆ. ಅಂದು ಹ। ಪೈಗಂಬರರ ವಿರುದ್ಧ ಅವರ ಶತ್ರುಗಳು ಏನೆಲ್ಲಾ ಅಕ್ರಮಗಳನ್ನು ಮಾಡಿದ್ದರೋ ಅದನ್ನೆಲ್ಲಾ ಇಂದು ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿರೋಧಿಗಳೂ ಮಾಡುತ್ತಿರುವರು. ಪರಿಣಾಮ, ಯಾವ ರೀತಿ ಹ। ಮುಹಮ್ಮದ್ ಪೈಗಂಬರರ(ಸ) ವಿರೋಧಿಗಳು ನಾಶವಾದರೋ ಅದೇ ರೀತಿ ಇಂದು ಹ। ಅಹ್ಮದ್‌ರವರ(ಅ) ವಿರೋಧಿಗಳು ನಾಶವಾಗುತ್ತಲಿರುವರು. ಯಾವ ದುಷ್ಕೃತ್ಯಗಳನ್ನೂ ಅಪಪ್ರಚಾರವನ್ನೂ ಹ। ಮುಹಮ್ಮದ್ ಪೈಗಂಬರರ(ಸ) ವಿರೋಧಿಗಳಾದ ಅಂದಿನ ಮಕ್ಕಾ ನಿವಾಸಿಗಳು ಕೈಗೊಂಡಿದ್ದರೋ ಅದೇ ಆರೋಪಗಳನ್ನು ಇಂದಿನ ಸೌದಿ ಅರೇಬಿಯಾ ಹಾಗೂ ಪಾಕಿಸ್ಥಾನ ದೇಶಗಳು ಹ। ಅಹ್ಮದ್(ಅ) ವಿರುದ್ಧವೂ ಆರೋಪಿಸುತ್ತಿವೆ. ಈ ಹೇಯ ಕೃತ್ಯದ ಫಲವನ್ನು ಇವರು ಅನುಭವಿಸುತ್ತಲೂ ಇದ್ದಾರೆ.

ಪ್ರಿಯ ಮುಜೆಬ್‌ರವರೆ, ಕೆಲವು ವರ್ಷಗಳಿಂದ ತಾವು ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿರುದ್ಧ ಈ ರೀತಿಯ ಅಪಪ್ರಚಾರಗಳನ್ನು ತಮ್ಮ ವಾರಪತ್ರಿಕೆಯಾದ 'ಸನ್ಮಾರ್ಗ'ದಲ್ಲಿ ಪ್ರಕಟಿಸುತ್ತಾ ಇರುವಿರಿ. ಇದರಿಂದ ತಾವು ಗಳಿಸಿದ ಲಾಭವಾದರೂ ಏನು? ಹಾಗೂ ಹ। ಅಹ್ಮದ್‌ರವರ ಕಾಲದಿಂದ ಇಂದಿನ ವರೆಗೆ ಅವರ ಯಾವ ವಿರೋಧಿಗಳು ಏನು ಲಾಭಗಳಿಸಿದರು? ಸತ್ಯವು ಬಂದಿತು, ಅಸತ್ಯವು ಮಾಯವಾಯಿತು. ಅಸತ್ಯವು ಮಾಯವಾಗಬೇಕಾದದ್ದೇ ಆಗಿದೆ ಎಂಬ ಅಲ್ಲಾಹುವಿನ ವಚನ ಇಂದು ಅಲ್‌ಜಮಾಅತಾದ ಅಹ್ಮದಿಯಾ ಮುಸ್ಲಿಮರಲ್ಲಿ ಈಡೇರುವುದನ್ನು ನೀವೆಲ್ಲಾ ಕಾಣುತ್ತಾ ಇರುವಿರಿ. ಇನ್ನು ಮುಂದೆಯೂ ಕಾಣುವಿರಿ. ಇನ್‌ಶಾಅ್ ಅಲ್ಲಾಹ್.

– ಕೆ. ಎಂ. ಉಮರ್, ಮಡಿಕೇರಿ

ಓದಿದ್ದು

## ಪಾಕ್ ಮಂತ್ರಿಯ ಹೇಳಿಕೆ: ತಾಲಿಬಾನ್ ಇಸ್ಲಾಮಿನ ಅನುಯಾಯಿ ಇದ್ದಂತೆ!

**ಇಸ್ಲಾಮಾಬಾದ್**: ತಾಲಿಬಾನ್ ಭಯೋತ್ಪಾದನೆ ತನ್ನ ಒಡಲನ್ನೇ ಸುಡುತ್ತಿದ್ದರೂ ಪಾಕಿಸ್ತಾನಕ್ಕೆ ಇನ್ನೂ ಬುದ್ಧಿ ಬಂದಂತಿಲ್ಲ. ಭಯೋತ್ಪಾದಕ ಶಕ್ತಿಗಳಾದ ತಾಲಿಬಾನಿಗಳನ್ನು ಮಟ್ಟ ಹಾಕುವುದನ್ನು ಬಿಟ್ಟು ತಾಲಿಬಾನಿಗಳ ಮೇಲೆ ಪ್ರಶಂಸೆಯ ಸುರಿಮಳೆಗೈದಿದ್ದಾರೆ ಸರಕಾರದ ಅಂಗವಾಗಿರುವ ಪಾಕ್ ಸಚಿವರೊಬ್ಬರು.

ತಾಲಿಬಾನಿಗಳು ಇಸ್ಲಾಮ್ ತತ್ವದ ನೈಜ ಅನುಯಾಯಿಗಳು. ಅಮೇರಿಕ ವಿಶ್ವದಲ್ಲೇ ಅತಿ ದೊಡ್ಡ ಉಗ್ರ ರಾಷ್ಟ್ರ ಎಂದು ಬಡಬಡಾಯಿಸಿದ್ದಾರೆ ಪಾಕಿಸ್ಥಾನದ ಪ್ರವಾಸೋದ್ಯಮ ರಾಜ್ಯ ಸಚಿವ ಮೌಲಾನಾ ಅತ್ತುರ್ ರೆಹಮಾನ್. ಉಲೆಮಾ ಹಾಗೂ ತಾಲಿಬಾನಿಗಳು ಇಸ್ಲಾಮ್ ತತ್ವದ ನೈಜ ಅನುಯಾಯಿಗಳಾಗಿದ್ದು, ವಿಶ್ವಕ್ಕೆ ಅಪಾಯವಿರುವುದು ಅಮೇರಿಕದಿಂದಲೇ ಎಂದೂ ಹೇಳಿದ್ದಾರೆ.

ಖೈಬರ್ ಪಾಖ್ತುನ್‌ಖ್ವಾದ ಅಲ್ವೈ ಪ್ರದೇಶದಲ್ಲಿ ಮಂಗಳವಾರ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ರೆಹಮಾನ್ ಈ ಅಸಂಬದ್ಧ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಇಲ್ಲಿನ ಪತ್ರಿಕೆ ಡಾನ್ ವರದಿ ಮಾಡಿದೆ.

ಮುಸಲ್ಮಾನರಿಗೆ ಅಮೇರಿಕ ಹಾಗೂ ಜಗತ್ತಿನ ಇತರೆಡೆ ಸಮಾನ ಹಕ್ಕು ಹಾಗೂ ಗೌರವ ದೊರೆಯುವರೆಗೂ ಭಯೋತ್ಪಾದನೆ ನಿಲ್ಲದು. ಉಲೆಮಾಗಳು ಹಾಗೂ ತಾಲಿಬಾನಿಗಳು ಅನ್ಯಮತೀಯರನ್ನು ದ್ವೇಷಿಸುತ್ತಾರೆ ಎಂಬುದು ತಪ್ಪುಗ್ರಹಿಕೆ. ಬದಲಿಗೆ ವಿಶ್ವದಲ್ಲಿ ಶಾಂತಿ ಹಾಗೂ ಸೌಹಾರ್ದ ಏರ್ಪಡಲು ಅಮೇರಿಕ ಅಡ್ಡಿಯಾಗಿದೆ. ಅದು ಆಂತರಿಕ ಸೌಹಾರ್ದತೆ ನಂಬಿಕೆಯ ವಿರುದ್ಧ ಕಾರ್ಯಾಚರಿಸುತ್ತಿದೆ ಎಂದು ರೆಹಮಾನ್ ಆಪಾದಿಸಿದ್ದಾರೆ.

ವಜರಿಸ್ಥಾನ ಪ್ರಾಂತ್ಯದಲ್ಲಿ ಪಾಕಿಸ್ಥಾನದ ಸೈನ್ಯವೇ ತಾಲಿಬಾನಿ ಉಗ್ರರ ವಿರುದ್ಧ ಸೆಣೆಸುತ್ತಿದ್ದರೆ, ಇತ್ತ ಅದೇ ಸರಕಾರದ ಸಚಿವ ತಾಲಿಬಾನಿಗಳನ್ನು ಮುಕ್ತಕಂಠದಿಂದ ಹೊಗಳಿ, ಅವರನ್ನು ಇಸ್ಲಾಮಿನ ರಕ್ಷಕರು ಎಂದು ಕರೆದಿರುವುದು ವಿಪರ್ಯಾಸದ ಪರಮಾವಧಿಯೇ ಸರಿ. ಪಾಕಿಸ್ಥಾನದ ಮಾಜಿ ಪ್ರಧಾನಿ ಬೆನ್‌ಜಿರ್ ಭುಟ್ಟೋ ಹತ್ಯೆಯಲ್ಲೂ ತಾಲಿಬಾನಿಗಳ ಕೈವಾಡವಿದೆ ಎಂಬುದನ್ನು ಇತ್ತೀಚಿಗಷ್ಟೆ ಫೆಡರಲ್ ತನಿಖಾ ಸಂಸ್ಥೆ ಬಹಿರಂಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

**("ಹೊಸದಿಗಂತ", ದೈನಿಕ - 25 ನವೆಂಬರ್ 2010)**

## ಇಸ್ಲಾಮ್ ವಿಕೃತಿ : ಒಬಾಮಾ ವಿಷಾದ

**ಮುಂಬಯಿ:** ಮುಗ್ಧ ಜನರನ್ನು ಹತ್ಯೆಗೈಯ್ಯುವ ಹಿಂಸಾ ಪ್ರವೃತ್ತಿಯನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಕೆಲವು ಭೀತಿವಾದಿಗಳು ಇಸ್ಲಾಂ ನಂಥ ಶ್ರೇಷ್ಠ ಧರ್ಮವನ್ನು ವಿರೂಪಗೊಳಿಸುತ್ತಿರುವುದು ವಿಷಾದನೀಯ ಎಂದು ಅಮೇರಿಕಾ ಅಧ್ಯಕ್ಷ ಬರಾಕ್ ಒಬಾಮಾ ಹೇಳಿದ್ದಾರೆ.

ತಮ್ಮಲ್ಲಿನ ವಿಭಿನ್ನತೆಯನ್ನು ಹೋಗಲಾಡಿಸಲು ಹಿಂಸಾಚಾರವೊಂದೇ ಮಾರ್ಗ ಎಂಬ ಭಾವನೆಯನ್ನು ಜನತೆ ಮುಖ್ಯವಾಗಿ ತಿರಸ್ಕರಿಸಬೇಕು ಎಂದು ಅವರು ತಿಳಿಸಿದರು.

**("ಉದಯವಾಣಿ" ದೈನಿಕ – 8 ನವೆಂಬರ್ 2010)**

## ದಲಿತರ ರೊಟ್ಟಿ ತಿಂದ ಮೇಲೆ ನಾಯಿಪಾಡು!

**ಭೋಪಾಲ್**: ಜಾತಿ–ಧರ್ಮದ ಬೇಲಿಗಳು ಮನುಷ್ಯರಿಗಷ್ಟೇ ಅಲ್ಲ, ಪ್ರಾಣಿಗಳಿಗೂ ಅಂಟಿಕೊಂಡ ಅಮಾನವೀಯ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ.

ಮೊರೇನಾ ಜಿಲ್ಲೆಯಲ್ಲಿನ ರಜಪೂತ ಕುಟುಂಬವೊಂದರಲ್ಲಿದ್ದ ನಾಯಿಗೆ ಈಗ ಸಂಕಷ್ಟದ ಸಮಯ. ದಲಿತ ಮಹಿಳೆಯೊಬ್ಬಳು ನೀಡಿದ ರೊಟ್ಟಿಯನ್ನು ತಿಂದ ನಾಯಿ ಮೇಲೆ ಆ ಕುಟುಂಬಕ್ಕೆ ಕೆಂಡದಂತಹ ಕೋಪ. ಅಸ್ಪೃಶ್ಯತೆಯ ಭೂತ ಈ ನಾಯಿಯನ್ನೂ ಕಾಡುತ್ತಿದೆ.

ನಾಯಿಯನ್ನು ಮನೆಯಿಂದ ನಿಷ್ಕರುಣೆಯಿಂದ ಹೊರದಬ್ಬಿರುವ ಆ ಕುಟುಂಬ, ಜಾತಿಗೆ ಸಂಬಂಧಿಸಿದ ಹೊಸ ಚರ್ಚೆಗೆ ದಾರಿ ಮಾಡಿದೆ. ಗ್ರಾಮದ ದಲಿತರ ಬೀದಿಯ ಕಂಬಕ್ಕೆ ಈಗ ಆ ಬಡಪಾಯಿ ನಾಯಿಯನ್ನು ಕಟ್ಟಿಹಾಕಲಾಗಿದೆ.

ಮೊರೆನಾ ಜಿಲ್ಲೆಯ ಮಾಣಿಕ್‌ಪುರ ಗ್ರಾಮದ ಶ್ರೀಮಂತ ರೈತ ರಾಮ್‌ಪಾಲ್ ಸಿಂಗ್ ಕುಟುಂಬ ಈ ಕೃತ್ಯ ನಡೆಸಿದೆ. ಒಂದು ವಾರದ ಹಿಂದೆ ದಲಿತ ಮಹಿಳೆಯಾದ ಸುನೀತಾ ಜಾಧವ್, ಹೊಲದಲ್ಲಿದ್ದ ಗಂಡನಿಗೆ ಮಧ್ಯಾಹ್ನ ಊಟ ಬಡಿಸುತ್ತಿದ್ದರು. ಈ ಸಮಯದಲ್ಲಿ ಅಲ್ಲಿಗೆ ಬಂದ ನಾಯಿ, ಅಲ್ಲಲ್ಲೇ ಸುತ್ತಾಡುತ್ತಿತ್ತು. ಊಟ ಮುಗಿದ ಮೇಲೆ ಎಸೆದ ರೊಟ್ಟಿಯನ್ನು ಆ ನಾಯಿ ತಿಂದಿತು. ಅದೇ ಮಾರ್ಗದಲ್ಲಿ ಬಂದ ರಾಮ್‌ಪಾಲ್ ಸಿಂಗ್ ಈ ದೃಶ್ಯ ನೋಡಿ ಕೆರಳಿ ಕೆಂಡವಾದ.

'ಚಪ್ಪಲಿ ಹೊಲಿಯುವ ದರಿದ್ರ ಹೆಂಗಸೇ, ನಮ್ಮ ನಾಯಿಗೆ ರೊಟ್ಟಿ ಹಾಕಲು ನಿನಗೆಷ್ಟು ಧೈರ್ಯ?' ಎಂದು ಸಿಂಗ್ ಅಬ್ಬರಿಸಿದ.

'ಜಾತಿ ಹಿಡಿದು ಸಾರ್ವಜನಿಕವಾಗಿ ಸಿಂಗ್ ಹಂಗಿಸಿದ. ಪ್ರಕರಣ ಅಲ್ಲಿಗೆ ಮುಗಿಯಿತು ಎಂದುಕೊಂಡಿದ್ದೆ. ಆದರೆ ಇದು ಮುಂದುವರಿಯಿತು. ನಾಯಿ ಈಗ ಕಷ್ಟಕ್ಕೆ ಸಿಲುಕಿದೆ' ಎಂದು ನೊಂದು ನುಡಿಯುತ್ತಾರೆ ಸುನೀತಾ.

ಓದಿದ್ದು

ಸೋಮವಾರ ನಡೆದ ಪಂಚಾಯತಿ ಸಭೆಯಲ್ಲಿ ಸುನೀತಾಗೆ 15 ಸಾವಿರ ರೂ. ದಂಡ ವಿಧಿಸಲಾಗಿದೆ! ಅಲ್ಲದೆ ದಲಿತರ ರೊಟ್ಟಿ ತಿಂದ ನಾಯಿಯು ಸುನೀತಾ ಜತೆಯೇ ಇರಬೇಕು ಎಂದು ಪಂಚಾಯತಿ ಮುಖಂಡರು ಹೇಳುತ್ತಿದ್ದಾರೆ.

ಏತನ್ಮಧ್ಯೆ, ಇದೆಲ್ಲದರಿಂದ ಬೇಸತ್ತ ಸುನೀತಾ ಮತ್ತು ಅವರ ಸಹೋದರ ನಹರ್ ಸಿಂಗ್ ಜಾಧವ್ ಅವರು ನ್ಯಾಯಕೋರಿ ಸುಮಾವಾಲಿ ಪೊಲೀಸ್ ಠಾಣೆಗೆ ಹೋದರು. ಅಲ್ಲಿನ ಪೊಲೀಸರು ಎಸ್‌ಸಿ/ಎಸ್‌ಟಿ ಮೇಲಿನ ಪ್ರಕರಣಗಳ ನಿಭಾಯಿಸುವ ಪೊಲೀಸ್ ಠಾಣೆಯತ್ತ ಕೈತೋರಿಸಿದರು.

'ಅಲ್ಲಿಯೂ ದೂರು ಸ್ವೀಕರಿಸದ ಪೋಲೀಸರು, ನೀನೇಕೆ ಆ ನಾಯಿಗೆ ರೊಟ್ಟಿ ಹಾಕಿದೆ ಎಂದು ಪ್ರಶ್ನಿಸಿದರು. ಹೀಗಾಗಿ ನಾವು ಎಸ್‌ಪಿ ಮತ್ತು ಜಿಲ್ಲಾಧಿಕಾರಿಗೆ ಮನವಿ ನೀಡಿದ್ದೇವೆ. ಇಷ್ಟೆಲ್ಲ ಆದರೂ ಯಾರೊಬ್ಬರೂ ಪ್ರಕರಣ ದಾಖಲಿಸಿಕೊಂಡಿಲ್ಲ' ಎನ್ನುತ್ತಾರೆ ಸುನೀತಾ ಸಹೋದರ ನಹರ್.

## 9/11 ದಾಳಿಗೆ ಅಮೆರಿಕದ್ದೇ ಕೈವಾಡ

**ವಿಶ್ವಸಂಸ್ಥೆ:** ಅಮೆರಿಕ ಸರಕಾರದಲ್ಲಿದ್ದ ಕೆಲವರು ಕುಸಿಯುತ್ತಿರುವ ತಮ್ಮ ದೇಶದ ಆರ್ಥಿಕತೆಗೆ ಚೇತರಿಕೆ ನೀಡಲು 9/11 ರ ದಾಳಿಯನ್ನು ಸಂಯೋಜಿಸಿದ್ದರು ಎಂದು ಇರಾನ್ ಅಧ್ಯಕ್ಷ ಅಹ್ಮದಿನೆಜಾದ್ ಆರೋಪಿಸಿದ್ದಾರೆ.

ಕುಸಿಯುತ್ತಿರುವ ಆರ್ಥಿಕತೆಗೆ ಚೇತರಿಕೆ ನೀಡಲು, ಮಧ್ಯಪ್ರಾಚ್ಯದ ಮೇಲೆ ಹಿಡಿತ ಸಾಧಿಸಲು ಹಾಗೂ ಯಹೂದಿ ಆಡಳಿತವನ್ನು ರಕ್ಷಿಸಲು ಅಮೆರಿಕ ಸರಕಾರವೇ ತಮ್ಮ ದೇಶದಲ್ಲಿ ನಡೆದ 9/11 ರ ದಾಳಿಯನ್ನು ಸಂಯೋಜಿಸಿತ್ತು ಎಂಬುದನ್ನು ಅಮೆರಿಕ ಸೇರಿದಂತೆ ಇತರ ದೇಶಗಳ ಬಹುತೇಕ ಜನರು ಹಾಗೂ ರಾಜಕಾರಣಿಗಳು ಒಪ್ಪಿದ್ದಾರೆ ಎಂದು ಅಹ್ಮದಿನೆಜಾದ್, ವಿಶ್ವಸಂಸ್ಥೆಯ ಸಭೆಯಲ್ಲಿ ತಿಳಿಸಿದ್ದಾರೆ.

9/11ರ ದಾಳಿ ಕುರಿತು ಸ್ವತಂತ್ರ ತಂಡ ರಚಿಸಿ ತನಿಖೆ ನಡೆಸಬೇಕು ಎಂದು ವಿಶ್ವಸಂಸ್ಥೆಯನ್ನು ಒತ್ತಾಯಿಸಿರುವ ಅವರು, ತನಿಖೆಯಿಂದ ಸತ್ಯಾಂಶ ಹೊರಬೀಳಲಿದೆ ಎಂದು ಹೇಳಿದ್ದಾರೆ.

9/11 ದಾಳಿಯನ್ನು ಮುಂದಿಟ್ಟುಕೊಂಡು ಅಮೆರಿಕವು ಇರಾಕ್ ಮತ್ತು ಅಫಘಾನಿಸ್ತಾನದಲ್ಲಿ ಯುದ್ಧ ಘೋಷಿಸಿತು. ತನ್ನ ಪರಮಾಣು ಶಸ್ತ್ರಾಸ್ತ್ರಗಳನ್ನು ಕಾಪಾಡಿಕೊಳ್ಳಲು ಇರಾನ್‌ನ ಅಣು ಕಾರ್ಯಕ್ರಮಗಳಿಗೆ ತಡೆಯೊಡ್ಡಿತ್ತು ಎಂದು ಅವರು ಆರೋಪಿಸಿದ್ದಾರೆ.

**("ವಿಜಯಕರ್ನಾಟಕ" ದೈನಿಕ – 25 ಸಪ್ಟೆಂಬರ್ 2010)**

## ಭೂಮಿಯನ್ನು ಹೋಲುವ ನೂತನ ಗ್ರಹ ಪತ್ತೆ

**ಕ್ಯಾಲಿಫೋರ್ನಿಯ:** ಸುಮಾರು 20 ಜ್ಯೋತಿರ್‌ವರ್ಷಗಳ ಹಿಂದಿನಿಂದಲೂ ನಕ್ಷತ್ರವೊಂದಕ್ಕೆ ಸುತ್ತು ಹೊಡೆಯುತ್ತಿದ್ದ ಗ್ರಹವೊಂದನ್ನು ಖಗೋಳಶಾಸ್ತ್ರಜ್ಞರು ಪತ್ತೆಹಚ್ಚಿದ್ದಾರೆ. ಈ ಗ್ರಹವು ಬಹುತೇಕ ಭೂಮಿಯನ್ನೇ ಹೋಲುತ್ತಿದ್ದು ಇದುವರೆಗೂ ಪತ್ತೆಯಾಗಿರಲಿಲ್ಲ ಹಾಗೂ ಇಲ್ಲಿ ಜೀವಿಗಳು ನೆಲೆಸಲು ಪೂರಕವಾದ ವಾತಾವರಣ ಇರುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ.

ಗ್ಲೈಸ್ 581ಜಿ ಹೆಸರಿನ ಗ್ರಹವನ್ನು ಕ್ಯಾಲಿಫೋರ್ನಿಯ ವಿವಿ ನೇತೃತ್ವದ ತಂಡ ಪತ್ತೆ ಹಚ್ಚಿದ್ದು, ಭೂಮಿಯಂತೆ ಇಲ್ಲೂ ನೀರು ಹಾಗೂ ಜೀವಿಗಳು ವಾಸಿಸುವಂಥ ವಾತಾವರಣ ಇರುವ ಸಾಧ್ಯತೆಗಳಿವೆ ಎಂದು ಹೇಳಿದ್ದಾರೆ.

ನೂತನ ಗ್ರಹ ಭೂಮಿಗಿಂತ 3 ಪಟ್ಟು ದೊಡ್ಡದಿದ್ದು, ನಕ್ಷತ್ರ ಕಕ್ಷೆಯ ಸಮಶೀತೋಷ್ಣವಲಯ (ಅತ್ತ ಬಿಸಿಯೂ ಅಲ್ಲದ ಇತ್ತ ತಂಪಾದ ಪ್ರದೇಶವೂ ಅಲ್ಲದ)ದಲ್ಲಿ ಕಂಡುಬಂದಿದ್ದು, ಸಾಗರ, ಸರೋವರ ಹಾಗೂ ನದಿಗಳ ಸೃಷ್ಟಿಗೆ ಪೂರಕವಾದ ದ್ರವರೂಪದ ನೀರನ್ನು ಹೊಂದಿರುವ ವಾತಾವರಣದಲ್ಲಿ ನೂತನ ಗ್ರಹ ಉಪಸ್ಥಿತಗೊಂಡಿದೆ.

ಹವಾಯಿಯಲ್ಲಿನ ಡಬ್ಲ್ಯು.ಎಂ.ಕೆಕ್ ವೀಕ್ಷಣಾಲಯದಲ್ಲಿ ಸತತ 11 ವರ್ಷಗಳ ಖಗೋಳ ವೀಕ್ಷಣೆಯ ಪ್ರತಿಫಲವಾಗಿ ನೂತನ ಗ್ರಹ ಪತ್ತೆಯಾಗಿದೆ ಎಂದು ಖಗೋಳಶಾಸ್ತ್ರಜ್ಞರ ತಂಡದ ನೇತೃತ್ವವಹಿಸಿದ್ದ ಪ್ರೊ । ಸ್ಟೀವನ್ ವಕ್ತ್ ತಿಳಿಸಿದ್ದಾರೆ.

ನೂತನ ಗ್ರಹವು ಗ್ಲೈಸ್ 581 ಹೆಸರಿನ ಸಣ್ಣ ಕೆಂಪು ಬಣ್ಣದ ನಕ್ಷತ್ರವೊಂದಕ್ಕೆ ಸುತ್ತು ಹೊಡೆಯುತ್ತಿದೆ. ಪ್ರಸ್ತುತ ಅದು 172 ಟ್ರಿಲಿಯನ್ ಕಿ.ಮೀ. ದೂರದಲ್ಲಿದ್ದು ಜ್ಯೋತಿರ್‌ವರ್ಷ ವೇಗದಲ್ಲಿ ಸಾಗುವ ಬಾಹ್ಯಾಕಾಶ ನೌಕೆಗೆ ಅಲ್ಲಿಗೆ ತಲುಪಲು 20 ವರ್ಷಗಳ ಸುದೀರ್ಘ ಅವಧಿ ಬೇಕಾಗುತ್ತದೆ ಎಂದು ನೂತನ ಗ್ರಹದ ಪತ್ತೆಗೆ ಸಂಬಂಧಿಸಿದ ಆಸ್ಟ್ರೋಫಿಸಿಕಲ್ ಜರ್ನಲ್ ವರದಿ ತಿಳಿಸಿದೆ.

## ಬುರ್ಖಾ ನಿಷೇಧ : ಪ್ರತಿಭಟನೆ

**ಲಂಡನ್ :** ಫ್ರಾನ್ಸ್‌ನಲ್ಲಿ ಇತ್ತೀಚೆಗೆ ಜಾರಿಗೆ ತರಲಾದ ಬುರ್ಖಾ ನಿಷೇಧ ಕಾನೂನನ್ನು ವಿರೋಧಿಸಿ ಇಬ್ಬರು ಮುಸ್ಲಿಂ ವಿದ್ಯಾರ್ಥಿನಿಯರು ಪ್ಯಾರಿಸ್‌ನ ಬೀದಿಗಳಲ್ಲಿ ಕಾಲುಗಳು ಕಾಣುವಂಥ ತುಂಡುಲಂಗ ಹಾಗೂ ಕಣ್ಣು ಮಾತ್ರ ಕಾಣುವಂತೆ ಮುಸುಕು ಹಾಕಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ನೂತನ ಕಾನೂನನ್ನು ವಿರೋಧಿಸಿ ಈ ಇಬ್ಬರು ವಿದ್ಯಾರ್ಥಿನಿಯರು ಪ್ರಧಾನಿ ಕಚೇರಿ ಹಾಗೂ ವಿವಿಧ ಸರಕಾರಿ ಸಚಿವಾಲಯದ ಬಳಿ ನಡೆದು ಸಾಗುವ ಮೂಲಕ ಪ್ರತಿಭಟಿಸಿದರು.

**("ಉದಯವಾಣಿ" – 3 ಅಕ್ಟೋಬರ್ 2010)**

## ಕೈ ಕಡಿದರೆ ಲಕ್ಷ ರೂ. ಬಹುಮಾನ!

**ಬಾಗಲಕೋಟ :** 'ದೇವಾಲಯಗಳ ಧ್ವಂಸಕ್ಕೆ ಮುಂದಾಗುವವರ ಕೈ ಕತ್ತರಿಸಿ, 1 ಲಕ್ಷ ರೂ. ಬಹುಮಾನ ಪಡೆಯಿರಿ' ಎಂದು ಹಿಂದೂ ಜಾಗರಣ ವೇದಿಕೆಯ ರಾಜ್ಯ ಸಂಚಾಲಕ ಜಗದೀಶ ಕಾರಂತ ಹೇಳಿದ್ದಾರೆ.

ಅನಧಿಕೃತ ಹಿಂದೂ ದೇವಾಲಯಗಳ ತೆರವು ವಿರೋಧಿಸಿ ಪಟ್ಟಣದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, 'ತುಘಲಕ್ ದರ್ಬಾರ್ ನಡೆಸುತ್ತಿರುವ ಜಿಲ್ಲಾಧಿಕಾರಿ ದೇವಾಲಯಗಳನ್ನು ಧ್ವಂಸಗೊಳಿಸಿದ್ದಾರೆ. ರಾಜ್ಯದ ಎಲ್ಲೂ ದೇವಾಲಯಗಳ ತೆರವಿಗೆ ಅವಕಾಶ ನೀಡುವುದಿಲ್ಲ. ಇಂಥ ಹುಚ್ಚು ಸಾಹಸಕ್ಕೆ ಮುಂದಾಗುವವರ ಕೈ, ಕಾಲು ಕತ್ತರಿಸಿ. 1 ಲಕ್ಷ ರೂ. ಬಹುಮಾನ ನೀಡುವುದಲ್ಲದೇ ನಿಮ್ಮ ಪರ ಉಚಿತ ವಕಾಲತ್ತು ವಹಿಸುವುದಾಗಿ' ಜನರಿಗೆ 'ಆಹ್ವಾನ' ನೀಡಿತ್ತು.

("ವಿಜಯಕರ್ನಾಟಕ" – 30 ಅಕ್ಟೋಬರ್ 2010)

## ಲಂಚ ಕೇಳಿದರೆ ಕೈ ಕಡಿಯಿರಿ : ಸಿಎಂ

**ಹುಬ್ಬಳ್ಳಿ :** 'ಭಾಗ್ಯಲಕ್ಷ್ಮೀ ಯೋಜನೆ ಲಾಭವನ್ನು ದೊರಕಿಸಿಕೊಡಲು ಯಾರಾದರೂ ಲಂಚ ಕೇಳಿದರೆ ಅಂತಹವರ ಕೈ ಕಡಿಯಿರಿ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಜನತೆಗೆ ಕರೆ ನೀಡಿದರು.

ರಾಜ್ಯದ ಬಡಕುಟುಂಬಗಳ ಹೆಣ್ಣುಮಕ್ಕಳು ಮತ್ತವರ ಪುತ್ರಿಯರ ಏಳಿಗೆಗಾಗಿ ಭಾಗ್ಯಲಕ್ಷ್ಮೀ ಯೋಜನೆ ಹಾಕಿಕೊಳ್ಳಲಾಗಿದೆ. ಇದರ ಲಾಭ ಎಲ್ಲ ವರ್ಗ, ಜಾತಿ, ಧರ್ಮಗಳ ಜನರಿಗೂ ತಲುಪಬೇಕು ಎಂಬುದು ಸರಕಾರದ ಉದ್ದೇಶ. ಇಂತಹ ಜನೋಪಯೋಗಿ ಯೋಜನೆಯ ಲಾಭ ದೊರಕಿಸಿಕೊಡಲು ಲಂಚ ಕೇಳಿದರೆ 'ಅಂತಹವರ ಕೈ ಕಡಿಯಿರಿ' ಎಂದು ಏರುಧ್ವನಿಯಲ್ಲಿಯೇ ಮುಖ್ಯಮಂತ್ರಿಗಳು ಜನತೆಗೆ ಕರೆ ನೀಡಿದರು.

("ಉದಯವಾಣಿ" - 31 ಅಕ್ಟೋಬರ್ 2010)

## ಆರೆಸ್ಸೆಸ್ ಸಿಮಿಗಿಂತ ಬೇರೆಯಲ್ಲ : ರಾಹುಲ್

**ಭೋಪಾಲ್:** 'ಆರ್‌ಎಸ್‌ಎಸ್ ಒಂದು ಮತಾಂಧ ಸಂಘಟನೆಯಾಗಿದ್ದು ಅದು ನಿಷೇಧಿತ ಉಗ್ರ ಸಂಸ್ಥೆ ಸಿಮಿಗಿಂತ ಬೇರೆಯಲ್ಲ. ಎರಡೂ ಕೂಡ ಮೂಲತತ್ತ್ವವಾದಿ ಚಿಂತನೆಯ ಸಂಘಟನೆಗಳೇ ಆಗಿವೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

'ಚಿಂತನೆಯಲ್ಲಿ ಸಿಮಿ ಮತ್ತು ಆರ್ ಎಸ್ ಎಸ್ ಬೇರೆಯಲ್ಲ. ಎರಡೂ ಕೂಡ ಮೂಲತತ್ತ್ವವಾದಿ ಚಿಂತನೆಯನ್ನು ಹೊಂದಿವೆ ಎಂದು ರಾಹುಲ್ ಗಾಂಧಿ ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದರು.

ಬಿಜೆಪಿ ಆಡಳಿತ ಹೊಂದಿರುವ ಮಧ್ಯಪ್ರದೇಶದಲ್ಲಿ ಪ್ರವಾಸ ಕೈಗೊಂಡಿರುವ ರಾಹುಲ್ ಮೂಲತತ್ತ್ವವಾದಿ ಚಿಂತನೆಯುಳ್ಳವರಿಗೆ ಯುವ ಕಾಂಗ್ರೆಸ್‌ನಲ್ಲಿ ಸ್ಥಾನವಿಲ್ಲವೆಂದರು. ಅಯೋಧ್ಯಾ ಭೂ ಒಡೆತನದ ಬಗ್ಗೆ ಅಲಹಾಬಾದ್ ನ್ಯಾಯಪೀಠ ನೀಡಿದ ತೀರ್ಪಿನ ಬಗ್ಗೆ ಪತ್ರಕರ್ತರು ರಾಹುಲ್ ಗಮನ ಸೆಳೆದಾಗ ಬಾಬರಿ ಮಸೀದಿ ಕೆಡಹಿದ್ದನ್ನಾಗಲಿ, 1992ರ ಡಿಸೆಂಬರ್ 6ರಂದು ನಡೆದ ಹಿಂಸಾಚಾರವನ್ನಾಗಲಿ ತಾನು ಸಮರ್ಥಿಸುವುದಿಲ್ಲವೆಂದು ಹೇಳಿದರು.

("ಉದಯವಾಣಿ" – 7 ಅಕ್ಟೋಬರ್ 2010)

## ಅಮೆರಿಕದಲ್ಲೂ ಆಹಾರದ ಕೊರತೆ

**ವಾಷಿಂಗ್ಟನ್:** ಆರ್ಥಿಕ ಹಿನ್ನಡೆಯ ಪರಿಣಾಮ ಅಮೆರಿಕದ ಪ್ರತೀ ಏಳು ಕುಟುಂಬಗಳ ಪೈಕಿ ಒಂದು ಕುಟುಂಬ ಹಸಿವಿನಿಂದ ಬಳಲುತ್ತಿತ್ತು. 2007-09ರ ಅವಧಿಯಲ್ಲಿ ತುರ್ತು ಸಂದರ್ಭಗಳಲ್ಲಷ್ಟೇ ಆಹಾರ ಪಡೆದ ಕುಟುಂಬಗಳ ಸಂಖ್ಯೆ ದುಪ್ಪಟ್ಟಾಗಿತ್ತು ಎಂದು ಅಧ್ಯಯನ ವರದಿ ತಿಳಿಸಿದೆ.

2009ರಲ್ಲಿ ಅಮೆರಿಕದ ಶೇ. 85ರಷ್ಟು ಕುಟುಂಬಗಳು ಆಹಾರ ಭದ್ರತೆಯನ್ನು ಹೊಂದಿದ್ದವು. ಈ ಕುಟುಂಬಗಳ ಎಲ್ಲ ಸದಸ್ಯರು ದಿನದ ಮೂರು ಹೊತ್ತಿಗೆ ಬೇಕಾಗುವ ಆಹಾರ ಧಾನ್ಯಗಳನ್ನು ಪಡೆಯುವ ಶಕ್ತಿ ಹೊಂದಿದ್ದರು. ಆದರೆ, ಉಳಿದ ಶೇ. 14.7ರಷ್ಟು ಕುಟುಂಬಗಳು ಆಹಾರ ಅಭದ್ರತೆಯ ಪರಿಸ್ಥಿತಿ ಎದುರಿಸುತ್ತಿದ್ದವು. ವರ್ಷದ ಕೆಲವೊಂದು ದಿನಗಳಲ್ಲಿ ಒಂದು ಹೊತ್ತಿನ ಆಹಾರ ಪಡೆಯುವುದು ಸಹ ಈ ಕುಟುಂಬಗಳಿಗೆ ಸಾಧ್ಯವಾಗುತ್ತಿರಲಿಲ್ಲ ಎಂದು ಅಮೆರಿಕದ ಕೃಷಿ ಇಲಾಖೆಯ ಆರ್ಥಿಕ ಸಂಶೋಧನಾ ಸೇವೆ ನಡೆಸಿದ ಸಮೀಕ್ಷಾ ವರದಿ ಹೇಳಿದೆ.

("ಉದಯವಾಣಿ" – 17 ನವೆಂಬರ್ 2010)

# ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಗತಿ

(ಜುಲಾಯಿ ಕೊನೆಯ ವಾರದಲ್ಲಿ ಲಂಡನಿನ ಹದೀಖತುಲ್ ಮಹ್‌ದಿಯಲ್ಲಿ ಜರಗಿದ 44ನೇ ಯು.ಕೆ. ಅಹ್ಮದಿಯಾ ವಾರ್ಷಿಕ ಸಮ್ಮೇಳನದ ಎರಡನೇ ದಿನದಂದು ಅಹ್ಮದಿಯಾ ಪಂಚಮ ಖಲೀಫರವರು ಮಾಡಿದ ಭಾಷಣದಿಂದ ಸಂಗ್ರಹಿತ)

★ ಒಟ್ಟು 198 ರಾಷ್ಟ್ರಗಳಲ್ಲಿ ಅಹ್ಮದಿಯತ್ ಸ್ಥಾಪಿಸಲ್ಪಟ್ಟಿದೆ.

★ 1984ರ ಬಳಿಕ 107 ಹೊಸ ರಾಷ್ಟ್ರಗಳಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿತು.

★ ಈ ವರ್ಷ ತುರ್ಕಿಮಾನಿಸ್ಥಾನ್, ಡೊಮಿನಿಕ (Domonica), ಫಾರೋ ಐಲ್ಯಾಂಡ್ (Faroe Island) ಎಂಬ ಮೂರು ದೇಶಗಳಲ್ಲಿ ಜಮಾಅತ್ ಪ್ರವೇಶಿಸಿದೆ.

★ ಈ ವರ್ಷ ಲೋಕದೆಲ್ಲೆಡೆ 516 ಹೊಸ ಘಟಕಗಳು ಸ್ಥಾಪಿಸಲ್ಪಟ್ಟಿವೆ.

★ ಈ ವರ್ಷ 742 ಸ್ಥಳಗಳಲ್ಲಿ ಪ್ರಥಮವಾಗಿ ಅಹ್ಮದಿಯತ್ ಕಾಲೂರಿದೆ.

★ ಈ ವರ್ಷ 119 ದೇಶಗಳಿಂದ 407 ಜನಾಂಗಗಳಿಗೆ ಸೇರಿದ 4 ಲಕ್ಷ 58 ಸಾವಿರದ 760 ಮಂದಿ ಅಹ್ಮದಿಯಾ ಮುಸ್ಲಿಂ ಜಮಾಅತಿನಲ್ಲಿ ಸೇರಿದ್ದಾರೆ.

★ ಈ ವರ್ಷ 115 ಹೊಸ ಮಸೀದಿಗಳು ನಿರ್ಮಿಸಲ್ಪಟ್ಟಿವೆ. 179 ಮಸೀದಿಗಳು ನಮಾಝಿಗಳ ಸಹಿತ ಜಮಾಅತಿಗೆ ದೊರೆತಿವೆ.

★ ಈ ವರ್ಷ 87 ಹೊಸ ಪ್ರಚಾರ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ಈ ತನಕ 102 ದೇಶಗಳಲ್ಲಿರುವ ಪ್ರಚಾರ ಕೇಂದ್ರಗಳ ಒಟ್ಟು ಸಂಖ್ಯೆ 2204.

★ 87 ರಾಷ್ಟ್ರಗಳಿಂದ ವಕ್ಫೆನೌ ಮಕ್ಕಳ ಒಟ್ಟು ಸಂಖ್ಯೆ 41,220.

★ ನಿಝಾಮೆ ವಸಿಯ್ಯತ್‌ನಲ್ಲಿ ಸೇರಿದವರ ಸಂಖ್ಯೆ 1 ಲಕ್ಷದ ಒಂಬತ್ತು ಸಾವಿರ.

*(ಆಧಾರ: "ಬದ್ರ್" ಉರ್ದು ವಾರ ಪತ್ರಿಕೆ 11-11-2010)*

ಓದಿದ್ದು

## ಬ್ಲೇರ್ ನಾದಿನಿ ಇಸ್ಲಾಮಿಗೆ

ಲಂಡನ್ : ಮಾಜಿ ಬ್ರಿಟಿಷ್ ಪ್ರಧಾನಿ ಟೋನಿ ಬ್ಲೇರ್ ಅವರು 2007ರಲ್ಲಿ ಹುದ್ದೆಯಿಂದ ಕೆಳಗಿಳಿದ ಬಳಿಕ ರೋಮನ್ ಕ್ಯಾಥೋಲಿಕ್ ಆಗಿ ಬದಲಾಗಿದ್ದರೆ ಇದೀಗ ಅವರ ನಾದಿನಿ ಇಸ್ಲಾಮಿಗೆ ಮತಾಂತರಗೊಂಡಿದ್ದಾರೆ.

ಇರಾನ್‌ನಲ್ಲಿ ತನಗೆ ಪವಿತ್ರ ಅನುಭವವಾದ ಬಳಿಕ ತಾನು ಇಸ್ಲಾಮಿಗೆ ಮತಾಂತರಗೊಳ್ಳಲು ನಿರ್ಧರಿಸಿದೆನೆಂದು ಬೂತ್ ಹೇಳಿದ್ದಾರೆ. ಅವರು ದಿನಾ ಕುರಾನ್ ಓದುತ್ತಾರೆ ಮತ್ತು ಬುರ್ಖಾ ಧರಿಸುವ ಸಾಧ್ಯತೆಯನ್ನು ಅಲ್ಲಗಳೆಯುವುದಿಲ್ಲ.

("ಉದಯವಾಣಿ" – 26 ಅಕ್ಟೋಬರ್ 2010)

## ಸಂತಾನೋತ್ಪತ್ತಿಗೆ ಪುರುಷ ಬೇಕಾಗಿಲ್ಲ

ಸಂತಾನೋತ್ಪತ್ತಿಗೆ ಮಹಿಳೆಯರು ಪುರುಷರನ್ನೇ ಆಶ್ರಯಿಸಬೇಕಾದ್ದಿಲ್ಲ ಎಂದು ಕೆಲವು ಸಮಯದ ಹಿಂದೆ ಸಂಶೋಧನೆಯೊಂದರ ಫಲಿತಾಂಶದ ಬಳಿಕ ಹೇಳಲಾಗಿತ್ತು. ಮಹಿಳೆಯು ತನ್ನ ಅಸ್ಥಿಮಜ್ಜೆಯಿಂದಲೇ ವೀರ್ಯಾಣು ಉತ್ಪಾದಿಸಲು ಸಮರ್ಥಳು ಮತ್ತು ಅದರಿಂದಲೇ ಅವಳು ಮಗು ಪಡೆಯಬಹುದು ಎಂದೂ ವಿಜ್ಞಾನಿಗಳು ಹೇಳಿದ್ದಾರೆ.

("ಉದಯವಾಣಿ" – 19 ನವೆಂಬರ್ 2010)

ವಾರ್ತೆ

## ಮಜ್ಲಿಸ್ ಅನ್ಸಾರುಲ್ಲಾ ಮಡಿಕೇರಿ ಸ್ಥಳೀಯ ಇಜ್ತಿಮಾ

ಮಜ್ಲಿಸ್ ಅನ್ಸಾರುಲ್ಲಾ ಮಡಿಕೇರಿ ಘಟಕದ ಸ್ಥಳೀಯ ಇಜ್ತಿಮಾ ಸಪ್ಟೆಂಬರ್ 19ರಂದು ಮಸ್ಜಿದ್ ಬೈತುಲ್ ಹುದಾದಲ್ಲಿ ಜರಗಿತು.



ಬೆಳಿಗ್ಗೆ 4.30ಕ್ಕೆ ತಹಜ್ಜುದ್ ನಮಾಝ್‌ನೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಮೌಲವಿ ಟಿ. ಇರ್ಶಾದ್ ಸಾಹೇಬರು ಖುರ್‌ಆನ್ ದರ್ಸ್ ನೀಡಿದರು. ಮುಖ್ಯ ಅತಿಥಿಗಳಾಗಿ ಮೌಲವಿ ಸಿ. ಪಿ. ಮೊಹಿದಿನ್ ಕುಟ್ಟಿ ಸಾಹೇಬ್ ಮತ್ತು ಮೌಲವಿ ಮುಹಮ್ಮದುಣ್ಣಿ ಸಾಹೇಬ್ (ಮುಳ್ಳೂರ್‌ಕರ್) ಕೇರಳದಿಂದ ಆಗಮಿಸಿದ್ದರು. ಮಧ್ಯಾಹ್ನ 2 ಗಂಟೆಗೆ ಜ। ಎಂ. ಎ. ಬಶೀರ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಜ। ಎಂ. ಎಫ್. ಬಶೀರ್ ಸಾಹೇಬ್ ಖುರ್‌ಆನ್ ಪಠಿಸಿದರು. ಝಈಂ ಅನ್ಸಾರುಲ್ಲಾ ಜ। ಕೆ. ಎಂ. ಉಮರ್ ಸಾಹೇಬ್ ಪ್ರತಿಜ್ಞೆ ಹೇಳಿಕೊಟ್ಟರು. ಎಂ. ಯು. ಮುಸ್ತಾಖ್ ಸಾಹೇಬ್ ಉರ್ದು ನಝ್ಮ್ ಹಾಡಿದರು.

ಖುರ್‌ಆನ್ ಪಠಣ, ನಝ್ಮ್, ಖಸೀದ, ಭಾಷಣ, ಕ್ವಿಝ್ ಇತ್ಯಾದಿ ಸ್ಪರ್ಧೆಗಳು ನಡೆದವು.

## ನಿಧನ ವಾರ್ತೆ

### ಕೆ. ಎ. ಸಾಲಿಹ್ ಸಾಹೇಬ್



**ಉದುಮ** : ಜನಾಬ್ ಕೆ. ಎ. ಸಾಲಿಹ್ ಸಾಹೇಬ್ ಕಳೆದ ಆಗಸ್ಟ್ 16ರಂದು ಸ್ವಗೃಹದಲ್ಲಿ ತನ್ನ 85ನೇ ವರ್ಷ ಪ್ರಾಯದಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಅಹ್ಮದಿಯಾ ಜಮಾಅತಿಗೆ ಸೇರುವ ಮೊದಲು ಅವರು ಕಮ್ಯುನಿಸ್ಟ್ ಕಾರ್ಯಕರ್ತರಾಗಿದ್ದು ಎ. ಕೆ. ಗೋಪಾಲನ್ ಲೋಕಸಭೆಯಲ್ಲಿ ವಿರೋಧ ಪಕ್ಷ ನಾಯಕರಾಗಿದ್ದ ಕಾಲದಲ್ಲಿ ಅವರ ಪ್ರೈವೇಟ್ ಸೆಕ್ರಿಟರಿಯಾಗಿದ್ದರು.

ರಾಜಕೀಯ ಚಟುವಟಿಕೆಗಳನ್ನು ಬಿಟ್ಟ ನಂತರ ಅವರು ಅಧ್ಯಾಪಕರಾಗಿ ಸೇವೆಸಲ್ಲಿಸಿದ್ದರು. ಫಾರೂಕ್‌ನ ರೌಳತುಲ್ ಉಲೂಂ ಅರೆಬಿಕ್ ಕಾಲೇಜ್‌ನಲ್ಲಿ ಅಧ್ಯಾಪಕನಾಗಿಯೂ ಇಮಾಮುಸ್ಸಲಾತ್ ಆಗಿಯೂ ಅವರು ನೇಮಿಸಲ್ಪಟ್ಟಿದ್ದರು.

ಮೊಗ್ರಾಲ್ ಅಹ್ಮದಿಯಾ ಘಟಕದಲ್ಲಿ ಅವರು ವಿವಿಧ ಹುದ್ದೆಗಳನ್ನು ವಹಿಸಿಕೊಂಡು ಸೇವೆ ಸಲ್ಲಿಸಿದ್ದಾರೆ. ದಿವಂಗತರು ತನ್ನ ಪತ್ನಿಯನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ. ಆಮೀನ್.

ಅಹ್ಮದಿಯರಿಗೆ ಸುತ್ತೋಲೆ

# ತ್ಯಾಗ ಬಲಿದಾನಗಳ ಪ್ರತಿಫಲ ಅಧಿಕ

ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು ದಿನಾಂಕ : 05-11-2010ರಂದು
ಲಂಡನಿನ ಬೈತುಲ್–ಫುತೂಹ್ ಮಸೀದಿಯಲ್ಲಿ ಮಾಡಿದ "ಖುತುಬ ಜುಮುಅದ' ಸಾರಾಂಶ.

"ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ಖರ್ಚು ಮಾಡಿ, ಆ ಬಳಿಕ ತಾವು ಖರ್ಚು ಮಾಡಿದ್ದನ್ನು (ಅದನ್ನು ಪಡೆದವರೊಡನೆ) ಔದಾರ್ಯವಾಗಿ ಬಣ್ಣಿಸದೆಯೂ (ಅವರ ಮನಸ್ಸನ್ನು) ನೋಯಿಸದೆಯೂ ಇರುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಯಾವುದೇ ಭಯವಿಲ್ಲ; ಅವರು ದುಃಖಿಸಲಾರರು.'' (ಪವಿತ್ರ ಖುರ್‌ಆನ್ 2:263)

"(ಅಲ್ಲಾಹನ ಮಾರ್ಗದಲ್ಲಿ) ಗೋಪ್ಯವಾಗಿಯೂ ಬಹಿರಂಗವಾಗಿಯೂ ರಾತ್ರಿಯಲ್ಲೂ ಹಗಲಿನಲ್ಲೂ ತಮ್ಮ ಧನವನ್ನು ವ್ಯಯಮಾಡುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು; ಅವರು ದುಃಖಿತರೂ ಆಗಲಾರರು." (ಪವಿತ್ರ ಖುರ್‌ಆನ್ 2:275)

ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಪ್ರಾರಂಭದಿಂದ ಅಂತ್ಯದವರೆಗೆ ವಿವಿಧ ಕಡೆ ಅಲ್ಲಾಹನ ಮಾರ್ಗದಲ್ಲಿ ಧನವನ್ನು ವ್ಯಯಮಾಡುವ ಕುರಿತು ಸತ್ಯವಿಶ್ವಾಸಿಗಳ ಗಮನ ಸೆಳೆದಿದ್ದಾನೆ ಮತ್ತು ಹಲವು ಉದಾಹರಣೆಗಳಿಂದ ಸತ್ಯವಿಶ್ವಾಸಿ ಅಲ್ಲಾಹನ ಮಾರ್ಗದಲ್ಲಿ ವ್ಯಯ ಮಾಡಿದ ಪರಿಣಾಮವಾಗಿ ಏನೆಲ್ಲಾ ಪ್ರಯೋಜನಗಳನ್ನು ಪಡೆಯುತ್ತಾನೆ ಎಂದು ವಿವರಿಸಿದ್ದಾನೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಮಾಡುವ ತ್ಯಾಗ ಅಲ್ಲಾಹನ ಸಂತೃಪ್ತಿಯ ಉದ್ದೇಶವನ್ನು ಹೊಂದಿರಬೇಕು.

ಒಂದು ಕಡೆ ಅಲ್ಲಾಹು ಈ ರೀತಿ ನುಡಿಯುತ್ತಾನೆ: "ನಿಜವಾದ ಸತ್ಯವಿಶ್ವಾಸಿಯು ತನ್ನ ಪ್ರಭುವಿನ ಸಂತುಷ್ಟಿಗಾಗಿ ಮಾತ್ರ ವ್ಯಯಮಾಡುವವನಾಗಿರುತ್ತಾನೆ." ಕಾರಣ, ನಿಜವಾದ ಸತ್ಯವಿಶ್ವಾಸಿ ತನ್ನ ಧನವನ್ನು ಖರ್ಚು ಮಾಡುವುದಕ್ಕಿಂತ ಮೊದಲು ತನ್ನ ಪ್ರಭುವಿನ ಸಂತೃಪ್ತಿಯ ಲಕ್ಷ್ಯವನ್ನು ಹೊಂದಿದವನಾಗಿರುತ್ತಾನೆ.. ಅಲ್ಲಾಹನ ಸಂಪ್ರೀತಿ ಗಳಿಸಲಾಗದ ಕಾರ್ಯಗಳಿಗೆ ಅವನು ಖರ್ಚು ಮಾಡುವುದಿಲ್ಲ. ಈ ವಿಷಯವನ್ನು ಎಲ್ಲರೂ ತಿಳಿಯುವವರಾದರೆ, ಜಮಾಅತಿನ ಹಾಗೂ ತನ್ನ ಆಧ್ಯಾತ್ಮಿಕ ಉನ್ನತಿಯಲ್ಲದೆ ಮನೆಗಳಲ್ಲಿರುವ ದಂಪತಿಗಳ ಇತರ ಸಮಸ್ಯೆಗಳು ಕೂಡ ಅಂತ್ಯಕಾಣಬಹುದು. ಇದರಲ್ಲಿ ಮಹಿಳೆಯರನ್ನು ಮಾತ್ರ ದೂಷಿಸಲು ಆಗುವುದಿಲ್ಲ. ಎಷ್ಟೋ ವಿಧದಲ್ಲಿ ಗಂಡಸರು ಹೊರಗೆ ತಮ್ಮ ಗೆಳೆಯರಲ್ಲಿ ದುಂದುವೆಚ್ಚ ಮಾಡುತ್ತಾರೆ ಮತ್ತು ಮನೆಯಲ್ಲಿ ಖರ್ಚು ಮಾಡುವ ವಿಷಯದಲ್ಲಿ ಜಿಪುಣತನ ಹುಟ್ಟುಹಾಕುತ್ತಾರೆ. ಗಂಡನಾದವನು ತನ್ನ ಹೆಂಡತಿಯು ಮಿತಿಮೀರಿ ಖರ್ಚು ಮಾಡುವವಳಾಗಿದ್ದಾಳೆ ಎಂದು ದೂರುತ್ತಾನೆ. ಆ ಕಾರಣ ಮನೆಯ ಶಾಂತಿ ಭಂಗ ಉಂಟಾಗುತ್ತದೆ. ಎಲ್ಲಾ ತರಹದ ಖರ್ಚು ಅಲ್ಲಾಹನ ಸಂತೃಪ್ತಿಗೋಸ್ಕರವಾಗಿದ್ದರೆ ಮನೆಯಲ್ಲಿ ಶಾಂತಿನೆಮ್ಮದಿ ದೊರೆಯುತ್ತದೆ. ಮಕ್ಕಳ ಸುಧಾರಣೆಯೂ ಆಗಬಹುದು. ಈ ರೀತಿ ನಮಗೆ ಅಲ್ಲಾಹನಿಗೋಸ್ಕರ ತ್ಯಾಗಮಾಡಲು ಪ್ರೇರಣೆ ದೊರೆಯುತ್ತದೆ. ಅಲ್ಲಾಹನ ಅಪಾರವಾದ ಅನುಗ್ರಹದಿಂದ ಜಮಾಅತಿನ ಬಹುಭಾಗ ತಮ್ಮ ಕುಟುಂಬದ ಹಕ್ಕುಗಳನ್ನು ಪೂರೈಸುವ ಜೊತೆಯಲ್ಲಿ ಅಲ್ಲಾಹನ ಮಾರ್ಗದಲ್ಲಿಯೂ ವ್ಯಯಮಾಡುವವರಾಗಿದ್ದಾರೆ. ಇದರಲ್ಲಿ ಬಡವ ಬಲ್ಲಿದ ಎಂಬ ಭೇದವಿಲ್ಲದೆ ತಮ್ಮ ತಮ್ಮ ಅರ್ಹತೆಗನುಸಾರವಾಗಿ ತ್ಯಾಗಮಾಡುವವರಾಗಿದ್ದಾರೆ. ಇವರಲ್ಲಿ ಕೆಲವರು ಜಮಾಅತಿಗಾಗಿ ಖರ್ಚು ಮಾಡುವುದಲ್ಲದೆ ಇತರ ಕಾರ್ಯಗಳಿಗೋಸ್ಕರ ಸಹ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆದರೂ ತಾವು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಪಾಲಿಸಿದೆವೋ ಇಲ್ಲವೋ ಎಂಬ ಚಿಂತೆಯಲ್ಲಿರುತ್ತಾರೆ. ಇವರ ತ್ಯಾಗ ಸ್ವೀಕಾರಾರ್ಹವಾಗಿದೆ ಎಂದು ತಿಳಿಸಿದಾಗ ಕೃತಜ್ಞತೆಯ ಪತ್ರಗಳು ಬರುತ್ತವೆ. ಹಾಗೆ ಈ ತ್ಯಾಗ ಮಾಡುವವರು ಕೇವಲ ಭಾರತ, ಪಾಕಿಸ್ತಾನದವರು ಮಾತ್ರವಲ್ಲ, ಆಫ್ರಿಕಾ ಖಂಡದ ಮತ್ತು ದೂರ ದೂರ ದೇಶ ನಿವಾಸಿ ಅಹ್ಮದಿಯರು ಸಹ ಶಾಮೀಲಾಗಿದ್ದಾರೆ. ಅಲ್ಲಾಹನ ಮಾರ್ಗದಲ್ಲಿ ವಿತ್ತೀಯ ತ್ಯಾಗ ಮಾಡಿದವರಾದ ಇವರು, ಅವರ ಭಯ, ವಿನಯಶೀಲತೆ ಪರಿಶೀಲಿಸಿದಾಗ ಇವರು ಅಲ್ಲಾಹನ ಸಂತೃಪ್ತಿಗಾಗಿ ಮಾತ್ರ ಕಳಕಳ ಹೊಂದಿದವರಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಯಾವತ್ತೂ ತಾವು ಕೋಟಿಗಟ್ಟಲೆ ರೂಪಾಯಿಗಳನ್ನು ನೀಡಿದವರಾಗಿದ್ದೇವೆ ಎಂಬ ವಿಷಯ ಬಹಿರಂಗಪಡಿಸುವುದಿಲ್ಲ. ತಾವು ಉಪಕಾರ ಮಾಡಿದ್ದೇವೆ ಎಂಬ ಭಾವನೆಯಿಲ್ಲ. ಅವರು ತುಂಬ ವಿನಯಶೀಲರಾಗಿ ಅಲ್ಲಾಹನ ಭಕ್ತದಾಸರಾಗಿ ತ್ಯಾಗ ಮಾಡುವವರಾಗಿರುತ್ತಾರೆ.

ಜಮಾಅತಿನ ಬಡವರು ಕೂಡ ತಮ್ಮ ಅರ್ಹತೆಗಿಂತ ಮಿಗಿಲಾಗಿ ತಮ್ಮ ಹೆಂಡತಿ ಮಕ್ಕಳ ಆವಶ್ಯಕತೆಗಳನ್ನು ಬದಿಗಿಟ್ಟು ತ್ಯಾಗ ಮಾಡುವವರಾಗಿದ್ದಾರೆ. ಅವರು ಈ ತ್ಯಾಗದ ಪ್ರತಿಫಲವನ್ನು ಬಯಸುವವರಲ್ಲ, ಅಲ್ಲಾಹು ಕೂಡ ಅವರೊಡನೆ ಇದೇ ರೀತಿ ವರ್ತಿಸುವವನಾಗಿದ್ದಾನೆ. ಅವರ ಈ ತ್ಯಾಗಗಳ ಬದಲಾಗಿ ಹೆಚ್ಚು ಹೆಚ್ಚು ಪ್ರತಿಫಲವನ್ನು ದಯಪಾಲಿಸುತ್ತಾನೆ. ಕಾಣದ ರೀತಿಯಲ್ಲಿ ಸಲಹುವವನಾಗಿದ್ದಾನೆ. ಅಲ್ಲಾಹನ ವಚನದಂತೆ "ಅವರಿಗೆ ಯಾವುದೇ ಭಯವಿಲ್ಲ, ಅವರು ದುಃಖಿಸಲಾರರು" ಎಂಬ ಸಿದ್ಧಾಂತ ಅನ್ವಯವಾಗುತ್ತದೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನಲ್ಲಿ ಇಂತಹ ಹಲವು ದೃಷ್ಟಾಂತಗಳನ್ನು ನಾವು

ಕಾಣುತ್ತೇವೆ. ಜನರು ಈ ಜಮಾಅತಿಗೆ ಎಲ್ಲಿಂದ ಧನ ದೊರೆಯುತ್ತದೆ ಎಂದು ಚಿಂತಿಸುತ್ತಾರೆ. ಆದರೆ ಅವರಿಗೆ ಈ ವಿಷಯ ಗೊತ್ತಿಲ್ಲ. ಅದೇನೆಂದರೆ ಅಲ್ಲಾಹು ಜಮಾಅತಿನ ಅಲ್ಪ ಸ್ವಲ್ಪ ಹಣದಲ್ಲಿ ನಾವು ಊಹಿಸದಷ್ಟು ಪವಾಡ ಸದೃಶ ರೂಪದಲ್ಲಿ ನೆರವನ್ನು ಮಾಡುತ್ತಾನೆ. ಈ ಧನಕ್ಕೆ ಏನೂ ಬೆಲೆಯಿಲ್ಲ. ಭಕ್ತಿ, ಅನುಸರಣೆ ಮತ್ತು ತ್ಯಾಗ ಭಾವನೆಯ ಸೀಮಾತೀತ ನಿಧಿ ಈ ಬಡಪಾಯಿ ಅಹ್ಮದಿ ಎದೆಯಿಂದ ಉದ್ಭವಿಸುತ್ತದೆ. ಪ್ರಪಂಚದಾದ್ಯಂತ ಇಂತಹ ಸಾವಿರಾರು ಉದಾಹರಣೆಗಳು ಕಾಣಸಿಗುತ್ತವೆ.

ಇಂದು ಇಡೀ ಪ್ರಪಂಚದಲ್ಲಿ ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ ಕೃತಿರೂಪದಲ್ಲಿ ಅಲ್ಲಾಹನ ವಚನದಂತೆ ಹಗಲೂ ರಾತ್ರಿ ಅಲ್ಲಾಹನ ಮಾರ್ಗದಲ್ಲಿ ವ್ಯಯಮಾಡುವವರು. 24 ತಾಸು ತ್ಯಾಗಗಳ ಸರಣಿ ಜಾರಿಯಲ್ಲಿದೆ. ಅಲ್ಲಾಹನ ಅನುಗ್ರಹದಿಂದ ಈ ಜಮಾಅತ್ ಪ್ರಪಂಚದ ಪ್ರತಿಯೊಂದು ದೇಶದಲ್ಲಿದೆ. ಎಲ್ಲೋ ಒಂದು ಕಡೆ ರಾತ್ರಿಯಿದ್ದರೆ ಇನ್ನೊಂದು ಕಡೆ ಹಗಲಿದೆ. ಇದೀಗ ಖುತುಬ ನೀಡುತ್ತಿದ್ದೇನೆ. ಇಡೀ ಪ್ರಪಂಚದಲ್ಲಿ ವಾಗ್ದಾನಗಳ ಹಾಗೂ ವಸೂಲಿಗಳ ಕಾರ್ಯ ಪ್ರಾರಂಭಗೊಳ್ಳುತ್ತವೆ. ಅಂತೂ "ರಾತ್ರಿಯಲ್ಲೂ ಹಗಲಿನಲ್ಲೂ ಧನವನ್ನು ವ್ಯಯ ಮಾಡುವವರು" ಎಂಬ ದೃಶ್ಯ ಈಗ ಕೇವಲ ಜಮಾಅತ್ ಅಹ್ಮದಿಯಾದಲ್ಲಿ ಮಾತ್ರ ಕಾಣಬಹುದಾಗಿದೆ. ಇಡೀ ಜಗತ್ತನ್ನು ಒಟ್ಟುಗೂಡಿಸುವ ಈ ಸಂಕೇತವು ಮಸೀಹೆ – ಮುಹಮ್ಮದೀ ಒಂದೇ ಜನಾಂಗದ ರೂಪದಲ್ಲಿ ಕಾಣುವ ಕಲ್ಪನೆಯನ್ನು ನೀಡಿದ್ದರು. ಅಂತೂ ನಮ್ಮ ಕೆಲಸ ತ್ಯಾಗದಲ್ಲಿ ಮುಂದುವರಿಯುವುದಾಗಿದೆ. ಇದರ ಫಲಿತಾಂಶ ಅಲ್ಲಾಹನ ಕೈಯಲ್ಲಿದೆ. ಯಾರು ಪರಮದಯಾವಂತನ (ಅಲ್ಲಾಹನ) ಭಕ್ತದಾಸರಾಗಿ ತ್ಯಾಗ ಬಲಿದಾನಗಳನ್ನು ಮಾಡುವವರಾಗುತ್ತಾರೋ ಅಲ್ಲಾಹು ಈ ತ್ಯಾಗಗಳ ಪ್ರತಿಫಲ ಅಧಿಕಾಧಿಕ ಸಂಖ್ಯೆಯಲ್ಲಿ ವೃದ್ಧಿಗೊಳಿಸುತ್ತಾನೆ. ಆದುದರಿಂದ ನೀವು ತ್ಯಾಗ ಮಾಡುವವರಾಗಿರಿ. ಇನ್‌ಶಾಅಲ್ಲಾಹ್ ಜಮಾಅತಿನ ಈ ತ್ಯಾಗಗಳಿಂದ ಒಂದು ದಿನ ಅಲ್ಲಾಹನ ಅನುಗ್ರಹದಿಂದ ನಮ್ಮ ಅಲ್ಪ ಸಂಖ್ಯಾತ ಸ್ಥಿತಿ ಬಹುಸಂಖ್ಯಾತದಲ್ಲಿ ಪರಿವರ್ತನೆಗೊಳ್ಳಬಹುದು. ಆದುದರಿಂದ ಎಂದೂ ದಣಿದವರಾಗಬಾರದು. ಎಂದೂ ದಣಿದವರಾಗಬಾರದು.

ಹುಝೂರ್ ತಹರೀಕೆ ಜದೀದಿನ ಹೊಸ ವರ್ಷದ ಘೋಷಣೆಯನ್ನು ಮಾಡುತ್ತಾ ನುಡಿದರು: ಅಲ್ಲಾಹನ ಅನುಗ್ರಹದಿಂದ ತಹರೀಕೆ ಜದೀದಿನ 76ನೇ ವರ್ಷ ಅಂತ್ಯಗೊಂಡು ಇಂದು ಅದರ 77ನೇ ಸಾಲಿನ ಪ್ರಾರಂಭದ ಘೋಷಣೆಯನ್ನು ಮಾಡುತ್ತಿದ್ದೇನೆ. ಕಳೆದ ವರ್ಷ ಹಿಂದಿನ ವರ್ಷಗಳಂತೆಯೇ ಮಿಗಿಲಾಗಿ ಫಲಪ್ರದವಾಗಿ ಪರಿಣಮಿಸಿದೆ. ಜಾಗತಿಕ ಜಮಾಅತ್ ಅಹ್ಮದಿಯಾವು ಈ ವರ್ಷ ಈ ಚಳುವಳಿಯಲ್ಲಿ 54,68,500/- ಸ್ಟರ್ಲಿಂಗ್ ಪೌಂಡ್ ವಿತ್ತೀಯ ತ್ಯಾಗವನ್ನು ಪ್ರಸ್ತುತಪಡಿಸಿದೆ. ಇದು ಹಿಂದಿನ ವರ್ಷಕ್ಕಿಂತ 5,22,000/- ಪೌಂಡ್ ಅಧಿಕವಾಗಿದೆ.

ಪಾಕಿಸ್ತಾನವು ತನ್ನ ಪ್ರಥಮ ಸ್ಥಾನದ ಘನತೆಯನ್ನು ಕಾಪಾಡಿಕೊಂಡಿದೆ. ಪಾಕಿಸ್ತಾನದಲ್ಲಿ ಕಡು ವಿರೋಧ ಸ್ಥಿತಿಯಲ್ಲೂ ಆರ್ಥಿಕ ಮುಗ್ಗಟ್ಟಿನ ಸ್ಥಿತಿಯಲ್ಲೂ ಹಾಗೂ ದೊಡ್ಡ ಪ್ರಮಾಣದಲ್ಲಿ ಆದ ನೆರೆಹಾವಳಿಯ ವಿನಾಶಕಾರಿ ಸ್ಥಿತಿಯ ಹೊರತಾಗಿಯೂ ಪಾಕಿಸ್ತಾನಿ ಅಹ್ಮದಿಯರು ತಮ್ಮ ಧೈರ್ಯ ಹಾಗೂ ದೃಢ ನಿಶ್ಚಯವನ್ನು ಎತ್ತಿ ಹಿಡಿದಿದ್ದಾರೆ. ದ್ವಿತೀಯ ಸ್ಥಾನದಲ್ಲಿ ಬ್ರಿಟನ್ ಇದೆ. ಅದು ಅಮೇರಿಕಾ ಹಾಗೂ ಜರ್ಮನಿಯನ್ನು ಹಿಂದಿಕ್ಕಿದೆ. ಇದರಲ್ಲಿ ಬ್ರಿಟನಿನ ಮಹಿಳೆಯರ ಪಾತ್ರವೂ ಹೆಚ್ಚಿನದ್ದಾಗಿದೆ. ಮೂರನೇ ಸ್ಥಾನದಲ್ಲಿ ಅಮೇರಿಕಾ, ನಾಲ್ಕನೆಯದು ಜರ್ಮನಿ, ಐದನೆಯದು ಕೆನಡಾ ಮತ್ತೆ ಇಂಡಿಯಾ, ಇಂಡೋನೇಶಿಯಾ, ಆಸ್ಟ್ರೇಲಿಯಾ ಮತ್ತು ಒಂದು ಅರಬ್ ರಾಷ್ಟ್ರ (ಕಾರಣಾಂತರದಿಂದ ಅದರ ಹೆಸರು ಹೇಳಿಲ್ಲ) ಹಾಗೂ ಸ್ವಿಝರ್‌ಲ್ಯಾಂಡ್, ಬೆಲ್ಜಿಯಮ್ ಕ್ರಮಾನುಸಾರ ಮುಂಚೂಣಿಯಲ್ಲಿವೆ.

ಸ್ಥಳೀಯ ಕರೆನ್ಸಿಯ ಕ್ರಮವಾಗಿ ವಿತ್ತೀಯ ತ್ಯಾಗ ಮಾಡುವವರಲ್ಲಿ ಪ್ರಥಮ ಸ್ಥಾನದಲ್ಲಿ ಅರಬ್ ರಾಷ್ಟ್ರವೇ ಇದೆ (ಅದರ ಹೆಸರು ನಾನು ಹೇಳಬಯಸುವುದಿಲ್ಲ). ಅದು 46%ರ ಹೆಚ್ಚಳ ತೋರಿಸಿದೆ. ದ್ವಿತೀಯ ಸ್ಥಾನದಲ್ಲಿ ಭಾರತವಿದೆ. ಅದು 44%ಕ್ಕಿಂತ ಹೆಚ್ಚು (44.32%) ವಸೂಲಿ ಮಾಡಿದೆ. ಭಾರತದಲ್ಲಿಯೂ ತೀವ್ರ ವಿರೋಧದ ನಡುವೆಯೂ ವಿತ್ತೀಯ ತ್ಯಾಗದಲ್ಲಿ ವೇಗ ಸಾಧಿಸಿದೆ. ಅನಂತರ ಆಸ್ಟ್ರೇಲಿಯಾ, ಯು.ಕೆ., ಪಾಕಿಸ್ತಾನ, ಕೆನಡಾ, ಸ್ವಿಝರ್‌ಲ್ಯಾಂಡ್, ಅಮೇರಿಕಾ ಮತ್ತು ಬೆಲ್ಜಿಯಂ ದೇಶಗಳಿವೆ.

ವಸೂಲಿಯ ವಿವರವನ್ನು ನೀಡುತ್ತಾ ಹುಝೂರ್ ನುಡಿದರು: ಅಮೇರಿಕಾ ಪ್ರಥಮ ಸ್ಥಾನದಲ್ಲಿದೆ. ಸ್ವಿಝರ್‌ಲ್ಯಾಂಡ್ ದ್ವಿತೀಯ ಸ್ಥಾನದಲ್ಲಿದೆ. ಮತ್ತೆ ದುಬೈ, ಕಬಾಬೀರ್, ಜಪಾನ್, ಬ್ರಿಟನ್, ಬಹರೈನ್, ಅಯರ್‌ಲ್ಯಾಂಡ್, ಫ್ರಾನ್ಸ್, ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳಿವೆ.

ಇಡೀ ಪ್ರಪಂಚದಲ್ಲಿ ತಹರೀಕೆ ಜದೀದ್‌ನಲ್ಲಿ ಪಾಲ್ಗೊಳ್ಳುವವರ ಸಂಖ್ಯೆ: 6,22,000ಕ್ಕಿಂತ ಅಧಿಕವಾಗಿದೆ. ಹಾಗೂ ಈ ವರ್ಷ ಇದರಲ್ಲಿ 30,000 ಹೊಸಬರ ಸೇರ್ಪಡೆಯಾಗಿದೆ. ಇನ್ನೂ ಇದರಲ್ಲಿ ಅಧಿಕಗೊಳ್ಳುವ ಸಂಭವವಿದೆ. ನಮ್ಮ ಪ್ರಚಾರಕರ ಕರ್ತವ್ಯದಲ್ಲಿ ಸೇರಿದ ಮಾತೇನೆಂದರೆ ಎಲ್ಲಾ ಹೊಸಬರನ್ನು (ನವ್–ಮುಬಾಯಿನ್) ತಹರಿಕ್ ಜದೀದಿನ 5ನೇ ವಿಭಾಗದಲ್ಲಿ ಸೇರಿಸಿಕೊಳ್ಳಬೇಕು.

ಆಫ್ರಿಕಾ ದೇಶಗಳ ನೆಲೆಯಲ್ಲಿ ಹುಝೂರ್ ನುಡಿದರು: ನೈಜೀರಿಯಾ ಪ್ರಥಮ ಸ್ಥಾನದಲ್ಲಿದೆ ಮತ್ತು ಗಾಂಬಿಯಾ, ಘಾನಾ ದ್ವಿತೀಯ, ತೃತೀಯ ಸ್ಥಾನದಲ್ಲಿವೆ. ಇದೇ ರೀತಿ ಹೆಚ್ಚಿನ ಸ್ಪರ್ಧೆಯ ನೆಲೆಯಲ್ಲಿ ಸಿರಾಲಿಯೋನ್, ಬೆನಿನ್, ಬೊರ್ಕೀನ ಫಾಸೋ, ಕಿನ್ಯಾ, ಯುಗಾಂಡಾ, ಐವರಿ ಕೋಸ್ಟ್ ಹಾಗೂ ನೈಜರಿನ್ ಜಮಾಅತ್‌ಗಳು ಸ್ಮರಿಸಲು ಯೋಗ್ಯವಾಗಿವೆ.

ಹುಝೂರ್ ನುಡಿದರು: ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥ ಅವರ ಬಯಕೆಯಾಗಿತ್ತು – ತಹ್‌ರೀಕೆ ಜದೀದಿನ ಪ್ರಥಮ ವಿಭಾಗದ ತ್ಯಾಗಶೀಲರ ಖಾತೆಗಳನ್ನು ಜೀವಂತಗೊಳಿಸಬೇಕು. ಅದರಂತೆ ಅಲ್ಲಾಹನ ಅನುಗ್ರಹದಿಂದ ಎಲ್ಲಾ 5927 ಖಾತೆಗಳು ಜೀವಂತಪಡಿದುಕೊಂಡಿವೆ. ಇವುಗಳಲ್ಲಿ 381 ಸ್ನೇಹಿತರು ಅಲ್ಲಾಹನ ಅನುಗ್ರಹದಿಂದ ಜೀವಂತರಾಗಿದ್ದಾರೆ ಮತ್ತು ಖುದ್ದಾಗಿ ತಮ್ಮ ಚಂದಾಗಳನ್ನು ಕೊಡುತ್ತಿದ್ದಾರೆ. ಉಳಿದ 5546 ದಿವಂಗತರ ಖಾತೆಗಳಲ್ಲಿ 3222 ಖಾತೆಗಳನ್ನು ಅವರ ವಾರಸುದಾರರು ಹಾಗೂ ಉಳಿದ 2324 ಖಾತೆಗಳನ್ನು ಜಮಾಅತಿನ ಸಾತ್ವಿಕರು ಜಾರಿಯಲ್ಲಿಟ್ಟಿದ್ದಾರೆ.

ಹುಝೂರ್ ಪಾಕಿಸ್ತಾನದ ಮೂರು ದೊಡ್ಡ ಜಮಾಅತ್‌ಗಳ ಬಗ್ಗೆ ವಿವರಿಸುತ್ತಾ ನುಡಿದರು: ಪ್ರಥಮ ಸ್ಥಾನದಲ್ಲಿ ಲಾಹೋರ್, ದ್ವಿತೀಯ ಸ್ಥಾನದಲ್ಲಿ ರಬ್ವಾ ಮತ್ತು ತೃತೀಯ ಸ್ಥಾನದಲ್ಲಿ ಕರಾಚಿ ಜಮಾಅತ್‌ಗಳಿವೆ.

ಲಾಹೋರಿನ ಜಮಾಅತ್ ಹಿಂದಿನ ದಿನಗಳಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ತಮ್ಮ ಪ್ರಾಣಗಳ ಉಡುಗೊರೆಯನ್ನು ಸಮರ್ಪಿಸಿದ್ದಾರೆ. ಹಾಗೆಯೇ ಇಂದು ತಮ್ಮ ವಿತ್ತೀಯ ತ್ಯಾಗದಲ್ಲಿಯೂ ತನ್ನ ಘನತೆಯನ್ನು ಉಳಿಸಿಕೊಂಡಿದೆ.

ಹುಝೂರ್ ನುಡಿದರು: ಒಬ್ಬ ಅಹ್ಮದಿ ಅಲ್ಲಾಹನ ಸಂತೃಪ್ತಿಗಾಗಿ ಮಾತ್ರ ತ್ಯಾಗವನ್ನು ಮಾಡಬಯಸುತ್ತಾನೆ ಇದರಲ್ಲಿ ಏನಾದರೂ ಕುಂದುಕೊರತೆಯಿದ್ದರೆ ಅದು ಪದಾಧಿಕಾರಿಗಳ ಕಡೆಯಿಂದ ಆಗಿರುತ್ತದೆ. ಅವರು ಜಮಾಅತಿನ ವ್ಯಕ್ತಿಗಳನ್ನು ಅಂಡರ್ ಎಸ್ಟಿಮೇಟ್ ಮಾಡಿಕೊಂಡಿರುತ್ತಾರೆ. ನೀವು ಅಲ್ಲಾಹನ ಮೇಲೆ ಭರವಸೆ ಹೊಂದಿದವರಾದರೆ ಅಲ್ಲಾಹು ಸಹ ನಿಮಗೆ ಅನುಗ್ರಹ ನೀಡುತ್ತಾನೆ.

ಭಾರತದ ರಾಜ್ಯವಾರು ವಿತ್ತೀಯ ತ್ಯಾಗಗಳ ವಿವರಗಳನ್ನು ನೀಡುತ್ತಾ ಹುಝೂರ್ ನುಡಿದರು: ಅನುಕ್ರಮವಾಗಿ ಈ ಕೆಳಗಿನ ರಾಜ್ಯಗಳು ಮುಂಚೂಣಿಯಲ್ಲಿವೆ:

ಕೇರಳ, ಆಂಧ್ರ, ಜಮ್ಮು–ಕಾಶ್ಮೀರ, ತಮಿಳುನಾಡು, ಕರ್ನಾಟಕ, ಬಂಗಾಳ, ಒರಿಸ್ಸಾ, ಪಂಜಾಬ್, ಯು.ಪಿ., ಲಕ್ಷದ್ವೀಪ. ಇದೇ ರೀತಿ ಹುಝೂರ್ ಭಾರತದ ಪ್ರಥಮ ಹತ್ತು ರಾಜ್ಯಗಳ ತ್ಯಾಗದಲ್ಲಿ ಪಡೆದಿರುವ ಸ್ಥಾನಗಳ ವಿವರವನ್ನು ನೀಡುತ್ತಾ ನುಡಿದರು: ತಹ್‌ರೀಕೆ ಜದೀದಿನಲ್ಲಿ ಮಾಡಿದ ತ್ಯಾಗದಲ್ಲಿ ಈ ಕೆಳಗೆ ಸೂಚಿಸಿದ ಜಮಾಅತ್‌ಗಳು ಮುಂಚೂಣಿಯಲ್ಲಿವೆ.

ಹೈದರಾಬಾದ್ (ಆಂಧ್ರ ಪ್ರದೇಶ), ಕಲ್ಲಿಕೋಟೆ (ಕೇರಳ), ಖಾದಿಯಾನ್ (ಪಂಜಾಬ್), ಕೊಲ್ಕತ್ತಾ (ಬಂಗಾಳ), ಕಣ್ಣನ್ನೂರ್ ಟೌನ್ (ಕೇರಳ), ಚೆನ್ನೈ (ತಮಿಳುನಾಡು), ಕರುಲಾಯಿ (ಕೇರಳ), ಕೊಯಂಬತ್ತೂರು (ತಮಿಳುನಾಡು), ಬೆಂಗಳೂರು (ಕರ್ನಾಟಕ), ಅಸ್ನೂರ್ (ಜಮ್ಮು–ಕಾಶ್ಮೀರ).

ಅಲ್ಲಾಹು ಇವರೆಲ್ಲ ಚಂದಾದಾರರನ್ನು ಅವರ ಜೀವಿತ ಹಾಗೂ ಆರ್ಥಿಕ ಸ್ಥಿತಿಯಲ್ಲಿ ಆಮೂಲಾಗ್ರ ಅನುಗ್ರಹಗಳಿಂದ ದಯಪಾಲಿಸಲಿ ಹಾಗೂ ಅವರ ತ್ಯಾಗ ಪ್ರವೃತ್ತಿಯನ್ನು ವೃದ್ಧಿಗೊಳಿಸಲಿ. ಆಮೀನ್.

ಹುಝೂರ್ ಖುತುಬ ಜುಮುಅದ ಕೊನೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆರ್ಥಿಕ ತ್ಯಾಗದ ಕುರಿತು ಬರೆದಿರುವ ಲೇಖನದ ಒಂದು ಭಾಗವನ್ನು ಪ್ರಸ್ತುತಪಡಿಸಿದರು: "ಅಲ್ಲಾಹು ನಿಮ್ಮನ್ನು ಕಡೆಗಣಿಸುವನು ಎಂದು ಭಾವಿಸಬೇಡಿರಿ. ನೀವು ಅಲ್ಲಾಹನ ಕೈಯಿಂದ ಬಿತ್ತಲ್ಪಟ್ಟ ಬೀಜ ಆಗಿದ್ದೀರಿ. ಅಲ್ಲಾಹನು ಹೀಗೆ ನುಡಿದಿರುವನು: ಈ ಬೀಜವು ಬೆಳೆಯುವುದು, ಫಲಿಸುವುದು ಮತ್ತು ಎಲ್ಲಾ ಕಡೆ ಇದರ ಶಾಖೆಯು ಹರಡುವುದು ಹಾಗೂ ಒಂದು ದೊಡ್ಡ ಮರವಾಗುವುದು. ಅಲ್ಲಾಹನ ಈ ಮಾತುಗಳಲ್ಲಿ ವಿಶ್ವಾಸವನ್ನಿಟ್ಟವನು ನಿಜವಾಗಿ ಭಾಗ್ಯಶಾಲಿ. ಈ ನಡುವೆ ಬರುವ ಕಷ್ಟ ಕಾರ್ಪಣ್ಯಗಳಿಗೆ ಹೆದರಬೇಡಿ. ಯಾಕೆಂದರೆ ಈ ಕಷ್ಟ ಕಾರ್ಪಣ್ಯಗಳು ಬರುವುದು ಆವಶ್ಯಕವಾಗಿರುತ್ತದೆ. ಇದರಿಂದ ಈ ಹಾದಿಯಲ್ಲಿ ಯಾರು ಸತ್ಯವಂತನು, ಯಾರು ಸುಳ್ಳುಗಾರನು ಎಂಬುದು ಈ ಪರೀಕ್ಷೆಯಿಂದ ಸ್ಪಷ್ಟವಾಗುತ್ತದೆ. ಯಾರು ಈ ಪರೀಕ್ಷೆಯಲ್ಲಿ ಎಡವುತ್ತಾನೋ ಅವನಿಂದ ಅಲ್ಲಾಹನಿಗೆ ನಷ್ಟವೇನಿಲ್ಲ. ದೌರ್ಭಾಗ್ಯ ಅವನನ್ನು ನರಕಕ್ಕೆ ಕೊಂಡುಹೋಗುವುದು. ಅವನು ಹುಟ್ಟದೆ ಇರುತ್ತಿದ್ದರೆ ಒಳ್ಳೆದಿರುತ್ತಿತ್ತು. ಆದರೆ ಆ ಎಲ್ಲಾ ಜನರು ಯಾರು ಕೊನೆಯವರೆಗೆ ತಾಳ್ಮೆವಹಿಸುತ್ತಾರೋ ಅವರ ಮೇಲೆ ಕಷ್ಟಗಳ ಭೂಕಂಪವೇ ಬಂದರೂ ಅನಾಹುತಗಳ ಬಿರುಗಾಳಿಯೇ ಬೀಸಿದರೂ ಸಮುದಾಯಗಳು ಹಾಸ್ಯ ಕುಚೇಷ್ಟೆಗೆ ಗುರಿಪಡಿಸಿದರೂ ಹಾಗೂ ಪ್ರಪಂಚವು ಅಸಹ್ಯವಾಗಿ ವರ್ತಿಸಿದರೂ ಕೊನೆಯಲ್ಲಿ ಅವರೇ ಜಯಶಾಲಿಯಾಗುವರು ಮತ್ತು ಅನುಗ್ರಹಗಳ ಬಾಗಿಲುಗಳು ಅವರಿಗಾಗಿ ತೆರೆಯಲ್ಪಡುವುವು."

ಅಲ್ಲಾಹು ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಪೇಕ್ಷೆ ಅನುಸಾರ ವರ್ತಿಸಲು ಸೌಭಾಗ್ಯ ನೀಡಲಿ. ಅವನು ನಮಗೆ ವಿಧಿಸಿದ ವಿಜಯಗಳನ್ನು ನಾವು ಕಾಣುವಂತಾಗಲಿ. ಆಮೀನ್. ★

# ಉಗ್ರರ ಹಾದಿ ಇಸ್ಲಾಂ ಧರ್ಮವಲ್ಲ

*ಕೆ. ಎಂ. ಉಮರ್, ಮಡಿಕೇರಿ*

ಖಾತಮುನ್ನಬಿಯ ಶಿಷ್ಯನಬಿ
ಖಾದಿಯಾನ್ ನಾಡಲಿ ಜನಿಸಿದರು
ಕಾತುರದಿಂದಲಿ ಧಾವಿಸಿ ಬನ್ನಿರಿ
ಕಾದಿದೆ ವಿಜಯವು ಎಲ್ಲರಿಗೂ

ಖಡ್ಗದ ಕಾಲವು ಕಳೆದ್ಹೋಯ್ತು
ಕಲ್ಕಿಯ ಕಾಲವು ಬಂದ್ಹೋಯ್ತು
ಉಗ್ರರ ಹಾದಿಯು ದೀನಲ್ಲ
ಉತ್ತಮ ಶಿಷ್ಯರು ಅವರಲ್ಲ

ಮುಹಮ್ಮದ್ ನಬಿಯ ಪ್ರವಾದನ
ಮಾನವ ವಂಶಕೆ ಸಮಾಧಾನ
ಮಾನವರಾಗುವ ನಾವೆಲ್ಲಾ
ಮಾಯವಾಗಲೀ ಕೆಡುಕೆಲ್ಲಾ

ಒಳಿತಿನ ಕಡೆಗೆ ಧಾವಿಸುವಾ
ಕೆಡುಕನು ದೂರಕೆ ಓಡಿಸುವಾ
ಶಾಂತಿಯ ಮಾರ್ಗದಿ ಮುನ್ನಡೆದು
ಸಾರುವ ಮನುಕುಲ ಒಂದೆಂದು

ಅಹ್ಮದುಲ್ ಖಾದಿಯಾನ್ ಸಾರಿದರು
ಪವಿತ್ರ ಖುರ್‌ಆನ್ ತೋರಿದರು
ಜಿಹಾದ್ ಎಂದರೆ ತಾಳ್ಮೆಯಲಿ
ಜೀವನ ಸಾಧಿಸು ಭುವಿಯಲ್ಲಿ

ಸರ್ವಾಧಿನಾಥನು ಹೇಳಿದನು
ಸತ್ಯವ ಸಾರಿದ ಮಹ್‌ದಿಯಲಿ
ಲೋಕದ ಎಲ್ಲೆಡೆ ಹರಡುವೆನು
ಲೋಕಕೆ ಈ ಸಂದೇಶವನು

ಮಹ್‌ದಿ ಮಸೀಹರ ಆಗಮನ
ಮುಹಮ್ಮದ್ ನಬಿಯ ನುಡಿವಚನ
ಪೂರ್ತಿಯಾಗಿದೆ ಮಹ್‌ದಿಯರ
ದೌತ್ಯವು ಲೋಕದ ಎಲ್ಲೆಡೆಯೂ

ಪಾಕಿಸ್ಥಾನದಿ ಸಜ್ಜನರಾ
ಕಗ್ಗೊಲೆ ನೀವು ಮಾಡಿದಿರಾ?
ನಾಶವಾಗದು ಭುವಿಯಲ್ಲಿ
ಪಾವನ ದೀನಿಸ್ಲಾಮಿಲ್ಲಿ

ಪಾಕಿಸ್ಥಾನದ ಕ್ರೂರತೆಯೂ
ಪಾವನ ಇಸ್ಲಾಂ ದೀನಲ್ಲ
ಲಾಡನ್ ಮೌದೂದಿ ಸಿದ್ಧಾಂತ
ನಾಶವು ಮನುಜಗೆ ಕೊನೆ ತನಕ

ಪಾಕಿಸ್ಥಾನವ ನೀವಿಂದು
ಕಬರಸ್ಥಾನವ ಮಾಡಿದಿರಿ
ಪಾವನ ದೀನಿಸ್ಲಾಮನ್ನು
ಉಗ್ರರ ಗುಂಪಲಿ ದೂಡಿದಿರಿ

ಮಹ್‌ದಿ ಮಸೀಹರ ಶಿಷ್ಯರನು
ನಡುಬೀದಿಯಲಿ ಕಲ್ಹೊಡೆದು
ಕಗ್ಗೊಲೆ ಮಾಡಿದ ಅಫ್‌ಘಾನಿ
ಸ್ಥಾನದ ಗತಿ ಇಂದೇನಾಯ್ತು?

ಮಕ್ಕಾ ನಗರದ ಫೈಝಲ್ ರಾಜ
ಪಾಕಿಸ್ಥಾನದ ಪೀಪಲ್ಸ್ ಭುಟ್ಟೊ
ನಂತರ ಬಂದಾ ಝಿಯಾವುಲ್ ಹಖ್
ಇವರೆಲ್ಲರ ಗತಿ ಇಂದೇನಾಯ್ತು?

ಪವಿತ್ರ ಖುರ್‌ಆನ್ ವಿವರಿಸಿದ
ಉತ್ತಮ ಶಿಷ್ಯರು ಇಂದೆಲ್ಲಿ?
ನಾಯಕನಿಲ್ಲದೆ ಮುಸ್ಲಿಮರು
ನಾಶದ ಸುಳಿಯಲಿ ಸಿಲುಕಿಹರು

ಪ್ರವಾದಿ ಗಣ್ಯರು ಕೊಂದಿಲ್ಲ
ಮಾನವರಲ್ಲಿ ಒಬ್ಬರನೂ
ಕ್ರೂರತೆ ಅವರಲಿ ತೋರಿಸಿದ
ಜನರಿಗೆ ಕ್ಷಮೆಯನು ನೀಡಿದರು

ಯೋಚಿಸಿ ಮುಸ್ಲಿಂ ಸೋದರರೇ
ಯಾತಕೆ ಬೇಕೀ ಕ್ರೂರತೆಯೂ
ವಿಜಯವು ಲಭಿಸಿತೆ ನಿಮಗಿಂದು
ವಿಜಯವು ಲಭಿಸದು ಮುಂದೆಂದೂ

ಪಶ್ಚಾತ್ತಾಪವ ಕೈಗೊಂಡು
ಪಾವನರಾಗಿರಿ ನೀವಿಂದು
ಉಗ್ರರ ಹಾದಿಯ ಕೈಬಿಟ್ಟು
ಉತ್ತಮರಾಗುವ ಒಳಗುಟ್ಟು

ಮಹ್‌ದಿ ಇಮಾಮರ ಶಿಷ್ಯರಲಿ
ಮಹತ್ವದ ಖಿಲಾಫತ್ ಜಾರಿಯಿದೆ
ಸೂರತುನ್ನೂರಿನ ವಚನಕ್ಕೆ
ಅರ್ಹರು ಮಹ್‌ದಿಯ ಶಿಷ್ಯಗಣ

★


## ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಪ್ರೊ। ಅಬ್ದುಸ್ಸಲಾಮ್‌ರನ್ನು ಸ್ಮರಿಸುತ್ತಾರೆ....



ಹೈದರಾಬಾದ್ : ಅಕ್ಟೋಬರ್ 19. ಪ್ರಧಾನ ಮಂತ್ರಿ ಡಾ। ಮನಮೋಹನ್ ಸಿಂಗ್ ನೊಬೆಲ್ ಪ್ರಶಸ್ತಿ ಪಡೆದ ಪ್ರೊಫೆಸರ್ ಅಬ್ದುಸ್ಸಲಾಮ್‌ರಿಗೆ ಆದರಾಂಜಲಿ ಅರ್ಪಿಸಿ, ತಾನು ಅಬ್ದುಸ್ಸಲಾಮ್‌ರೊಂದಿಗೆ ಕಳೆದ ಕ್ಯಾಂಬ್ರಿಜ್ ದಿನಗಳನ್ನು ಸ್ಮರಿಸಿದರು. ಅವರು 'ದ ಅಕಾಡೆಮಿ ಆಫ್ ಸಯನ್ಸ್ ಫೋರ್ ಡೆವಲೆಪಿಂಗ್ ವರ್ಲ್ಡ್'ನ 21ನೇ ಜನರಲ್ ಮೀಟಿಂಗ್ ಉದ್ಘಾಟಿಸುತ್ತಿದ್ದರು. ಥರ್ಡ್ ವರ್ಲ್ಡ್ ಅಕಾಡೆಮಿ ಆಫ್ ಸಯನ್ಸ್ ಎಂಬ ನಾಮದಲ್ಲಿ ಆರಂಭಿಸಿದ ಈ ಅಂತರ್ರಾಷ್ಟ್ರೀಯ ಸಂಸ್ಥೆಯ ಸ್ಥಾಪಕ ಪ್ರೊ ಅಬ್ದುಸ್ಸಲಾಮ್ ಆಗಿದ್ದರು. ಅಬ್ದುಸ್ಸಲಾಮ್ ಅತ್ಯುಜ್ವಲ ಭಾವನಾ ಸಂಪನ್ನರಾಗಿದ್ದರೆಂದು ಪ್ರಧಾನ ಮಂತ್ರಿ ಸ್ಮರಿಸಿದರು.

ಮಾನವ ನಾಗರಿಕತೆಯ ಮುನ್ನಡೆಯ ಗತಿಯಲ್ಲಿ ಮೂರನೇ ಲೋಕ ದೇಶಗಳ ವಿಜ್ಞಾನಿಗಳು ಐಕ್ಯದಿಂದ ವರ್ತಿಸಬೇಕಾದ ಆವಶ್ಯಕತೆಯ ಸಂಬಂಧಿಸಿ ಪ್ರೊ ಅಬ್ದುಸ್ಸಲಾಮ್‌ರಿಗೆ ಸ್ಪಷ್ಟವಾದ ನಿಲುವು ಮತ್ತು ಆ ವಿಜ್ಞಾನಿಗಳ ಸಾಮರ್ಥ್ಯದಲ್ಲಿ ಅಗಾಧ ಭರವಸೆಯಿತ್ತು. ಇದು 1983ರಲ್ಲಿ ಥರ್ಡ್ ವರ್ಲ್ಡ್ ಅಕಾಡೆಮಿ ಆಫ್ ಸಯನ್ಸ್ ಸ್ಥಾಪಿಸಲಿಕ್ಕೆ ಅಬ್ದುಸ್ಸಲಾಮ್‌ರಿಗೆ ಪ್ರಚೋದನೆ ನೀಡಿತ್ತೆಂದು ಪ್ರಧಾನ ಮಂತ್ರಿ ಹೇಳಿದರು.

1950 ಮೊದಲ್ಗೊಂಡು ಅಬ್ದುಸ್ಸಲಾಮ್‌ರನ್ನು ಸಮೀಪದಿಂದ ತಿಳಿಯುವ ಭಾಗ್ಯ ನನಗೆ ಲಭಿಸಿತು. ಕ್ಯಾಂಬ್ರಿಜ್‌ನಲ್ಲಿ ಸೈಂಟ್ ಜಾನ್ಸ್ ಕಾಲೇಜ್‌ನಲ್ಲಿ ನಾನು ಆಗ ಬಿರುದು ವಿದ್ಯಾರ್ಥಿ ಆಗಿದ್ದೆ. ಪ್ರೊ ಸಲಾಂ ಸೈಂಟ್ ಜಾನ್ಸ್ ಕಾಲೇಜಿನ ಫೆಲೋ ಆಗಿದ್ದರು. ನಂತರ ತಾನ್‌ಝಾನಿಯದ ಅಧ್ಯಕ್ಷರಾಗಿದ್ದ ಪ್ರೊ ಜೂಲಿಯಸ್ ನರೇರ ಮುಖ್ಯಸ್ಥರಾಗಿದ್ದ ಸೌತ್ ಕಮಿಷನ್ ರಿಪೋರ್ಟ್‌ನ ಚಟುವಟಿಕೆಗಳಿಗೋಸ್ಕರ ನಾವು ಒಟ್ಟಿಗೆ ಕಾರ್ಯಶೀಲರಾಗಿದ್ದೆವೆಂದು ಮನಮೋಹನ್ ಸಿಂಗ್ ಸ್ಮರಿಸಿದರು.



ಈ ಅವಶ್ಯಾರ್ಥ ಅನೇಕ ಸಲ ನಾನು ಅಬ್ದುಸ್ಸಲಾಮ್‌ರನ್ನು ಭೇಟಿಯಾಗಿದ್ದೆ. ಅವರ ಅಗಾಧ ವಿವೇಕ ಮತ್ತು ಅತಿ ವಿಪುಲ ಜ್ಞಾನ ವಾಸ್ತವಿಕವಾಗಿ ಅಸಾಧಾರಣವಾಗಿತ್ತು. ಈ ಮಹಾ ನಾಯಕನಿಗೆ ನಾನು ನನ್ನ ವಿನೀತವಾದ ಆದರಾಂಜಲಿಗಳನ್ನು ಅರ್ಪಿಸುತ್ತೇನೆ. ನಮಗೆಲ್ಲ ಪ್ರಯೋಜನ ಪಡೆಯಲು ಸಾಧ್ಯವಾಗಿರುವ ಸಹಕಾರ ಮತ್ತು ಸಹಭಾಗಿತ್ವದ ಪಥವನ್ನು ಅವರೇ ನಮಗೆ ತೋರಿಸಿಕೊಟ್ಟಿದ್ದಾರೆ. 1943ರಲ್ಲಿ ವಿನ್‌ಸ್ಟನ್ ಚರ್ಚಿಲ್ ಹಾರ್ಡ್‌ವಾರ್ಡ್ ವಿಶ್ವವಿದ್ಯಾಲಯದಲ್ಲಿ ಹೇಳಿದರು: "ಭಾವಿಕಾಲದ ಸಾಮ್ರಾಜ್ಯ ಮನಸ್ಸುಗಳ ಸಾಮ್ರಾಜ್ಯವಾಗಿದೆ." ಚರ್ಚಿಲ್‌ರವರ ಈ ಭವಿಷ್ಯನುಡಿಯನ್ನು ಅಬ್ದುಸ್ಸಲಾಮ್‌ರಿಗಿಂತ ಚೆನ್ನಾಗಿ ಗ್ರಹಿಸಿದವರಿರಲಿಲ್ಲ. ಅವರು ಈ ತಲೆಮಾರಿನ ಅತ್ಯಂತ ಅಸಾಮಾನ್ಯವಾದ ವಿಜ್ಞಾನ ಪ್ರತಿಭೆಯಾಗಿದ್ದರು. ವೈಜ್ಞಾನಿಕ ಸಾಮ್ರಾಜ್ಯವನ್ನು ಕಟ್ಟಲು ಸಲಾಮ್‌ರಂಥ ಅನೇಕ ಸ್ತ್ರೀ – ಪುರುಷರು ನಮಗೆ ಬೇಕಾಗಿದ್ದಾರೆ ಎಂದು ಪ್ರಧಾನ ಮಂತ್ರಿ ಹೇಳಿದರು.

**(Yahoo India News: "Manmohan Singh pays tridbutes to Pakistani Scientist Abdul Salam")**

** 1979ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದ ಪ್ರೊ ಅಬ್ದುಸ್ಸಲಾಮ್ ಲೋಕ ಪ್ರಸಿದ್ಧ ವಿಜ್ಞಾನಿ ಹಾಗೂ ನಿಷ್ಠಾವಂತ ಅಹ್ಮದಿಯಾಗಿದ್ದರು.*

*– ಸಂಪಾದಕ.*

Registered with the Registrar of Newspapers for India No. R.N. 27354/75
Yugarashmi Kannada Quarterly, December - 2010. Price : Rs. 10/-

## ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

Muslim TV AHMADIYYA International

## ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**Broadcasting Round the clock**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.50 EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-MAIL : INFO@ALISLAM.ORG WEBSITE : HTTP:WWW.ALISLAM.ORG/MTA.TV




ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ

## ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**

### ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001